ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜುಲೈ 31 ಗುರುವಾರ 2025

₹4

ಸಂಪುಟ: 46 | ಸಂಚಿಕೆ: 105 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಅನಂತ್ ಕಾರ್ಸ್‌ನ ನೂತನ ಶೋ ರೂಂ ಉದ್ಘಾಟನೆ



ಮೈಸೂರಿನ ಟಿ.ನರಸೀಪುರ ರಸ್ತೆಯಲ್ಲಿ ಅನಂತ್ ಕಾರ್ಸ್‌ನ ನೂತನ ಮಹೀಂದ್ರ ಶೋ ರೂಂ ಅನ್ನು ಇತ್ತೀಚೆಗೆ ಉದ್ಘಾಟಿಸಲಾಯಿತು. ಈ ವೇಳೆ ಮೈಸೂರು-ಕೊಡಗು ಸಂಸದ ಯದುವೀರ್ ಒಡೆಯರ್, ಮಹಿಂದ್ರ ಅಂಡ್ ಮಹಿಂದ್ರದ ಬಾನೇಶ್ವರ್ ಬ್ಯಾನರ್ಜಿ, ಉಪಾಧ್ಯಕ್ಷ ಮತ್ತು ನ್ಯಾಷನಲ್ ಸೇಲ್ಸ್ ಹೆಡ್, ಸಚಿನ್ ಗುಪ್ತಾ, ಉಪಾಧ್ಯಕ್ಷ (ಕಸ್ಟಮರ್ ಕೇರ್), ಅರುನಾಗ್ಸು ರಾಯ್, ಜೋನಲ್ ಹೆಡ್ ಸೇಲ್ಸ್ (ಸೌತ್), ಪ್ರತ್ಯುಶ್ ಬೋಸ್, ಜೋನಲ್ ಹೆಡ್ ಸರ್ವೀಸ್ (ಸೌತ್), ಮತ್ತು ಸಿ. ಭಾಸ್ಕರ್, ಸಿಇಓ, ಅನಂತ್ ಕಾರ್ಸ್, ಬಸಂತ್ ಪಾಟೀಲ್, ಅನಂತ್ ಕಾರ್ಸ್ ಅಂಡ್ ಟೀಂನ ಸೀನಿಯರ್ ವೈಸ್ ಪ್ರೆಸಿಡೆಂಟ್ (ಸೇಲ್ಸ್ ಅಂಡ್ ಸರ್ವೀಸ್) ಉಪಸ್ಥಿತರಿದ್ದರು.

ನಿಧನ

ಕರ್ನಾಟಕ ರಾಜ್ಯ ಮುಕ್ತ ವಿವಿ ವಿಶ್ರಾಂತ ಕುಲಸಚಿವ ಡಾ.ಜಿ.ರಾಮರತನ್ ನಿಧನ



ಮೈಸೂರು,ಜು.30-ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಸಚಿವರು (ಮೌಲ್ಯಮಾಪನ) ಮತ್ತು ಇತಿಹಾಸ ಅಧ್ಯಯನ ವಿಭಾಗದ ಮುಖ್ಯಸ್ಥರು ಹಾಗೂ ಮೈಸೂರಿನ ವಿಜಯ ನಗರ 2ನೇ ಹಂತದ ನಿವಾಸಿ ಡಾ.ಜಿ.ರಾಮರತನ್ (76) ಬುಧವಾರ ಬೆಳಗ್ಗೆ ನಿಧನರಾದರು. ಶ್ರೀಯುತರು ಪತ್ನಿ, ಓರ್ವ ಪುತ್ರ, ಪುತ್ರಿ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಘು



ನಂಜನಗೂಡಿನ 8ನೇ ಕ್ರಾಸ್, ಆರ್.ಪಿ.ರಸ್ತೆ ನಿವಾಸಿ ರಘು (45) ಬುಧವಾರ ಬೆಳಗ್ಗೆ ಅನಾರೋಗ್ಯದಿಂದ ನಿಧನರಾದರು. ಮೃತರು ಇಬ್ಬರು ಸಹೋದರಿಯರು ಸೇರಿದಂತೆ ಅಪಾರ ಬಂಧು-ವರ್ಗ ಅಗಲಿದ್ದಾರೆ. ಇವರು ರಾಷ್ಟ್ರೀಯ ಸ್ವಯಂ ಸೇವಾ ಸಂಘದ ನಂಜನಗೂಡು ತಾಲೂಕಿನ ಕಾರ್ಯವಾಹಕ್ ಆಗಿ ಹಲವಾರು ವರ್ಷ ಸೇವೆ ಸಲ್ಲಿಸಿ ಹಿಂದುತ್ವ ಹಾಗೂ ರಾಷ್ಟ್ರೀಯ ವಿಚಾರದಲ್ಲಿ ಸದಾ ಕಾರ್ಯ ಪ್ರವೃತ್ತರಾಗಿದ್ದರು. ನಂಜನಗೂಡಿನ ಪರಶುರಾಮ ಗುಡಿ ಬಳಿಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಾದಾ ಪೀರ್



ಮೈಸೂರಿನ ರಾಜೇಂದ್ರನಗರ (ಕೆಸರೆ) ನಿವಾಸಿ ಹಾಗೂ ವಿಕ್ರಾಂತ್ ಎಂಪ್ಲಾಯೀಸ್ ಯೂನಿಯನ್ ಮುಖಂಡರಾದ ದಾದಾ ಪೀರ್ (56) ಬುಧವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರಿಯರು, ಮೂವರು ಸಹೋದರರು, ಮೂವರು ಸಹೋದರಿಯರು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಈ ಸಂಬಂಧ ಕೆಸರೆ ಮಸೀದಿ ಫಾರೂಖಿಯಾದಲ್ಲಿ ನಮಾಜ್-ಎ-ಜನಾಜ಼ ನಡೆದು ನಂತರ ಮೈಸೂರಿನ ಟಿಪ್ಪು ಸರ್ಕಲ್, ಮೈಸೂರು-ಬೆಂಗಳೂರು ಹೈವೇ ಬಳಿ ಇರುವ ಮುಸ್ಲಿಮರ ರುದ್ರಭೂಮಿ ಗೇಟ್ ನಂ.8ರಲ್ಲಿ ಮೃತರ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮನುಷ್ಯ ಮನುಷ್ಯನನ್ನೇ ಕಳ್ಳ ಸಾಗಾಣೆ ಮಾಡುವ ಹೀನ ಸ್ಥಿತಿ

- ಮೈಸೂರಲ್ಲಿ ನಡೆದ 'ಮಾನವ ಕಳ್ಳ ಸಾಗಾಣಿಕೆ' ದಿನಾಚರಣೆಯಲ್ಲಿ ನ್ಯಾಯಾಧೀಶ ಅಮರ್‌ನಾಥ್ ವಿಷಾದ
- ಇದೊಂದು ಗುಲಾಮಗಿರಿಯ ರೂಪವೇ

ಮೈಸೂರು, ಜು.30(ಎಂಕೆ)-ಆಧುನಿಕ ಕಾಲದ ಗುಲಾಮಗಿರಿಯ ಒಂದು ರೂಪವೇ ಮಾನವ ಕಳ್ಳ ಸಾಗಾಣಿಕೆಯಾಗಿದ್ದು, ವಿದ್ಯೆಯ ಕೊರತೆಯಿಂದ ಹೆಚ್ಚಾಗುತ್ತಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಕೆ.ಅಮರ್‌ನಾಥ್ ಹೇಳಿದರು.

ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ, ಮಕ್ಕಳ ಕಲ್ಯಾಣ ಸಮಿತಿ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ಆಯೋಜಿಸಿದ್ದ 'ಮಾನವ ಕಳ್ಳ ಸಾಗಾಣಿಕೆ' ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೊದಲೆಲ್ಲಾ ಬೆಳಗ್ಗೆ ಎದ್ದು ದಿನಪತ್ರಿಕೆ ನೋಡಿದರೆ 5 ಜನ ಅಡಿಕೆ ಕಳ್ಳರ ಅಥವಾ 10 ಜನ ಕರಿಮೆಣಸು ಕಳ್ಳರ ಬಂಧನ ಎಂಬ ಸುದ್ದಿ ಇರುತ್ತಿತ್ತು. ಕೆಲ ವರ್ಷಗಳು ಕಳೆದಂತೆ ಪಕ್ಕದ ಮನೆಯ ವಾಹನ ಕಳ್ಳತನ ಎಂದು ಸುದ್ದಿ ಬರಲು ಸ್ಟಾರ್ಟ್ ಆಯ್ತು. ಇನ್ನೂ ಒಂದಷ್ಟು ದಿನಗಳು ಕಳೆದ ಮೇಲೆ ಮನುಷ್ಯರಿಂದ ಪ್ರಾಣಿಗಳ ಕಳ್ಳತನ, ಅಂತರರಾಜ್ಯ ಕಳ್ಳರ ಬಂಧನ, ವಿದೇಶಿ ಕಳ್ಳರ ಬಂಧನ ಎನ್ನುತ್ತಾ ಅಡಿಕೆಯಿಂದ ಮನುಷ್ಯ, ಮನುಷ್ಯನನ್ನೇ ಕಳ್ಳತನ ಮಾಡುತ್ತಿರುವ ದಿನಕ್ಕೆ ನಾವಿಂದು ಬಂದಿದ್ದೇವೆ ಎಂದು ವಿಷಾದಿಸಿದರು.



ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ 'ಮಾನವ ಕಳ್ಳ ಸಾಗಾಣಿಕೆ' ದಿನಾಚರಣೆ ಕಾರ್ಯಕ್ರಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಕೆ.ಅಮರ್‌ನಾಥ್ ಉದ್ಘಾಟಿಸಿದರು.

ಜೀವಾವಧಿ ಶಿಕ್ಷೆ: ಬಿಎನ್‌ಎಸ್(ಭಾರತೀಯ ನ್ಯಾಯ ಸಂಹಿತೆ) 143ನೇ ಸೆಕ್ಷನ್ ಪ್ರಕಾರ ಮಾನವ ಕಳ್ಳ ಸಾಗಾಣಿಕೆಯಲ್ಲಿ ಭಾಗಿಯಾದವರಿಗೆ 7-10 ವರ್ಷದವರೆಗೆ ಕಾರಾಗೃಹ ಶಿಕ್ಷೆ. ಒಂದಕ್ಕಿಂತ ಹೆಚ್ಚು ಜನರನ್ನು ಕಳ್ಳ ಸಾಗಾಣಿಕೆ ಮಾಡಿದರೆ, 10 ವರ್ಷಕ್ಕೆ ಕಡಿಮೆ ಇಲ್ಲದೆ ಜೀವಾವಧಿ ಶಿಕ್ಷೆ ವಿಧಿಸಲಾಗುವುದು. ಮಕ್ಕಳ ಕಳ್ಳ ಸಾಗಾಣಿಕೆ ಮಾಡಿದರೆ, 14 ವರ್ಷದಿಂದ ಜೀವಾವಧಿ ಶಿಕ್ಷೆ ವಿಧಿಸಲಾಗುವುದು ಎಂದರು.

3ನೇ ಅತೀ ದೊಡ್ಡ ಆದಾಯ!: ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಿ.ಮಲ್ಲಿಕ್ ಮಾತನಾಡಿ, ಮಾನವ ಕಳ್ಳ ಸಾಗಾಣಿಕೆ ಪ್ರಪಂಚದಲ್ಲಿ ಮೂರನೇ ಅತೀ ದೊಡ್ಡ ಆದಾಯ ತರುವ ಸಾಗಾಣಿಕೆಯಾಗಿದ್ದು, ಇದರ ವಿರುದ್ಧ ನಾವೆಲ್ಲಾ ಸಂಘಟಿತರಾಗಿ ಕೆಲಸ ಮಾಡಬೇಕಿದೆ. ಭಾರತ ಸಂವಿಧಾನದ ಆರ್ಟಿಕಲ್ 23ರ ಪ್ರಕಾರ ಮಾನವ ಕಳ್ಳ ಸಾಗಾಣಿಕೆ ನಿಷೇಧ ಮಾಡಲಾಗಿದ್ದು, ಅದರನ್ವಯ ನಾವೆಲ್ಲಾ ಕೆಲಸ ಮಾಡಬೇಕಿದೆ ಎಂದು ಹೇಳಿದರು.

ಸಾಮಾನ್ಯವಾಗಿ ವ್ಯಕ್ತಿಯೋರ್ವ ಪ್ರಯಾಣ ಮಾಡಿದರೆ, ಅದನ್ನು ಪ್ರಯಾಣ ಎನ್ನುತ್ತೇವೆ. ಆದರೆ, ಅದೇ ವ್ಯಕ್ತಿ ಬೇರೆಯವರ ಹಿಡಿತದಲ್ಲಿ ಅಕ್ರಮವಾಗಿ ಆತನ ಇಚ್ಛೆಗೆ ವಿರುದ್ಧವಾಗಿ ಪ್ರಯಾಣ ಮಾಡುತ್ತಿದ್ದರೆ ಅದನ್ನು ಮಾನವ ಕಳ್ಳ ಸಾಗಾಣಿಕೆ ಎನ್ನಲಾಗುತ್ತದೆ ಎಂದರು.

ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ, ಎಎಸ್‌ಪಿ ನಾಗೇಶ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಸ್.ಟಿ.ಜವರೇಗೌಡ, ಜಿಪಂ ಉಪಕಾರ್ಯದರ್ಶಿ ಕೃಷ್ಣಂರಾಜು, ಮಹಿಳಾ-ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಿ.ಬಸವರಾಜು ಮತ್ತಿತರರಿದ್ದರು.

ಸಹಾಯವಾಣಿ...!

ಮಾನವ ಕಳ್ಳ ಸಾಗಾಣಿಕೆ ಕಂಡುಬಂದಲ್ಲಿ ಕೂಡಲೇ ಕಾರ್ಮಿಕ ಸಹಾಯವಾಣಿ 155214, ಮಾನವ ಹಕ್ಕುಗಳ ಆಯೋಗ-1800425 23333, ಮಕ್ಕಳ ಆಯೋಗ-1098, ತುರ್ತು ಸ್ಪಂದನ-112(ಪೊಲೀಸ್), ಮಹಿಳಾ ಆಯೋಗ-181ಗೆ ಸಂಪರ್ಕಿಸಬಹುದು.

ವರಮಹಾಲಕ್ಷ್ಮಿ ಪ್ರಯುಕ್ತ ಸಿಲ್ಕ್ ಇಂಡಿಯಾ ಮೇಳ

ಮೈಸೂರು,ಜು.30(ಜಿಎ)-ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಅಭಿವೃದ್ಧಿ ಸಂಸ್ಥೆ ವತಿಯಿಂದ 11 ದಿನಗಳ ಸಿಲ್ಕ್ ಇಂಡಿಯಾ ಮೇಳ ಆಯೋಜಿಸಲಾಗಿದೆ. ಅಭಿವೃದ್ಧಿ ಸಂಸ್ಥೆಯು ಭಾರತದಲ್ಲಿರುವ ಕುಶಲಕರ್ಮಿಗಳು ಮತ್ತು ನೇಕಾರರ ಶ್ರೇಯೋಭಿವೃದ್ಧಿಗಾಗಿ ಮೈಸೂರಿನಲ್ಲಿ ಸ್ಥಾಪಿಸಲಾಗಿದ್ದು, ನೇಕಾರರು ಮತ್ತು ಕುಶಲಕರ್ಮಿಗಳು ಉತ್ಪಾದಿಸುವ ಉತ್ಪನ್ನಗಳಿಗೆ ದೇಶದ ಮುಖ್ಯ ನಗರಗಳಲ್ಲಿ ಮಾರಾಟ ಮೇಳವನ್ನು ಆಯೋಜಿಸುವ ಮೂಲಕ ನೇರವಾಗಿ ಅವರ ಉತ್ಪನ್ನಗಳು ಗ್ರಾಹಕರಿಗೆ ತಲುಪಿಸುವಂತೆ ವ್ಯವಸ್ಥೆ ಮಾಡುವುದು ಮತ್ತು ಮಧ್ಯವರ್ತಿಗಳ ಹಾವಳಿಯಿಲ್ಲದೆ ನೇಕಾರರೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಿ ಲಾಭವನ್ನು ಹೆಚ್ಚು ಗಳಿಸುವಂತೆ ಮಾಡುವ ಉದ್ದೇಶವನ್ನು ಸಂಸ್ಥೆಯು ಹೊಂದಿದೆ.

ಮೈಸೂರಿನಲ್ಲಿ ವರಮಹಾಲಕ್ಷ್ಮಿ ಹಬ್ಬವನ್ನು ಗಮನದಲ್ಲಿಟ್ಟುಕೊಂಡು 'ಸಿಲ್ಕ್ ಇಂಡಿಯಾ' ಮೇಳವನ್ನು ಜು.25ರಿಂದ ಆಗಸ್ಟ್ 4ರವರೆಗೆ 11 ದಿವಸಗಳ ಕಾಲ ಹಮ್ಮಿಕೊಳ್ಳಲಾಗಿದೆ.

ಈ ಮೇಳದಲ್ಲಿ ಕಾಶ್ಮೀರದಿಂದ ಕಾಂಚಿಪುರಂವರೆಗಿನ ರೇಷ್ಮೆ ಸೀರೆ ಉತ್ಪಾದಕರು, ರೇಷ್ಮೆ ಸೀರೆ ವಿನ್ಯಾಸಗಾರರು ಮತ್ತು ರೇಷ್ಮೆ ಸಹಕಾರ ಸಂಘಗಳು 60 ಕ್ಕೂ ಹೆಚ್ಚಿನ ಮಳಿಗೆಗಳಲ್ಲಿ ತಮ್ಮ ರಾಜ್ಯದ ಸಾಂಪ್ರದಾಯಿಕ ರೇಷ್ಮೆ ಸೀರೆ ಮತ್ತು ಉತ್ಪನ್ನಗಳನ್ನು ಪ್ರದರ್ಶಿಸಿ ಮಾರಾಟ ಮಾಡುವರು.

ಮೇಳದಲ್ಲಿ ತಸ್ಸರ್ ರೇಷ್ಮೆ ಸೀರೆಗಳು, ಕ್ರೇಪ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ರೇಷ್ಮೆ ಸೀರೆಗಳು, ಧರ್ಮಾವರಂ ಸೀರೆಗಳು, ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು, ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು, ಕಲ್ಕೊತ್ತಾ ಗಣಪತಿ ಸೀರೆಗಳು, ಢಾಕ ಸೀರೆಗಳು, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್, ಬಲ್ಲೂಚಿ ರೇಷ್ಮೆ, ಮಟ್ಕಾ ಸೀರೆಗಳು, ಪ್ರಿಂಟೆಡ್ ಸೀರೆಗಳು, ಪಶ್ಮೀನಾ ಸೀರೆಗಳು, ಡಿಸೈನರ್ ಡ್ರೆಸ್ ಮೆಟಿರಿಯಲ್ಸ್‌ಗಳು ಮತ್ತು ಸೀರೆಗಳು, ಬಾಗಲ್ಪುರ್ ರೇಷ್ಮೆ ಸೀರೆ ಮತ್ತು ಡ್ರೆಸ್, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಹೇಶ್ವರಿ ಮತ್ತು ಕೋಟಾ ಸಿಲ್ಕ್, ಟೆಂಪಲ್ ಬಾರ್ಡರ್‌ಉಳ್ಳ ಮುಲ್ಬಾರಿ ಸಿಲ್ಕ್, ಕಲ್ಕೋತ್ತಾ ರೇಷ್ಮೆ ಸೀರೆಗಳು, ಬನಾರಸ್ ಮತ್ತು ಜಮ್ದಾನಿ ರೇಷ್ಮೆ, ಶಿಫಾನ್ ಸೀರೆಗಳು, ಬುಟ್ಟಿ ಸೀರೆಗಳು, ಚಂದೇರಿ ಸಿಲ್ಕ್ ಮತ್ತು ಕೈ ಅಚ್ಚಿನ ಸೀರೆಗಳು ಪ್ರದರ್ಶನಗೊಳ್ಳಲಿವೆ. ಇದಲ್ಲದೆ ಕುರ್ತಾ, ಸ್ಟೋಲ್ಸ್, ಶಾಲುಗಳು, ಸಲ್ವಾರ್ ಕಮೀಜ್ ಮತ್ತು ಉಡುಪಿನ ಬಟ್ಟೆಗಳು, ಕುಶನ್ ಕವರ್‌ಗಳು ಮತ್ತು ಬೆಡ್‌ಶೀಟ್‌ಗಳನ್ನು ಈ ವಸ್ತು ಪ್ರದರ್ಶನದಲ್ಲಿ ಪ್ರದರ್ಶಿಸಿ, ಮಾರಾಟ ಮಾಡಲಿದ್ದಾರೆ. ಬೆಳಗ್ಗೆ 11 ಗಂಟೆಯಿಂದ ರಾತ್ರಿ 8.30ರವರೆಗೆ ಪ್ರದರ್ಶನ ಮತ್ತು ಮಾರಾಟ ನಡೆಯಲಿದ್ದು, ಉಚಿತ ಪ್ರವೇಶ ಕಲ್ಪಿಸಲಾಗಿದೆ.



ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಅಭಿವೃದ್ಧಿ ಸಂಸ್ಥೆ ವತಿಯಿಂದ ಆಯೋಜಿಸಿರುವ ಸಿಲ್ಕ್ ಇಂಡಿಯಾ ಮೇಳವನ್ನು ನಟಿ ರಾಜಲಕ್ಷ್ಮೀ ಕೆ.ಮೂರ್ತಿ ಉದ್ಘಾಟಿಸಿದರು.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 31 ಗುರುವಾರ 2025

₹4

ಸಂಪುಟ: 46 | ಸಂಚಿಕೆ: 105 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ನಕ್ಕರೆ ಅದೇ ಸ್ವರ್ಗ

ಟೀಚರ್ : ನಡೆಗೂ, ನುಡಿಗೂ ಸಂಬಂಧವೇ ಇಲ್ಲ, ಏಕೆ?
ಗುಂಡ : ನಡೆಯುವುದು ಕಾಲಿನಿಂದ,
ನುಡಿಯುವುದು ನಾಲಿಗೆಯಿಂದ ಅದಕ್ಕೆ!!

ಮೈಸೂರು ಮಿತ್ರ
ಗುರುವಾರ, 31 ಜುಲೈ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಹೃದಯವಂತಿಕೆ ಇಲ್ಲದಿರುವಾಗ ಬುದ್ಧಿವಂತಿಕೆ ಎಷ್ಟಿದ್ದರೇನು...?

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಭಾವಿಸಿದರೆ ಬಳಗ, ಕೂಡಿಸಿದರೆ ಕಾಸು.

ನಿಮ್ಮ ಪತ್ರಗಳು

■ ಯತೀಂದ್ರಗೆ ಒಡೆಯರ್ ಕೊಡುಗೆಗಳ ಬಗ್ಗೆ ಕನಿಷ್ಠ ಜ್ಞಾನವೂ ಇಲ್ಲ

ಮಾನ್ಯರೆ,

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗಿಂತಲೂ ತಮ್ಮ ತಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರಿನ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದ್ದಾರೆ. ಡಾ.ಯತೀಂದ್ರ ಅವರಿಗೆ ಮೈಸೂರನ್ನು ಆಳಿದ ಒಡೆಯರ್ ರಾಜವಂಶಸ್ಥರು ಮೈಸೂರಿಗೆ ನೀಡಿರುವ ಕೊಡುಗೆಗಳ ಬಗ್ಗೆ ಕನಿಷ್ಠ ಜ್ಞಾನವೂ ಇಲ್ಲ ಎಂಬುದು ಇವರ ಈ ಹೇಳಿಕೆಯಿಂದ ತಿಳಿಯುತ್ತದೆ. ಈ ಹೇಳಿಕೆಯಿಂದ ಸಾರ್ವಜನಿಕರ ಮುಂದೆ ತೀರ ಹಾಸ್ಯಾಸ್ಪದವಾಗಿ ಕಾಣುತ್ತಿದ್ದಾರೆ. ಇವರಿಗೆ ಮೈಸೂರಿನ ಇತಿಹಾಸದ ಬಗ್ಗೆ ಮಾಹಿತಿ ಕೊರತೆ ಇದ್ದರೆ ಯಾವುದಾದರೂ ಒಳ್ಳೆಯ ಇತಿಹಾಸಕಾರರಿಂದ ಪಾಠ ಹೇಳಿಸಿಕೊಳ್ಳುವುದು ಒಳ್ಳೆಯದು.

ಇಂದು, ಇಡೀ ವಿಶ್ವವೇ ನಿಬ್ಬೆರಗಾಗುವಂತೆ ಕೆಆರ್‌ಎಸ್ ಅಣೆಕಟ್ಟೆ ನಿರ್ಮಿಸುವ ಸಂದರ್ಭದಲ್ಲಿ ಹಣದ ಕೊರತೆ ಎದುರಾದಾಗ ತಮ್ಮ ಮನೆಯ ಚಿನ್ನಾಭರಣವನ್ನು ಅಂದಿನ ಮದ್ರಾಸ್ ಸರ್ಕಾರಕ್ಕೆ ಅಡವಿಟ್ಟು ಕೆಆರ್‌ಎಸ್ ಜಲಾಶಯವನ್ನು ನಿರ್ಮಾಣ ಮಾಡಿದ್ದು ಈಗ ಇತಿಹಾಸ. ಸಿದ್ದರಾಮಯ್ಯ ಅವರು ಯಾರ ಮನೆಯ ಚಿನ್ನ ಅಡವಿಟ್ಟು ಮೈಸೂರಿನ ಅಭಿವೃದ್ಧಿಗೆ ಹಣ ಒದಗಿಸಿದ್ದಾರೆ ಎಂಬುದನ್ನು ತಿಳಿಸಲಿ. ಮೈಸೂರಿನ ಮಹಾರಾಜ ಕಾಲೇಜು, ಯುವರಾಜ ಕಾಲೇಜು ಸೇರಿದಂತೆ ಹಾಲಿ ಮೈಸೂರಿನಲ್ಲಿರುವ 22 ಹೆರಿಟೇಜ್ ಕಟ್ಟಡಗಳಿಗೆ ಇವತ್ತು ಸುಣ್ಣ – ಬಣ್ಣ ಬಳಿಯಲು ಸಹ ಈ ಸರ್ಕಾರದಲ್ಲಿ ಹಣ ಇಲ್ಲದ ಪರಿಸ್ಥಿತಿ ಇದೆ. ಇನ್ನು ಮುಂದೆ ಯತೀಂದ್ರ ಅವರು ಮಾಧ್ಯಮಗಳ ಮುಂದೆ ಹೇಳಿಕೆ ನೀಡುವ ಮೊದಲು ಮೈಸೂರಿನ ಇತಿಹಾಸವನ್ನು ತಿಳಿಯಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

■ ಚಿಲ್ಲರೆ ಸಮಸ್ಯೆ ಬಗೆಹರಿಸಿ

ಮಾನ್ಯರೆ,

ಪ್ರತಿಯೊಬ್ಬ ವ್ಯಾಪಾರಸ್ಥರು ಗೂಗಲ್ ಪೇನಲ್ಲಿ ವ್ಯಾಪಾರ ಮಾಡುತ್ತಿದ್ದರಿಂದ ಯಾವ ಕಳ್ಳ ಕಾಕರ ಭೀತಿ ಇರಲಿಲ್ಲ. ಕೈಯಲ್ಲಿ ಮೊಬೈಲ್ ಇದ್ದರೆ ಸಾಕು ಗೂಗಲ್ ಪೇ, ಫೋನ್ ಪೇ ಮಾಡಿ ಅಗತ್ಯ ವಸ್ತುಗಳನ್ನು ಖರೀದಿಸುತ್ತಿದ್ದರು. ಆದರೆ ಇಂದು ಕೈಯಲ್ಲಿ ಹಣವಿದ್ದರೆ ಮಾತ್ರ ವ್ಯಾಪಾರ ಮಾಡಬಹುದು. ಎಲ್ಲಾ ಅಂಗಡಿ ಮಾಲೀಕರು ಅಂಗಡಿಯ ಮುಂದೆ ಗೂಗಲ್ ಪೇ ಹಾಗೂ ಫೋನ್ ಪೇ ಇಲ್ಲ ಎಂದು ಬೋರ್ಡ್ ಹಾಕಿರುತ್ತಾರೆ. ಆದಾಯ ತೆರಿಗೆ ಭಯದಿಂದ ಗ್ರಾಹಕರು ಕಷ್ಟಕ್ಕೆ ಸಿಲುಕಿದ್ದಾರೆ. ಅಂಗಡಿಗಳಿಗೆ ಹೋದರೆ ಚಿಲ್ಲರೆ ಸಮಸ್ಯೆಗಳು ಉದ್ಭವಿಸುತ್ತಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಯನ್ನು ಬಗೆಹರಿಸಲು ಮನವಿ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

■ 'ಮಿತ್ರ'ನ ಫಲಶ್ರುತಿಗೆ ಶೀಘ್ರ ಸ್ಪಂದನೆ

ಮಾನ್ಯರೇ,

ಕೆಲವು ತಿಂಗಳುಗಳ ಹಿಂದೆ ಜಗನ್ಮೋಹನ ಅರಮನೆಯಲ್ಲಿ ಮೂಲ ಸೌಕರ್ಯಗಳ ಕೊರತೆ ಎಂಬ ಶೀರ್ಷಿಕೆಯಡಿಯಲ್ಲಿ 'ಮೈಸೂರು ಮಿತ್ರ'ದ ನಿಮ್ಮ ಪತ್ರಗಳು ವಿಭಾಗದಲ್ಲಿ ವರದಿ ಪ್ರಕಟವಾಗಿತ್ತು. ಮುಖ್ಯವಾಗಿ ಶೌಚಾಲಯ ಹದಗೆಟ್ಟಿತ್ತು. ಸಾರ್ವಜನಿಕರು ರಾತ್ರಿ ವೇಳೆ ಶೌಚಾಲಯಕ್ಕೆ ತೆರಳಲು ಪರಿತಪಿಸುವಂತಿತ್ತು. ಕಾರಣ ಶೌಚಾಲಯಕ್ಕೆ ಆಡಳಿತ ಮಂಡಳಿ ಕೆಲವು ತಿಂಗಳುಗಳಿಂದ ನವೀಕರಣದ ಸಲುವಾಗಿ ಬೀಗ ಜಡಿದಿದ್ದರು. ಪುರುಷರು ವಿಧಿ ಇಲ್ಲದೇ ಬಯಲು ಪ್ರದೇಶದಲ್ಲಿ ಮೂತ್ರ ವಿಸರ್ಜನೆ ಮಾಡಿ ಬರುತ್ತಿದ್ದರು. ಮಹಿಳೆಯರಿಗೆ ಇದರಿಂದ ತುಂಬಾ ಇರುಸು–ಮುರುಸಾಗಿತ್ತು. ಇದೀಗ ಶೌಚಾಲಯ ಅತ್ಯಾಧುನಿಕ ಶೈಲಿಯಲ್ಲಿ ನವೀಕರಣಗೊಂಡು ಸುಸಜ್ಜಿತವಾಗಿ ರೂಪುಗೊಂಡಿದೆ. ಇದರ ಜೊತೆಗೆ ಎಕೋ (ಪ್ರತಿಧ್ವನಿ) ಸಮಸ್ಯೆಯೂ ಬಗೆಹರಿದಿದೆ. ಧ್ವನಿವರ್ಧಕ ಇಂಪಾಗಿ ಕೇಳಿಬರುತ್ತಿದೆ. ಇದೇ ರೀತಿ ನಾದಬ್ರಹ್ಮ ಸಭಾಂಗಣವೂ ನವೀಕರಣಗೊಂಡರೆ ದಸರಾ ವೇಳೆಗೆ ಕಳೆ ಕಟ್ಟುತ್ತದೆ. ಅಲ್ಲಿ ಆಸನಗಳು ಕಿತ್ತು ಬರುತ್ತಿವೆ. ಅದಕ್ಕೆ ಕುಶನ್ ಅಳವಡಿಸಿದರೆ ಏನ್ ಚೆಂದವೋ ಜಗನ್ಮೋಹನ ಅರಮನೆ ಶೌಚಾಲಯ ಅವ್ಯವಸ್ಥೆ ಹಾಗೂ ಎಕೋ ಸಮಸ್ಯೆಯನ್ನು ಬಗೆಹರಿಸಿದ ಪ್ರಮೋದಾದೇವಿ ಒಡೆಯರ್ ಅವರ ಆಪ್ತ ಸಹಾಯಕ ಎಂ.ಲಕ್ಷ್ಮೀನಾರಾಯಣ್ ಅವರಿಗೆ ಅಭಿನಂದನೆಗಳು.

– ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು

■ ಕೆಬಿಜಿಯವರಿಗೆ ಭಾವಪೂರ್ಣ ಭಾಷ್ಪಾಂಜಲಿ

ಮಾನ್ಯರೆ,

ಪತ್ರಿಕಾರಂಗಕ್ಕೆ ಹಾಗೂ ನಮಗೆಲ್ಲಾ ಭಾನುವಾರ (ಜು.13) ಆಘಾತವಾದ



ದಿನವಾಗಿದೆ. ಕಾರಣ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿಯವರು ನಿಧನರಾದ ಸುದ್ದಿ ತಿಳಿದು ಮನಸ್ಸು ದುಃಖಗೊಂಡಿದೆ. 35 ವರ್ಷಗಳಿಂದ ನಾನು ಪತ್ರಿಕೆಯನ್ನು ನಿರಂತರವಾಗಿ ಓದುತ್ತಾ ಬಂದಿದ್ದೇನೆ. ನೇರ ಹಾಗೂ ನಿಷ್ಠುರವಾಗಿ ಪತ್ರಿಕೆಯನ್ನು ನಡೆಸಿ ಕೊಂಡು ಬರುವುದು ತುಂಬಾ ಕಷ್ಟಕರ ವಿಷಯ. ಆಗ ವಿರೋಧಗಳು ಹೆಚ್ಚುತ್ತಾ ಬರುವುದು ಸಹಜ. ವ್ಯಾಪಾರೀಕರಣದ ಈ ಕಾಲದಲ್ಲಿ ಸ್ಪರ್ಧೆಗಳನ್ನು ಎದುರಿಸಿ ಗಟ್ಟಿಯಾಗಿ ನಿಲ್ಲುವುದೆಂದರೆ ಅದು ಸುಲಭ ಸಾಧ್ಯವಲ್ಲ. ಅದರ ಜೊತೆಗೆ ಸಿದ್ಧಾಂತವನ್ನು ಉಳಿಸಿಕೊಂಡು ಪತ್ರಿಕೆಯನ್ನು ನಡೆಸಿಕೊಂಡು ಬರುವುದೆಂದರೆ ತುಂಬಾ ಕಷ್ಟ. ಇದನ್ನು ಕೆ.ಬಿ.ಗಣಪತಿಯವರು ಸಮರ್ಥವಾಗಿ ನಿಭಾಯಿಸಿಕೊಂಡು ಬಂದಿದ್ದಾರೆ. ಅವರು ಮೂಲತಃ ಕೊಡಗಿನವರಾದರೂ ಮೈಸೂರು, ಕೊಡಗು, ಮಂಡ್ಯ, ಹಾಸನ, ಚಾಮರಾಜನಗರದ ಸುದ್ದಿಗೆ ಸಮನಾಗಿ ಮೀಸಲಿಟ್ಟಿರುವುದು ಅವರ ಸಮಾನತೆಯ ಮನಸ್ಸಿಗೆ ಹಿಡಿದ ಕೈಗನ್ನಡಿ. ಭೂಮಂತ್ರ ಹಾಗೂ ಅಬ್ರಕಡಬ್ರ ಅಂಕಣಗಳಲ್ಲಿ ನ್ಯಾಯಯುತ ವಿಷಯಗಳನ್ನು ನ್ಯಾಯವಾಗಿಯೇ ಬರೆಯುತ್ತಿದ್ದರು. ಆದರೆ ತಪ್ಪುಗಳನ್ನು ಕಂಡಾಗ ತಮ್ಮ ತೀಕ್ಷ್ಣ ಮಾತುಗಳಿಂದ ತಿವಿಯುತ್ತಿದ್ದರು ಎಂದೂ ತಮ್ಮ ನಿಲುವುಗಳಿಂದ ಹಿಂದೆ ಸರಿಯುತ್ತಿರಲಿಲ್ಲ. 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಬರುವ ವಿಚಾರಗಳಿಗೆ ಸರ್ಕಾರಿ ಅಧಿಕಾರಿಗಳು ಕೂಡ ಸ್ಪಂದಿಸುತ್ತಿದ್ದರು. ಕೂಡಲೇ ಆ ಸಮಸ್ಯೆಯನ್ನು ಪರಿಹರಿಸುತ್ತಿದ್ದರು. 'ಮೈಸೂರು ಮಿತ್ರ' ಫಲಶ್ರುತಿ ಅಂತ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದರು. ಗಣಪತಿಯವರು ಇಲ್ಲದ 'ಮೈಸೂರು ಮಿತ್ರ' ಮುಂದೆಯೂ ಕೂಡ ಇದೇ ರೀತಿ ಜನ ಮನ್ನಣೆ ಉಳಿಸಿಕೊಂಡು ಹೋಗಬೇಕಾಗುವುದು. ಇದರ ಜವಾಬ್ದಾರಿ ಸಂಪಾದಕರು ಹಾಗೂ ಗಣಪತಿಯವರ ಪುತ್ರರಾದ ವಿಕ್ರಂ ಮುತ್ತಣ್ಣ ಮತ್ತು ಸಿಬ್ಬಂದಿವರ್ಗ ಸಮರ್ಥವಾಗಿ ನಿಭಾಯಿಸಿಕೊಂಡು ಹೋಗುತ್ತಾರೆಂದು ಆಶಿಸೋಣ.

–ಶಾಂತರಾಮ್ ಶೆಟ್ಟಿ, ವಿಜಯನಗರ 2ನೇ ಹಂತ, ಮೈಸೂರು.

ಮಂಥನ



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಶಾಂತಿಗಾಗಿ ಯುದ್ಧ ಮಾಡಬೇಕೇ...!

ಜುಲೈ 26ಕ್ಕೆ ಕಾರ್ಗಿಲ್ ವಿಜಯ ದಿವಸ್ ಅನ್ನು ಆಚರಿಸಿದೆವು. ಆಗಸ್ಟ್ 15ಕ್ಕೆ ನಮ್ಮ 79ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಿದ್ದೇವೆ. ಎರಡು ದಿನಾಚರಣೆಗಳೂ ನಮಗೆ ಅತ್ಯಂತ ಹೆಮ್ಮೆ ತರುವಂತಹವು. ಎರಡು ಯುದ್ಧಗಳನ್ನು ನಾವು ಭಾರತೀಯರು ಜಯಿಸಿದ ಅಂಗವಾಗಿಯೇ ಈ ಎರಡೂ ದಿನಗಳನ್ನು ಅತ್ಯಂತ ಗೌರವಪೂರ್ಣವಾಗಿ ಆಚರಿಸುತ್ತೇವೆ.

ಇಂಗ್ಲಿಷ್ ಕಾದಂಬರಿಕಾರ ಅರ್ನೆಸ್ಟ್ ಹೆಮ್ಮಿಂಗ್ವೇಯ ಒಂದು ಮಾತು ಬಹಳ ಪ್ರಸಿದ್ಧ ಮತ್ತು ಎಂದೆಂದಿಗೂ ಪ್ರಸ್ತುತ. ಅದೇನೆಂದರೆ, ಎಂದಿಗೂ ಯಾವುದೇ ಕಾರಣಕ್ಕೂ, ಎಷ್ಟೇ ಅವಶ್ಯಕವಾದರೂ, ಸಮರ್ಥನೆ ಇದ್ದರೂ, ಯುದ್ಧ ಎಂದೆಂದಿಗೂ ಅಪರಾಧವೇ? ಸ್ವತಃ ಮೊದಲನೆಯ ವಿಶ್ವಯುದ್ಧದಲ್ಲಿ ಆಂಬುಲೆನ್ಸ್‌ನ ಚಾಲಕನಾಗಿದ್ದ ಹೆಮ್ಮಿಂಗ್ವೇ, ಯುದ್ಧದ ಕರಾಳಮುಖವನ್ನು ನೋಡಿದ್ದವನು. ಹಾಗಾಗಿ ಅವನ ಮಾತುಗಳು ಅಪ್ಪಟ ಸತ್ಯವೇ.

ಸಾಮದಂಡೌ ಪ್ರಶಂಸಂತಿ ನಿತ್ಯಂ ರಾಷ್ಟ್ರಾಭಿವೃದ್ಧಿಯೇ?

ಅಂದರೆ, ಕಾರ್ಯ ಸಿದ್ಧಿಯಾಗಬೇಕಾದರೆ ದಂಡದಿಂದ ಮಾತ್ರ, ಅದರಿಂದಲೇ ರಾಷ್ಟ್ರಾಭಿವೃದ್ಧಿ ಕೂಡ ಸಾಧ್ಯ ಎಂದು ಮನು ಹೇಳುತ್ತಾನೆ. ಯುದ್ಧ ಒಳ್ಳೆಯದೋ ಕೆಟ್ಟದೋ ಎಂಬ ಜಿಜ್ಞಾಸೆಗೆ ಬಹುಶಃ ಎಂದಿಗೂ ಸರಿ ಅಥವಾ ತಪ್ಪು ಎನ್ನುವಂತಹ ಉತ್ತರ ಸಿಗುವುದು ದುಸ್ಸಾಧ್ಯ! ಶಾಂತಿ ಎನ್ನುವುದನ್ನು, ಸೈನ್ಯ ತಂದು ಕೊಡಬೇಕಾದ್ದಲ್ಲ, ಅದು ಒಂದು ಪರಸ್ಪರ ಕ್ರಿಯೆ ಎಂದು ಐನ್‌ಸ್ಟೀನ್ ಹೇಳುತ್ತಾರೆ.

ಯುದ್ಧ ಎಂಬುದು ಶಾಂತಿ ಸ್ಥಾಪನೆಯ ಮೂಲಮಂತ್ರ ಎನ್ನುವುದನ್ನೂ ಒಪ್ಪುವ ಬಹಳಷ್ಟು ಮಂದಿ ಇದ್ದಾರೆ.

ನಮ್ಮ ರಾಮಾಯಣ, ಮಹಾಭಾರತ ಮತ್ತಿತರ ಪುರಾಣಗಳಲ್ಲಿ ಇದಕ್ಕೆ ಪುಷ್ಟಿ ನೀಡುವಂತಹ ಹಲವು ಪ್ರಕರಣಗಳಿವೆ. **ದುಷ್ಟ ಶಿಕ್ಷಣಂ, ಶಿಷ್ಟ ರಕ್ಷಣಂ** ಎನ್ನುವುದು ನಾವು ನಂಬಿಕೊಂಡು ಬಂದಿರುವುದು. ವಿಷ್ಣುವಿನ ದಶಾವತಾರಗಳೂ ಯುದ್ಧಗಳಲ್ಲಿಯೇ ಪರಿಸಮಾಪ್ತಿಯಾಗುತ್ತದೆ. ಸಾವಿರ ವರ್ಷಗಟ್ಟಲೆ ವಿಷ್ಣು ಯುದ್ಧ ಮಾಡಿದ ಎಂದು ನಮಗೆ ಓದಲು ಸಿಗುತ್ತದೆ. ದೇವಾಸುರರ ಯುದ್ಧಗಳನ್ನು ಓದಿದ್ದೇವೆ. ಗ್ರೀಸ್‌ನಲ್ಲಿ ಹೆಲನ್‌ಗಾಗಿ ಟ್ರಾಯ್ ಯುದ್ಧ 10 ವರುಷಗಳ ಕಾಲ ನಡೆಯಿತು

ಯುದ್ಧಾನಂತರ ಶಾಂತಿಸ್ಥಾಪನೆಯಾಗುತ್ತದೆ ಎಂಬುದು ಒಂದು ನಂಬಿಕೆ ಅಷ್ಟೇ; ನಿಜವಲ್ಲ ಎಂಬುದನ್ನು ಲೋಕ ನೋಡಿದೆ. ಆದರೂ ಯುದ್ಧ ನಿಲ್ಲುವುದೇ ಇಲ್ಲ. ಪ್ರಪಂಚದಲ್ಲಿ ಶಾಂತಿ ಎಂಬುದು ಮರೀಚಿಕೆ ಎನ್ನುವ ಮಟ್ಟಿಗೆ, ಒಂದಲ್ಲ ಒಂದು ಕಡೆ ಯುದ್ಧ ನಡೆಯುತ್ತಲೇ ಇರುತ್ತದೆ.

ಮೊನ್ನೆ ಮೊನ್ನೆ ಪ್ರಾರಂಭವಾದ ಥಾಯ್ಲೆಂಡ್ ಮತ್ತು ಕಾಂಬೋಡಿಯಾ ನಡುವಿನ ಯುದ್ಧದ ಸುದ್ದಿಕೇಳಿ ಆಘಾತವೇ ಆಯಿತು. ಥಾಯ್ಲೆಂಡ್ ಪ್ರವಾಸಪ್ರಿಯರ ಸ್ವರ್ಗ. ಅದರ ಹೆಸರು ಕೇಳಿದರೆ ಸುಂದರ ಬೀಚ್‌ಗಳು, ಗಿಜಿಗುಡುವ ಬೀದಿಗಳು, ಗಗನಚುಂಬಿ ಕಟ್ಟಡಗಳು, ದ್ವೀಪಗಳು, ಅಲ್ಲಿನ ನೃತ್ಯ ಮಾತ್ರ ನೆನಪಾಗುತ್ತಿತ್ತು. ಇನ್ನು ಕಾಂಬೋಡಿಯಾ ಎಂದರೆ ಆಂಕರ್ ವಾಟ್ ದೇವಾಲಯ ನಮಗೆ ನೆನಪಾಗುತ್ತದೆ. ಪ್ರಪಂಚದಲ್ಲಿಯೇ ಭವ್ಯವಾದ ಹಿಂದೂ ಮಂದಿರಕ್ಕೆ ನೆಲೆಯಾದ ಕಾಂಬೋಡಿಯಾದಂತಹ ದೇಶದ ಹೆಸರು ಯುದ್ಧದ ಜೊತೆ ತಳುಕು ಹಾಕಿಕೊಂಡಿದ್ದು ನಂಬಲಸಾಧ್ಯ ಎನಿಸಿತು.

ಈಗಾಗಲೇ ಅರ್ಧದಷ್ಟು ಪ್ರಪಂಚ ಯುದ್ಧದಿಂದ ನಲುಗುತ್ತಿರುವಾಗ ಈ ಸುದ್ದಿ ಖೇದ ತರಿಸಿತು. ರಷ್ಯಾ–ಉಕ್ರೈನ್ ನಡುವಿನ ಯುದ್ಧಕ್ಕೆ ಎರಡು ವರ್ಷವಾದರೂ ನಿಲ್ಲುವ ಮಾತಿಲ್ಲ. ಪ್ಯಾಲೆಸ್ತೈನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷ ಇನ್ನೂ ನಿರ್ಣಾಯಕ ಹಂತ ತಲುಪಿಲ್ಲ, ಇಸ್ರೇಲ್–ಇರಾನ್ ನಡುವೆ ಸದ್ಯ ಕದನ ವಿರಾಮವಿದೆ. ಅಲ್ಲದೆ ಇಸ್ರೇಲ್–ಲೆಬನಾನ್‌ನ ಬಂಡುಕೋರರ ಜೊತೆಗೂ ಹೊಡೆದಾಡುತ್ತಿದೆ. ಸಿರಿಯಾ, ಅಫ್ಘಾನಿಸ್ತಾನ, ಸುಡಾನ್, ನೈಜರ್, ರಿಪಬ್ಲಿಕ್ ಆಫ್ ಕಾಂಗೋ, ಮಾಲಿ, ಇಥಿಯೋಪಿಯಾ ಇವೆಲ್ಲವೂ ಆಂತರಿಕ ಕಲಹದಿಂದ ಬಸವಳಿದಿವೆ.

ಇನ್ನು ನಮ್ಮ ದೇಶವನ್ನೇ ತೆಗೆದುಕೊಂಡರೆ, ಭಾರತ ಎದುರಿಸಿರುವ ದಾಳಿಗಳು ಅಸಂಖ್ಯ. ಮಂಗೋಲರು, ಹೂಣರು, ಖಿಲ್ಜಿಗಳು, ಗ್ರೀಕರು, ಮೊಘಲರು ನಂತರದ ದಿನಗಳಲ್ಲಿ ಬ್ರಿಟಿಷರ ಜೊತೆ ನಮ್ಮ ಹೋರಾಟವನ್ನು ಮರೆಯುವಂತಿಲ್ಲ. ಅಬ್ಬಕ್ಕ, ಚೆನ್ನಭೈರಾದೇವಿ, ಕಿತ್ತೂರು ರಾಣಿ ಚೆನ್ನಮ್ಮ, ಟಿಪ್ಪು, ಝಾನ್ಸಿ ರಾಣಿ ಲಕ್ಷ್ಮೀಬಾಯಿ ಈ ವೀರರನ್ನು ಮರೆಯುವುದುಂಟೇ? ಸ್ವಾತಂತ್ರ್ಯಾನಂತರ, ಪಾಕಿಸ್ತಾನ, ಚೀನಾಗಳ ಜೊತೆ ಅಧಿಕೃತ ಯುದ್ಧಗಳಾಗಿವೆ. ಆದರೂ ಅವೆರಡೂ ದೇಶಗಳ ತಂಟೆ ಇನ್ನು ನಿಂತಿಲ್ಲ. ಗಡಿಭಾಗಗಳಲ್ಲಿ ದಿನಬೆಳಗಾದರೆ ಅಕ್ರಮ ನುಸುಳುವಿಕೆ, ಬಾಂಬಿಂಗ್, ಶೆಲ್ಲಿಂಗ್, ಫೈರಿಂಗ್ ಇದ್ದೇ ಇರುತ್ತದೆ. ನಮ್ಮ ಸೈನಿಕರು ಕೆಚ್ಚೆದೆಯಿಂದ ರಕ್ಷಣೆಯನ್ನು ಮಾಡುತ್ತಿರುವುದರಿಂದ ನಾವೆಲ್ಲರೂ ನೆಮ್ಮದಿಯಿಂದ ನಿದ್ರೆ ಮಾಡುತ್ತಿದ್ದೇವೆ.

ಇದು ಸಾಲದೆಂಬಂತೆ, ಬಾಂಗ್ಲಾದೇಶ ಕೂಡಾ ಇತ್ತೀಚೆಗೆ ಕಾಟ ಕೊಡುತ್ತಿರುವುದೂ ಸೇರಿಕೊಂಡಿದೆ. ವೇಗವಾಗಿ ಅಭಿವೃದ್ಧಿಯೆಡೆಗೆ



> "ನಮ್ಮ ದೇಶವನ್ನೇ ತೆಗೆದುಕೊಂಡರೆ, ಭಾರತ ಎದುರಿಸಿರುವ ದಾಳಿಗಳು ಅಸಂಖ್ಯ. ಮಂಗೋಲರು, ಹೂಣರು, ಖಿಲ್ಜಿಗಳು, ಗ್ರೀಕರು, ಮೊಘಲರು ನಂತರದ ದಿನಗಳಲ್ಲಿ ಬ್ರಿಟಿಷರ ಜೊತೆ ನಮ್ಮ ಹೋರಾಟವನ್ನು ಮರೆಯುವಂತಿಲ್ಲ. ಅಬ್ಬಕ್ಕ, ಚೆನ್ನಭೈರಾದೇವಿ, ಕಿತ್ತೂರು ರಾಣಿ ಚೆನ್ನಮ್ಮ, ಟಿಪ್ಪು, ಝಾನ್ಸಿ ರಾಣಿ ಲಕ್ಷ್ಮೀಬಾಯಿ ಈ ವೀರರನ್ನು ಮರೆಯುವುದುಂಟೇ? ಸ್ವಾತಂತ್ರ್ಯಾನಂತರ, ಪಾಕಿಸ್ತಾನ ಚೀನಾಗಳ ಜೊತೆ ಅಧಿಕೃತ ಯುದ್ಧಗಳಾಗಿವೆ. ಆದರೂ ಅವೆರಡೂ ದೇಶಗಳ ತಂಟೆ ಇನ್ನು ನಿಂತಿಲ್ಲ. ಗಡಿಭಾಗಗಳಲ್ಲಿ ದಿನಬೆಳಗಾದರೆ ಅಕ್ರಮ ನುಸುಳುವಿಕೆ, ಬಾಂಬಿಂಗ್, ಶೆಲ್ಲಿಂಗ್, ಫೈರಿಂಗ್ ಇದ್ದೇ ಇರುತ್ತದೆ. ನಮ್ಮ ಸೈನಿಕರು ಕೆಚ್ಚೆದೆಯಿಂದ ನಮ್ಮ ರಕ್ಷಣೆಯನ್ನು ಮಾಡುತ್ತಿರುವುದರಿಂದ ನಾವೆಲ್ಲರೂ ನೆಮ್ಮದಿಯಿಂದ ನಿದ್ರೆ ಮಾಡುತ್ತಿದ್ದೇವೆ.

ಸಾಗುತ್ತಿರುವ ನಾವು, ಅದನ್ನು ಸಂಭ್ರಮಿಸಲು ಆಗದಂತೆ ಈ ಅಶಾಂತಿ ನಮ್ಮನ್ನು ಕಾಡುತ್ತಿದೆ. ಪಹಲ್ಗಾಮ್‌ನ ಘಟನೆಯ ನಂತರ ಯುದ್ಧ ಪ್ರಾರಂಭವಾಗಿಯೇ ಬಿಟ್ಟಿತು ಎಂಬ ಭಾವನೆ ಎಲ್ಲರಲ್ಲೂ ಸುಳಿದುಹೋದದ್ದು ಸುಳ್ಳಲ್ಲ.

ಮಾನವ ಈ ಭೂಮಿಯ ಮೇಲೆ ನೆಲೆಯೂರಲು ಕಲಿತಾಗಲೇ ಯುದ್ಧ ಮಾಡುವುದು ಪೂರ್ವನಿಯೋಜಿತ (Default) ಎಂಬಂತೆ ಅವನಿಗೆ ಒಲಿದುಬಿಟ್ಟಿತು. ಅಲೆಮಾರಿಯಾಗಿ ಕಾಡು ಮನುಷ್ಯನಂತೆ ಓಡಾಡಿಕೊಂಡಿದ್ದಾಗಲೂ ತಾನು ವಾಸಿಸುವ ಗುಹೆಗಾಗಿ, ಬೇಟೆ ಆಡಿದ ಮಾಂಸಕ್ಕಾಗಿ ಹೊಡೆದಾಡುತ್ತಿದ್ದ. ಬುದ್ಧಿ ಬೆಳೆದಂತೆ ಕಾರಣ ಸಂಕೀರ್ಣವಾಗ ತೊಡಗಿ ಈಗ ಯುದ್ಧ ಮಾಡಲು ಕಾರಣದ ಅವಶ್ಯಕತೆಯೇ ಇಲ್ಲದಂತಾಗಿದೆ. ದುಷ್ಟ ಶಿಕ್ಷಣಂ ಎಂಬ ಕಾರಣಕ್ಕೆ ಈಗ ಯುದ್ಧ ನಡೆಯದೆ, ಅಹಂ, ತೃಪ್ತಿಗೋಸ್ಕರ ಯುದ್ಧಗಳಾಗುತ್ತಿರುವುದು ಇಂದು ಎಲ್ಲ ಸಮಸ್ಯೆಗಳಿಗೂ ಮೂಲಕಾರಣವಾಗಿದೆ. ದುರದೃಷ್ಟಕರ ಸಂಗತಿ ಎಂದರೆ, ಅಶೋಕನಂತಹವರು ಈಗ ಇಲ್ಲವಾಗಿರುವುದು ದುರಂತಕ್ಕೆಡೆಯಾಗಿದೆ.

ಯುದ್ಧಗಳ ಇತಿಹಾಸವನ್ನು ಕೆದಕುತ್ತಾ ಹೋದರೆ, ಅದು ಅನಾದಿ ಕಾಲದಿಂದಲೂ ನಡೆದುಕೊಂಡು ಬರುತ್ತಿರುವ ಸಾಮಾನ್ಯ ಸಂಗತಿ ಎನಿಸಿಬಿಟ್ಟಿದೆ.

ಈಜಿಪ್ಟ್ ಮತ್ತು ಸುಡಾನ್‌ನ ಗಡಿ ಪ್ರದೇಶದಲ್ಲಿ ನಡೆದ ಸಂಘರ್ಷ, ಇತಿಹಾಸ ಪೂರ್ವಕಾಲದ ಮೊದಲ ಯುದ್ಧವೆನಿಸಿದೆ. ಮೀಸೋಲಿಥಿಕ್ ಶಿಲಾಯುಗಕ್ಕೆ ಸೇರಿದ ಸಮಯದಲ್ಲಿ ಸಂಪನ್ಮೂಲಗಳಿಗಾಗಿ ಎರಡು ಬುಡಕಟ್ಟುಗಳ ನಡುವೆ ಯುದ್ಧ ನಡೆದಿರ ಬಹುದು ಎಂದು ಪುರಾತತ್ವ ಶಾಸ್ತ್ರಜ್ಞರು ಹೇಳುತ್ತಾರೆ. Cemetry 117 ಎಂದು ಹೆಸರಿಸಲಾಗಿರುವ ನೈಲ್ ನದಿಯ ಬಳಿ ಇರುವ ಈ ಪ್ರದೇಶದಲ್ಲಿ 61 ಅಸ್ಥಿಪಂಜರಗಳು ಸಿಕ್ಕಿದ್ದು ಬಾಣಗಳಿಂದ ಘಾಸಿಯಾದ ಗುರುತಿದೆ!

ಇತಿಹಾಸದ ಕಾಲಕ್ಕೆ ಬಂದರೆ, ಕ್ರಿಪೂ 2700 ರಲ್ಲಿ ಮೆಸಪಟೋಮಿಯಾದಲ್ಲಿ ಸುಮೇರಿಯನ್ನರು ಮತ್ತು ಎಲಮೈಟ್ಸ್‌ಗಳ ನಡುವೆ ಕೃಷಿ ವಿಷಯಕ್ಕಾಗಿ ಯುದ್ಧ ನಡೆದಿತ್ತೆನ್ನಲಾಗಿದೆ.

ನಂತರದ ದಿನಗಳಲ್ಲಿ ನಡೆದಿರುವ ಯುದ್ಧಗಳಿಗೆ ಲೆಕ್ಕವೇ ಇಲ್ಲ ಎನ್ನಬೇಕು. ಸಾಮ್ರಾಜ್ಯಶಾಹಿಯಾಗಿದ್ದ ಮನುಷ್ಯ ಹೋದಲ್ಲೆಲ್ಲಾ ಅಥವಾ ಹೀಗೆ ಹೇಳೋಣ, ಸಿಕ್ಕಸಿಕ್ಕ ಕಡೆಗೆಲ್ಲಾ ಹೋಗಿ ಯುದ್ಧ ಮಾಡಿದ. ತನ್ನ ಸಾಮ್ರಾಜ್ಯ ವಿಸ್ತರಿಸುವ ಕನಸು ಕಟ್ಟಿಕೊಂಡು ತನ್ನ ಅಹಂಗಾಗಿ ಯುದ್ಧದಾಹಿಯಾದ.

ಪ್ರಪಂಚ ಕಂಡ ಎರಡು ಮಹಾಯುದ್ಧಗಳು ಪ್ರಪಂಚದ ನಕ್ಷೆಯನ್ನೇ ಬದಲಿಸಿಬಿಟ್ಟವು. 1914–18 ಮತ್ತು 1939–45 ರ ಅವಧಿಯಲ್ಲಿ ನಡೆದ ಯುದ್ಧಗಳಲ್ಲಿ ಮೊದಲ ಮಹಾಯುದ್ಧದಲ್ಲಿ 70–85ಮಿಲಿಯನ್ ಜನ ಸತ್ತರೆ, ಎರಡನೆಯ ಮಹಾಯುದ್ಧದಲ್ಲಿ 40ಮಿಲಿಯನ್ ಜನ ಸತ್ತರು. ಮೂರನೆಯ ಸಮರ ನಡೆದಲ್ಲಿ ಸರ್ವನಾಶ ಕಟ್ಟಿಟ್ಟಬುತ್ತಿ ಎಂಬುದು ತಜ್ಞರ ಅಭಿಪ್ರಾಯ. ಇಂದಿಗೂ ಪ್ರತಿದಿನ ನೂರಾರು ಜನ ಯುದ್ಧದಲ್ಲಿ ಅಥವಾ ಯುದ್ಧ ಸಂಬಂಧಿತ ಕಾರಣಗಳಿಗಾಗಿ ಸಾಯುತ್ತಿದ್ದಾರೆ.

ಎಲ್ಲ ಯುದ್ಧಗಳನ್ನು ಪಟ್ಟಿ ಮಾಡಿದರೆ ಅದು ಮುಗಿಯದ್ದು. ಒಂದಷ್ಟನ್ನು ನೆನಪಿಸಿಕೊಳ್ಳುವುದಾದರೆ, ರೋಮ್ ಮತ್ತು ಕಾರ್ಥೇಜ್ ನಡುವೆ ನಡೆದ 3 ಪ್ಯೂನಿಕ್ ಯುದ್ಧಗಳು ಬ್ರಿಟಿಷರು ವಿಜಯಿಯಾದ ನಾರ್ಮನ್ ಕಾಂಕ್ವೆಸ್ಟ್(1066–71) ಬ್ರಿಟಿಷರ ಪ್ರತಿಷ್ಠೆಯನ್ನೆ ಹೆಚ್ಚಿಸಿಬಿಟ್ಟಿತು.

ಕ್ರಿಶ್ಚಿಯನ್ ಮತ್ತು ಮುಸಲ್ಮಾನರ ನಡುವೆ ನಡೆದ ಕ್ರುಸೇಡ್ ಯುದ್ಧಗಳು (1095–1291).

14–15ನೇ ಶತಮಾನದಲ್ಲಿ 100 ವರ್ಷ ನಡೆದ ಇಂಗ್ಲೆಂಡ್ ಮತ್ತು ಫ್ರಾನ್ಸ್‌ನ ನಡುವಿನ ಯುದ್ಧ.

ನೆಪೋಲಿಯಾನಿಕ್ ಯುದ್ಧಗಳು (1792–1814).

ಫ್ಲಾರೆನ್ಸ್ ನೈಟಿಂಗೇಲ್‌ಳನ್ನು ನೀಡಿದ, ರಷಿಯಾ, ಫ್ರಾನ್ಸ್, ಬ್ರಿಟಿಷ್ ಮತ್ತು ಆಟೋಮನ್ ಟರ್ಕರ ನಡುವೆ ನಡೆದ ಕ್ರಿಮಿಯನ್ ಯುದ್ಧ (1906–1909).

ಸ್ಪಾನಿಶ್ ಸಿವಿಲ್ ಯುದ್ಧ (1936–39).

ಅಮೆರಿಕ ಮತ್ತು ರಷಿಯಾ ನಡುವಣ ಶೀತಲ ಸಮರ (1947–1991).

ಉತ್ತರ ಮತ್ತು ದಕ್ಷಿಣ ಕೊರಿಯಾ ನಡುವಿನ ಯುದ್ಧ(1950–53).

ದಕ್ಷಿಣ ಮತ್ತು ಉತ್ತರ ವಿಯೆಟ್ನಾಮ್ ನಡುವೆ ನಡೆದ ಯುದ್ಧದಲ್ಲಿ ಅಮೆರಿಕಾ ಪ್ರವೇಶದಿಂದ ಆದ ಹಾನಿ ಅಪಾರ (1955–75).

ಇರಾಕ್ ಮತ್ತು ಇರಾನ್ ನಡುವಿನ ಯುದ್ಧ (1980–88)

ಇವು ಕೇವಲ ಉದಾಹರಣೆಗಾಗಿ ನಿಮಗೆ ನೆನಪಿಸಲಷ್ಟೇ. ಇನ್ನೂ ಅದೆಷ್ಟೋ ಯುದ್ಧಗಳಿವೆ.

ಇವುಗಳ ಮಧ್ಯೆ Dirty War ಎಂಬ ಯುದ್ಧವೊಂದು ನಡೆಯಿತು. 1976–83ವರೆಗೆ ನಡುವೆ ಅರ್ಜೆಂಟಿನಾದಲ್ಲಿ ನಡೆದ ಈ ಆಂತರಿಕ ಯುದ್ಧದ ಸಮಯದಲ್ಲಿ ನಾಗರಿಕರು ಅನುಭವಿಸಿದ ತಾಪತ್ರಯ ಅಷ್ಟಿಷ್ಟಲ್ಲ.

ಸೆರ್ಬಿಯಾ ಮತ್ತು ಆಸ್ಟ್ರಿಯಾ ಹಂಗೇರಿಗಳ 1906–09ರವರೆಗೆ Pig War ನಡೆಯಿತು! ಹೌದು ಹಂದಿಗಳ ರಫ್ತು ಸಾಗಾಟಕ್ಕೆ ಸಂಬಂಧಿಸಿದ ವಿಷಯದಲ್ಲಿ ಉಂಟಾದ ಜಗಳ ಯುದ್ಧದಲ್ಲಿ ಕೊನೆಗೊಂಡಿತು.

Psychological War, Chemical War, Biological War ಗಳೂ ಚಾಲ್ತಿಯಲ್ಲಿವೆ. ಈ ಯುದ್ಧಗಳ ಜೊತೆಗೆ ಈಗ ಸೈಬರ್ ವಾರ್ ಕೂಡಾ ಸೇರಿಕೊಂಡು ರಕ್ತಪಾತವಿಲ್ಲದ, ಆದರೆ ಮತ್ತೊಂದು ದೇಶ ಭಾಷೆ ಅಲ್ಲಿನ ಪ್ರಜೆಗಳ ಅಸ್ತಿತ್ವವನ್ನೇ ಅಳಿಸಿ ಹಾಕುವ ಭಯಾನಕ ಯುದ್ಧ ಮುನ್ನೆಲೆಗೆ ಬಂದಿದೆ. ತಂತ್ರಜ್ಞಾನದ ಅಭಿವೃದ್ಧಿ ಊಹಿಸಲಸಾಧ್ಯವಾದ ಮಟ್ಟಿಗೆ ಆಗಿದ್ದು ಯುದ್ಧದ ರೂಪುರೇಷೆಯನ್ನೇ ಬದಲಿಸಿದೆ.

ಮನುಷ್ಯ ಎಷ್ಟು ಸ್ವಾರ್ಥಿಯಾಗುತ್ತಿದ್ದಾನೆ ಎಂದರೆ, ಒಂದು ದೇಶದಲ್ಲಿ ಯುದ್ಧ ನಡೆದರೆ Infrastructure sector ಅಂದರೆ ಮೂಲಸೌಕರ್ಯಗಳನ್ನು ಒದಗಿಸಿಕೊಡುವ ಕಂಪನಿಗಳು, ಆಯುಧ ಕಂಪನಿಗಳು, ಶವಪೆಟ್ಟಿಗೆ ತಯಾರಕರು, ಲೂಟಿಕೋರರು ಆನಂದತುಂದಿಲರಾಗುತ್ತಾರೆ.

ಒಟ್ಟಿನಲ್ಲಿ ಮನುಷ್ಯ ಮನುಷ್ಯನನ್ನೇ ನಿರ್ನಾಮ ಮಾಡಲು ಪಣತೊಟ್ಟಂತಿದೆ. ನಾವು ಒಂದು ಕೋಣೆಯೊಳಗೆ ಬೆಚ್ಚಗೆ ಕುಳಿತು ಪರಿಹಾರ ಸೂಚಿಸಲು ಖಂಡಿತಾ ಸಾಧ್ಯವಿಲ್ಲ. ಎಲ್ಲಿಗೆ ಹೋಗಿ ಮುಟ್ಟುತ್ತದೆಯೋ ಎಂಬ ಭಯ ಮಿಶ್ರಿತ ಕುತೂಹಲವಷ್ಟೇ ನಮ್ಮ ಪಾಲಿಗೆ.

ಯುದ್ಧ ಎಂದಾಕ್ಷಣ ಮತ್ತೊಂದು ಮಾನಸಿಕ ಯುದ್ಧವೂ ನೆನಪಾಗುತ್ತಿದೆ. ಹೌದು ಸದ್ಯ ಲಭ್ಯವಿರುವ ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಂಡು ಒಂದು ದೇಶದ, ಪ್ರದೇಶದ, ರಾಜ್ಯದ ತೇಜೋವಧೆ ಮಾಡಿ ಅದನ್ನು ಮಾನಸಿಕವಾಗಿ ಕುಗ್ಗಿಸುವುದು. ಈ ವೈರಲ್ ಯುಗದಲ್ಲಿ ಸುಳ್ಳುಸುದ್ದಿಯನ್ನು ಹಬ್ಬಿಸುವುದು ಎಷ್ಟು ಸುಲಭವೋ, KL ನ ಸಹಾಯದಿಂದ ಸುಳ್ಳುಸುದ್ದಿಯನ್ನು ಹುಟ್ಟಿಸುವುದೂ ಅತ್ಯಂತ ಸುಲಭವಾಗಿರುವುದು ಹೆಚ್ಚಿನ ಅಪಾಯವನ್ನು ತಂದೊಡ್ಡುತ್ತಿದೆ. ನಮ್ಮ ದೇಶದ ಬಗೆಗೇ ಹಾಗೆ ಸಾಕಷ್ಟು ಸುದ್ದಿಗಳನ್ನು ನೀವು ಕೇಳಿರುತ್ತೀರಿ.

ಇದು ದೇಶಗಳ ನಡುವಿನ ಮಾತಾದರೆ, ಸಂಬಂಧಗಳಲ್ಲೂ ಈ ಸೈಬರ್ ವಾರ್ ನಡೆಯುತ್ತಿರುವುದು ಆತಂಕಕಾರಿ. ಸ್ಟೇಟಸ್‌ಗಳ ಮೂಲಕ, ಫೇಸ್‌ಬುಕ್, ಇನ್ಸ್ಟಾಗ್ರಾಮ್‌ಗಳ ಮೂಲಕ ತಮಗೆ ಆಗದಿರುವವರಿಗೆ ಕುಟುಕುವುದು ಮನೆಯೊಳಗೇ ಪ್ರಾರಂಭವಾಗಿದೆ.

ಮನುಷ್ಯ ಚಾಕು–ಚೂರಿ ಕತ್ತಿಗಳನ್ನು ಕಂಡುಹಿಡಿದಾಗಲೂ ತನ್ನದೇ ಕುಲದ ಇತರ ಜೀವಿಗಳಿಗೆ ನೋವು ಕೊಟ್ಟ, ಗನ್ ಬಾಂಬ್‌ಗಳನ್ನು ತಯಾರಿಸಿ ಇನ್ನಷ್ಟು ವಿಕೃತಿ ಮೆರೆದ. ಈಗ ಮಸ್ತಿಷ್ಕಕ್ಕೇ ಕೈ ಹಾಕಿ ಇಡೀ ಅಸ್ತಿತ್ವವನ್ನೇ ಬುಡಮೇಲಾಗಿಸುತ್ತಿದ್ದಾನೆ.

ಈ ಎಲ್ಲ ಕ್ಲೇಶಗಳು ಕಳೆದು ಸುಂದರ ಶಾಂತ ದಿನಗಳು ನಮಗಾಗಿ ಕಾದಿವೆ ಎನ್ನುವ ಆಶಾಭಾವವಷ್ಟೇ ನಮ್ಮನ್ನು ಜೀವಂತವಾಗಿ ಇರಿಸಿದೆ.

ಕೆಆರ್ ಆಸ್ಪತ್ರೆ ಕಾಂಪೌಂಡ್‌ಗೆ ಮೂತ್ರ ವಿಸರ್ಜನೆ

ಅನಾಗರಿಕರ ದುರಭ್ಯಾಸಕ್ಕೆ ಇಡೀ ಪ್ರದೇಶದಲ್ಲಿ ದುರ್ವಾಸನೆ–ಅನೈರ್ಮಲ್ಯ

ಮೈಸೂರು,ಜು.30(ಪಿಎಂ)– ಕೆಆರ್ ಆಸ್ಪತ್ರೆ ಕಾಂಪೌಂಡ್‌ಗೆ ನಿತ್ಯ ಮೂತ್ರ ವಿಸರ್ಜನೆ ಮಾಡುತ್ತಿರುವ ಅನಾಗರಿಕರು ಆ ಇಡೀ ವಾತಾವರಣವನ್ನೇ ದುರ್ವಾಸನೆಯ ತಾಣವಾಗಿ ಮಾಡಿದ್ದಾರೆ. ಧನ್ವಂತರಿ ರಸ್ತೆ ಹಾಗೂ ಸಯ್ಯಾಜಿರಾವ್ ರಸ್ತೆ ಸಂದಿಸುವ ಸಮೀಪ ಇರುವ ಕೆಆರ್ ಆಸ್ಪತ್ರೆ ಕಾಂಪೌಂಡ್ ಜಾಗದಲ್ಲಿ ಪ್ರತಿನಿತ್ಯ ಮೂತ್ರ ವಿಸರ್ಜನೆ ಮಾಡುತ್ತಿದ್ದು, ಪರಿಣಾಮ ಆ ಸ್ಥಳದಲ್ಲಿ ಅತಿಯಾದ ದುರ್ವಾಸನೆ ಸೂಸುವಂತಾಗಿದೆ.



ಮೂತ್ರ ವಿಸರ್ಜನೆಯಿಂದ ಅನೈರ್ಮಲ್ಯಗೊಂಡಿರುವ ಧನ್ವಂತರಿ ರಸ್ತೆ ಹಾಗೂ ಸಯ್ಯಾಜಿರಾವ್ ರಸ್ತೆ ಸಂದಿಸುವ ಸಮೀಪದ ಕೆಆರ್ ಆಸ್ಪತ್ರೆ ಕಾಂಪೌಂಡ್ ಅನ್ನು ಚಿತ್ರದಲ್ಲಿ ಕಾಣಬಹುದು.

ಇಲ್ಲಿ ನಾಲ್ಕು ಚಕ್ರ ವಾಹನಗಳ ನಿಲುಗಡೆಗೆ ಸ್ಥಳಾವಕಾಶ ಕಲ್ಪಿಸಿದ್ದು, ವಾಹನಗಳ ಮರೆಯಲ್ಲಿ ಹೋಗಿ ಹಲವರು ನಿತ್ಯ ಮೂತ್ರ ವಿಸರ್ಜನೆ ಮಾಡುವ ದುರಭ್ಯಾಸ ರೂಢಿಸಿಕೊಂಡಿದ್ದಾರೆ. ಇದೇ ಸ್ಥಳದ ಪಕ್ಕದಲ್ಲಿ ಆಟೋ ರಿಕ್ಷ ನಿಲ್ದಾಣವೂ ಇದೆ. ಆಟೋ ಬಾಡಿಗೆಗಾಗಿ ಇಲ್ಲಿಗೆ ಬರುವ ಪ್ರಯಾಣಿಕರು ಮೂಗು ಹಿಡಿದು ಬರುವಂತಾಗಿದೆ. ಅನಾಗರಿಕ ಪುರುಷರ ಈ ದುರಭ್ಯಾಸಕ್ಕೆ ಇತ್ತ ಬರುವ ಮಹಿಳೆಯರು ಮತ್ತು ಮಕ್ಕಳು ಮುಜುಗರ ಅನುಭವಿಸುವಂತಾಗಿದೆ.

ಇಲ್ಲಿಗೆ ಸಮೀಪದಲ್ಲಿ ಹೋಟೆಲ್ ಸಹ ಇದ್ದು, ಇಲ್ಲಿಗೆ ಕೆಆರ್ ಆಸ್ಪತ್ರೆಯ ರೋಗಿಗಳು ಹಾಗೂ ಅವರ ಕಡೆಯವರು ಉಪಾಹಾರ ಸೇವನೆಗೆ ಭೇಟಿ ನೀಡುತ್ತಾರೆ. ಜೊತೆಗೆ ಇಲ್ಲಿಯೇ ಹತ್ತಿರದಲ್ಲಿ ಹಣ್ಣು ತರಕಾರಿ ವ್ಯಾಪಾರವೂ ನಡೆಯುತ್ತದೆ. ಹಾಗಾಗಿ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಹಾಗೂ ವಾಹನ ಸಂಚಾರ ಇರುತ್ತದೆ. ಇಲ್ಲಿನ ಇಂತಹ ಅನೈರ್ಮಲ್ಯದ ಕಾರಣ ನಾಗರಿಕರು ಮೂಗು ಮುಚ್ಚಿಕೊಂಡು ಓಡಾಡುವ ಸನ್ನಿವೇಶ ನಿರ್ಮಾಣವಾಗಿದೆ. ಇಲ್ಲಿ ಮೂತ್ರ ವಿಸರ್ಜನೆಗೆ ಕಡಿವಾಣ ಹಾಕಬೇಕಿದೆ.

ಹೀಗೆ ಇಲ್ಲಿ ಬಯಲಲ್ಲೇ ಮೂತ್ರ ವಿಸರ್ಜನೆ ಮಾಡುತ್ತಿರುವುದು ಸಾಕಷ್ಟು ದಿನಗಳಿಂದಲೂ ನಡೆಯುತ್ತಿದ್ದರೂ ಮೈಸೂರು ಮಹಾನಗರ ಪಾಲಿಕೆ ಇದಕ್ಕೆ ಕಡಿವಾಣ ಹಾಕಲು ಮುಂದಾಗಿಲ್ಲ ಎನ್ನುತ್ತಾರೆ ಇಲ್ಲಿ ನಿತ್ಯ ಸಂಚರಿಸುವ ಸಾರ್ವಜನಿಕರು. ಸ್ವಚ್ಛ ಸರ್ವೇಕ್ಷಣಾ ಸಮೀಕ್ಷೆಯಲ್ಲಿ 2015, 2016ರಲ್ಲಿ ದೇಶದ ಸ್ವಚ್ಛ ನಗರವಾಗಿ ಹೊರಹೊಮ್ಮಿದ್ದ ಮೈಸೂರು ನಗರ, ಈಗ ಸಮೀಕ್ಷೆಯಲ್ಲಿ 3ರಿಂದ 10 ಲಕ್ಷ ಜನಸಂಖ್ಯೆಯೊಳಗಿನ ವಿಭಾಗದಲ್ಲಿ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ. ನಾಗರಿಕರ ಆರೋಗ್ಯ ದೃಷ್ಟಿಯಿಂದ ಹಾಗೂ ಮುಂದೆ ಸಮೀಕ್ಷೆಯಲ್ಲಿ ಉನ್ನತ ಸ್ಥಾನ ಗಳಿಸಲು ನಗರದಲ್ಲಿನ ಇಂತಹ ಸ್ಥಳಗಳನ್ನು ಗುರುತಿಸಿ ಸ್ವಚ್ಛತೆ ಕಾಯ್ದುಕೊಳ್ಳಲು ಮೈಸೂರು ಮಹಾನಗರ ಪಾಲಿಕೆ ಕ್ರಮ ವಹಿಸುವುದು ಅಗತ್ಯವಾಗಿದೆ.

ರಾಹುಲ್ ಗಾಂಧಿ ಸ್ಥಿತಿ ಕೈಲಾಗದವನು ಮೈಪರಚಿಕೊಂಡಂತಿದೆ: ಆರ್.ಅಶೋಕ್

ಬೆಂಗಳೂರು, ಜು.30(ಕೆಎಂಶಿ)–ಕೈಲಾಗದವನು ಮೈಪರಚಿಕೊಂಡ ಎಂಬಂತೆ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ, ಮುಗಿದು ಹೋಗಿರುವ ಲೋಕಸಭಾ ಚುನಾವಣಾ ಪ್ರಕ್ರಿಯೆಗೆ ಕ್ಯಾತೆ ತೆಗೆಯುತ್ತಿದ್ದಾರೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.



ಆರ್.ಅಶೋಕ್

ಕಳೆದ ಮೂರು ಲೋಕಸಭಾ ಚುನಾವಣೆಗಳಲ್ಲಿ ಪಕ್ಷಕ್ಕೆ ಮೂರಂಕಿ ಗೆಲುವು ಕೊಡಿಸಲಾಗದೆ, ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಕಾಂಗ್ರೆಸ್ ಅನ್ನು ಸಂಪೂರ್ಣ ಮುಳುಗಿಸಿ ಸೋತು ಸುಣ್ಣವಾಗಿರುವ ಬಾಲಕ ಬುದ್ಧಿಯ ರಾಹುಲ್ ಗಾಂಧಿ ಕರ್ನಾಟಕದಲ್ಲಿ ಚುನಾವಣಾ ಆಯೋಗದ ವಿರುದ್ಧ ಪಾದಯಾತ್ರೆಗೆ ಮುಂದಾಗಿರುವುದು ವಿಪರ್ಯಾಸ ಎಂದರು.

ಹರಿಯಾಣ, ಮಹಾರಾಷ್ಟ್ರ, ದೆಹಲಿ ವಿಧಾನಸಭಾ ಚುನಾವಣೆಗಳಲ್ಲಿ ಹೀನಾಯ ಸೋಲಿನ ನಂತರ ಇದೀಗ ಬಿಹಾರದಲ್ಲೂ ಕಾಂಗ್ರೆಸ್ ಪರಾಭವದ ಮುನ್ಸೂಚನೆ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಪಾದಯಾತ್ರೆ ಹೊರಟಿರುವುದು ಹಾಸ್ಯಾಸ್ಪದ ಎಂದಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅಶೋಕ್, ಕಳೆದ 24 ತಿಂಗಳಲ್ಲಿ ರಾಜ್ಯದಲ್ಲಿ 2,000ಕ್ಕೂ ಹೆಚ್ಚು ರೈತರು ಆತ್ಮಹತ್ಯೆಗೆ ಶರಣಾಗಿದ್ದು, ರಾಹುಲ್ ಗಾಂಧಿಗೆ ಕರ್ನಾಟಕ ಈಗ ನೆನಪಾಗುತ್ತಿದೆಯೇ ಎಂದು ಟೀಕಿಸಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಕಳಪೆ ಔಷಧಿ ಪೂರೈಕೆಯಿಂದ 500ಕ್ಕೂ ಹೆಚ್ಚು ಗರ್ಭಿಣಿ, ಬಾಣಂತಿ ಮಹಿಳೆಯರು, ನವಜಾತ ಶಿಶುಗಳು ಮರಣ ಹೊಂದಿದಾಗ ಬರಲಿಲ್ಲ ಎಂದು ಅವರು ವಾಗ್ದಾಳಿ ನಡೆಸಿದರು. ಮೈಕ್ರೋ ಫೈನಾನ್ಸ್ ಕಂಪನಿಗಳ ಕಿರುಕುಳದಿಂದ 50ಕ್ಕೂ ಹೆಚ್ಚು ಬಡವರು ಆತ್ಮಹತ್ಯೆ ಮಾಡಿಕೊಂಡಾಗ ಬರಲಿಲ್ಲ. ಐಪಿಎಲ್ ವಿಜಯೋತ್ಸವ ಸಂದರ್ಭದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರದ ಎಡವಟ್ಟಿನಿಂದ 11 ಜನ ಅಮಾಯಕ ಯುವಜನರು ಸತ್ತಾಗ ಬರಲಿಲ್ಲ.

ಮುಂದೆ ನಡೆಯಲಿರುವ ಬಿಹಾರ ವಿಧಾನಸಭಾ ಚುನಾವಣಾ ಸೋಲಿಗೆ ಈಗಲೇ ಕುಂಟುನೆಪ ಸೃಷ್ಟಿಸಿ, ತಮ್ಮ ಅಸಾಮರ್ಥ್ಯ ಮತ್ತು ವೈಫಲ್ಯಕ್ಕೆ ನಿರೀಕ್ಷಣಾ ಜಾಮೀನು ಪಡೆಯಲು ಬರುತ್ತಿದ್ದೀರಾ, ಕಾಂಗ್ರೆಸ್‌ನ ಇಂತಹ ಲಜ್ಜೆಗೇಡಿತನ ನಡಾವಳಿಗಳಿಂದ ಕರ್ನಾಟಕದ ಜನತೆ ರೋಸಿ ಹೋಗಿದ್ದು, ಅದ್ಯಾವ ಮುಖ ಇಟ್ಟುಕೊಂಡು ರಾಜ್ಯಕ್ಕೆ ಬರುತ್ತಿದ್ದೀರಾ ಎಂದು ಪ್ರಶ್ನಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 31 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 105 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಕೇಂದ್ರದಿಂದ ರಾಜ್ಯಕ್ಕೆ 1.35 ಲಕ್ಷ ಮೆಟ್ರಿಕ್ ಟನ್

ರಸಗೊಬ್ಬರ ಬಿಡುಗಡೆ

ಯೂರಿಯಾ ಕೊರತೆಯಿಂದ ತತ್ತರಿಸಿರುವ ರೈತರ ಸಂಕಷ್ಟ ನಿವಾರಣೆ

ಬೆಂಗಳೂರು, ಜು.30(ಕೆಎಂಶಿ)–ಯೂರಿಯಾ ಗೊಬ್ಬರಕ್ಕೆ ರಾಜ್ಯದಲ್ಲಿ ಹಾಹಾಕಾರ ಎದ್ದಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ತಕ್ಷಣಕ್ಕೆ 1.35 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಬಿಡುಗಡೆ ಮಾಡಿದೆ.

ಈ ರಸಗೊಬ್ಬರ ಮುಂದಿನ 10ರಿಂದ 15 ದಿನದೊಳಗೆ ರಾಜ್ಯಕ್ಕೆ ತಲುಪಲಿದೆ. ಅವಧಿಗೂ ಮುನ್ನ ಮಳೆಗಾಲ ಆರಂಭಗೊಂಡಿದ್ದರಿಂದ ಬಿತ್ತನೆ ಬೀಜ ಹಾಗೂ ವಿವಿಧ ಬಗೆಯ ರಸಗೊಬ್ಬರಕ್ಕಾಗಿ ರೈತರು ದಿನನಿತ್ಯ ಪರದಾಡುವಂತಾಗಿದೆ. ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ರಾಜ್ಯ ಬಿಜೆಪಿ ಸಂಸದರ ನಿಯೋಗ ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರ ಖಾತೆ ಸಚಿವ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ಮೇರೆಗೆ ಯೂರಿಯಾ ಬಿಡುಗಡೆ ಮಾಡಲಾಗಿದೆ.

ರಸಗೊಬ್ಬರ ವಿತರಣೆಯಲ್ಲಿ ಭ್ರಷ್ಟಾಚಾರ: ನವದೆಹಲಿಯಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸದರಾದ ಗೋವಿಂದ ಕಾರಜೋಳ, ಕೋಟ ಶ್ರೀನಿವಾಸ ಪೂಜಾರಿ, ಡಾ.ಸಿ.ಎನ್.ಮಂಜುನಾಥ, ಪಿ.ಸಿ.ಗದ್ದಿಗೌಡರ, ವಿಶ್ವೇಶ್ವರ ಹೆಗಡೆ ಕಾಗೇರಿ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ರಾಜ್ಯದಲ್ಲಿ ರಸಗೊಬ್ಬರ ವಿತರಣೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆರೋಪಿಸಿದರು.

ಯಾವ ಜಿಲ್ಲೆಗೆ ಎಷ್ಟು ರಸಗೊಬ್ಬರ ಬೇಡಿಕೆ ಇದೆ ಎಂಬ ಮಾಹಿತಿ ಕೃಷಿ ಅಧಿಕಾರಿಗಳಿಗಿಲ್ಲ, ದುರಾಡಳಿತ ವ್ಯವಸ್ಥೆಯಿಂದ ರೈತರು ಸಂಕಷ್ಟ ಎದುರಿಸುವಂತಾಗಿದೆ.



ಸಾಂದರ್ಭಿಕ ಚಿತ್ರ

> **ಕರ್ನಾಟಕದಲ್ಲಿ ರಸಗೊಬ್ಬರ ದಾಸ್ತಾನು ಇದೆ. ಆದರೆ, ರೈತರಿಗೆ ಸಿಗುತ್ತಿಲ್ಲ. ಶ್ರೀಮಂತ ರೈತರು ಹೆಚ್ಚು ಹಣ ನೀಡಿ ಖರೀದಿಸುತ್ತಿದ್ದಾರೆ. ಸಣ್ಣ, ಅತಿಸಣ್ಣ ರೈತರು ಅಂಗಡಿಗಳ ಮುಂದೆ ಸಾಲಿನಲ್ಲಿ ನಿಂತಿದ್ದಾರೆ. ರಸಗೊಬ್ಬರ ಅಕ್ರಮ ದಾಸ್ತಾನು ಬೇಡಿಕೆ ಹೆಚ್ಚುವಂತೆ ಮಾಡಿದ್ದು, ಕಾಳಸಂತೆಯಲ್ಲಿ ಹೆಚ್ಚಿನ ದರಕ್ಕೆ ಮಾರಾಟ ಮಾಡುವ ಮೂಲಕ ಭಾರಿ ಭ್ರಷ್ಟಾಚಾರ ನಡೆಯುತ್ತಿದೆ.**
>
> **–ರಾಜ್ಯ ಬಿಜೆಪಿ ನಾಯಕರ ಆರೋಪ**

ಕರ್ನಾಟಕದಲ್ಲಿ 1.35 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಇದ್ದು, ಸಮರ್ಪಕ ನಿರ್ವಹಣೆಯಿಂದ ಸಮಸ್ಯೆ ಪರಿಹಾರ ಆಗಲಿದೆ. ರಾಜ್ಯ ಸರ್ಕಾರ ಸೊಸೈಟಿಗಳ ಮೂಲಕ ರೈತರಿಗೆ ಗೊಬ್ಬರ ಹಂಚಿಕೆ ಮಾಡಬೇಕು. ಬೇರೆ ರಸಗೊಬ್ಬರ ಖರೀದಿಸಿದರೆ ▶ 6ನೇ ಪುಟಕ್ಕೆ

ಈ ಬಾರಿ 1.36 ಲಕ್ಷ ಮೆಟ್ರಿಕ್ ಟನ್ ಕೊರತೆ

ಕೃಷಿ ಸಚಿವ ಚಲುವರಾಯಸ್ವಾಮಿ ಸ್ಪಷ್ಟನೆ

ಬೆಂಗಳೂರು,ಜು.30– ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಪೂರೈಕೆಯಾಗಬೇಕಾಗಿದ್ದ ಯೂರಿಯಾ ರಸಗೊಬ್ಬರದಲ್ಲಿ ಈ ಬಾರಿ 1.36 ಲಕ್ಷ ಮೆಟ್ರಿಕ್ ಟನ್ ಕೊರತೆಯಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ರಸಗೊಬ್ಬರ ವಿತರಣೆಯಲ್ಲಿ ಸಮಸ್ಯೆಯಾಗಿದ್ದು, ಅದನ್ನು ನಿಭಾಯಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಎಲ್ಲಾ ಗೊಂದಲಗಳು ಬಗೆಹರಿಯಲಿವೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಸ್ಪಷ್ಟಪಡಿಸಿದರು.



ವಿಕಾಸಸೌಧದ ತಮ್ಮ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದ ಸಚಿವರು, ರಾಜ್ಯದಲ್ಲಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ 3 ಮುಂಗಾರು ಹಂಗಾಮಿನಲ್ಲಿ ಇದೇ ಸರ್ಕಾರ ಅಧಿಕಾರದಲ್ಲಿದೆ. ನಾನೇ ಕೃಷಿ ಸಚಿವನಾಗಿ ಇದ್ದೇನೆ. ಈವರೆಗೆ ಉಂಟಾಗದ ಸಮಸ್ಯೆ ಈಗೇಕೆ ಎಂಬುದನ್ನು ವಿಶ್ಲೇಷಿಸಬೇಕಾಗಿದೆ. ಯೂರಿಯಾ ರಸಗೊಬ್ಬರ ಪೂರೈಕೆಯಲ್ಲಿನ ಕೊರತೆಯೇ ಈ ಎಲ್ಲಾ ಸಮಸ್ಯೆಗಳು ಹೆಚ್ಚಲು ▶ 6ನೇ ಪುಟಕ್ಕೆ

ಧರ್ಮಸ್ಥಳದಲ್ಲಿ ಶವಗಳ ಹೂತಿಟ್ಟ ಪ್ರಕರಣ

ನಿವೃತ್ತ ಪೊಲೀಸ್ ಅಧಿಕಾರಿ ಹೆಸರು ತಳುಕು

- ಹೆಣ ಹೂಳಲು ಪೊಲೀಸ್ ಅಧಿಕಾರಿ ಸಾಥ್ ನೀಡಿದ್ದಾಗಿ ತಿಳಿಸಿದ ದೂರುದಾರ
- ನೇತ್ರಾವತಿ ಸ್ನಾನಘಟ್ಟದ ಬಳಿಯ ಅರಣ್ಯದಲ್ಲಿ ಉತ್ಖನನ ಕಾರ್ಯ ಮುಂದುವರಿಕೆ

ಧರ್ಮಸ್ಥಳ, ಜು.30–ಧರ್ಮಸ್ಥಳ ಗ್ರಾಮದಲ್ಲಿ ನೂರಾರು ಶವಗಳನ್ನು ಹೂತಿಟ್ಟ ಪ್ರಕರಣ ಸಂಬಂಧ ಟ್ವಿಸ್ಟ್ ಸಿಕ್ಕಿದ್ದು, ದೂರುದಾರ ವ್ಯಕ್ತಿ ನನಗೆ ಹೆಣ ಹೂಳಲು ಓರ್ವ ಪೊಲೀಸ್ ಅಧಿಕಾರಿ ಸಾಥ್ ನೀಡಿರುವುದಾಗಿ ಎಸ್ಐಟಿಗೆ ತಿಳಿಸಿದ್ದಾನೆ.



ದೂರುದಾರನ ಮಾಹಿತಿ ಬೆನ್ನಲ್ಲೇ ಎಸ್ಐಟಿ ಅಧಿಕಾರಿಗಳು 1995ರಿಂದ ಧರ್ಮಸ್ಥಳ ಔಟ್‌ಪೋಸ್ಟ್ ಪೊಲೀಸ್ ಠಾಣೆಯಲ್ಲಿ ಕೆಲಸ ಮಾಡಿದವರ ಲಿಸ್ಟ್ ನೀಡುವಂತೆ ದಕ್ಷಿಣ ಕನ್ನಡ ಜಿಲ್ಲಾ ಎಸ್ಪಿಗೆ ಪತ್ರ ಕಳುಹಿಸಿದ್ದಾರೆ. ಎರಡನೇ ದಿನವಾದ ಇಂದು ಎಸಿ ಸ್ಟೆಲ್ಲಾ ವರ್ಗೀಸ್, ಡಿಐಜಿ ಅನುಚೇತ್, ತನಿಖಾಧಿಕಾರಿ ಜಿತೇಂದ್ರ ದಯಾಮ ಅವರ ಸಮ್ಮುಖದಲ್ಲೇ ಒಟ್ಟು 20 ಕಾರ್ಮಿಕರಿಂದ ಉತ್ಖನನ ಕಾರ್ಯ ನಡೆದಿದೆ. ಇಂದು ಒಂದೇ ಸಮಯದಲ್ಲಿ ಎರಡು ಪಾಯಿಂಟ್‌ನಲ್ಲಿ ಅಗೆದಿದ್ದು, ಜೊತೆಗೆ 2ರಿಂದ 8 ಸಂಖ್ಯೆಯವರೆಗೆ ಅರಣ್ಯ ಪ್ರದೇಶದಲ್ಲಿ ಗುರುತಿಸಲಾಗಿದ್ದು, ಈ ಜಾಗದಲ್ಲಿ ಹಿಟಾಚಿ ಹೋಗೋದು ಕಷ್ಟವಾಗಿದೆ. ▶ 6ನೇ ಪುಟಕ್ಕೆ

2 ಕಾರ್ಡ್, ಹರಿದ ರವಿಕೆ ಪತ್ತೆ

ಧರ್ಮಸ್ಥಳ ಗ್ರಾಮದಲ್ಲಿ ಶವ ಹೂತ ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ಖನನದ ವೇಳೆ ಸ್ಥಳದಲ್ಲಿ ಒಂದು ಪಾನ್ ಕಾರ್ಡ್, ಮತ್ತೊಂದು ಡೆಬಿಡ್ ಕಾರ್ಡ್ ಮತ್ತು ಹರಿದ ಕೆಂಪು ಬಣ್ಣದ ರವಿಕೆ ಪತ್ತೆಯಾಗಿದೆ ಎಂದು ದೂರುದಾರನ ಪರ ವಕೀಲ ಎನ್.ಮಂಜುನಾಥ್ ಹೇಳಿದ್ದಾರೆ. ಈ ಸಂಬಂಧ ಮಾಧ್ಯಮಗಳಿಗೆ ಎಸ್ಐಟಿ ಮೂಲಗಳನ್ನು ಆಧರಿಸಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ಸೈಟ್ ಸಂಖ್ಯೆ 1ರಲ್ಲಿ ಸುಮಾರು 2.5 ಅಡಿ ಆಳದಲ್ಲಿ ಹರಿದ ಕೆಂಪು ರವಿಕೆ, ಪ್ಯಾನ್ ಕಾರ್ಡ್ ಮತ್ತು ಎಟಿಎಂ ಕಾರ್ಡ್ ಪತ್ತೆಯಾಗಿದ್ದು, 1 ಕಾರ್ಡ್‌ನಲ್ಲಿ ಪುರುಷನ ಹೆಸರು ಇದ್ದರೆ, ಇನ್ನೊಂದು ಕಾರ್ಡ್‌ನಲ್ಲಿ ಲಕ್ಷ್ಮಿ ಎಂಬ ಮಹಿಳೆ ಹೆಸರು ಇದೆ. ಸಾಕ್ಷ್ಯಗಳು ಸಿಕ್ಕಿದ ಕಾರಣ ನಮಗೆ ಹೊಸ ಭರವಸೆ ಮೂಡಿದೆ. ನಾವು ಎಸ್ಐಟಿ ಕೆಲಸದಲ್ಲಿ ಸಂಪೂರ್ಣ ನಂಬಿಕೆ ಇಟ್ಟಿದ್ದೇವೆ. ವಿಶೇಷ ತನಿಖಾ ತಂಡ ಶ್ಲಾಘನೀಯ ಕೆಲಸ ಮಾಡುತ್ತಿದೆ ಎಂದು ಹೇಳಿದ್ದಾರೆ.

ಎಸ್ಐಟಿ ಮುಖ್ಯಸ್ಥ ಪ್ರಣಬ್ ಮೊಹಾಂತಿ ಕೇಂದ್ರ ಸೇವೆಗೆ

ಬೆಂಗಳೂರು: ಕರ್ನಾಟಕದ ಆಂತರಿಕ ಭದ್ರತಾ ವಿಭಾಗದ ಡಿಜಿಪಿ ಪ್ರಣಬ್ ಮೊಹಾಂತಿ ಅವರು ಧರ್ಮಸ್ಥಳದ ನಿಗೂಢ ಸಾವಿನ ಪ್ರಕರಣದ ತನಿಖೆ ನಡೆಸುತ್ತಿರುವಾಗಲೇ ಕೇಂದ್ರ ಸೇವೆಗೆ ಆಯ್ಕೆಯಾಗಿದ್ದಾರೆ. ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂತು ಹಾಕಲಾಗಿದೆ ಎಂಬ ದೂರಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರ ರಚಿಸಿರುವ ವಿಶೇಷ ತನಿಖಾ ತಂಡ (ಎಸ್ಐಟಿ)ದ ನೇತೃತ್ವವನ್ನು ಪ್ರಣಬ್ ಮೊಹಾಂತಿ ವಹಿಸಿದ್ದಾರೆ. ಈ ಸಂಬಂಧ ತನಿಖೆ ಚುರುಕುಗೊಂಡಿರುವಾಗಲೇ ಅವರು ಸಿಬಿಐ ಮತ್ತು ಎನ್ಐಎನಂತಹ ಸಂಸ್ಥೆಗಳ ಮಹಾನಿರ್ದೇಶಕರಾಗುವ ಸಾಧ್ಯತೆ ಇದೆ. ಕೇಂದ್ರ ಸರ್ಕಾರದ ನೇಮಕಾತಿಗಳ ಸಂಪುಟ ಸಮಿತಿಯು ಇತ್ತೀಚೆಗೆ ನಡೆಸಿದ ಸಭೆಯಲ್ಲಿ ದೇಶಾದ್ಯಂತ 35 ಐಪಿಎಸ್ ಅಧಿಕಾರಿಗಳನ್ನು ಕೇಂದ್ರ ಸೇವೆಗೆ ಆಯ್ಕೆ ಮಾಡಿದೆ. ಈ ಪಟ್ಟಿಯಲ್ಲಿ ಕರ್ನಾಟಕದಿಂದ ಸ್ಥಾನ ಪಡೆದ ಏಕೈಕ ಅಧಿಕಾರಿ ಪ್ರಣಬ್ ಮೊಹಾಂತಿ ಆಗಿದ್ದಾರೆ. ಈ ಹಿಂದೆಯೂ ಅವರು ಸ್ವಲ್ಪ ಸಮಯ ಕೇಂದ್ರ ಸೇವೆಯಲ್ಲಿದ್ದರು. ಇದೀಗ ಮತ್ತೆ ಕೇಂದ್ರ ಸೇವೆಗೆ ಅವರನ್ನು ಆಯ್ಕೆ ಮಾಡಲಾಗಿದೆ. ಈ ಮೂಲಕ ಕೇಂದ್ರ ತನಿಖಾ ದಳ (ಸಿಬಿಐ) ಮತ್ತು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್ಐಎ)ಯಂತಹ ಕೇಂದ್ರ ತನಿಖಾ ಸಂಸ್ಥೆಗಳ ಮಹಾನಿರ್ದೇಶಕ ಹುದ್ದೆಗಳಿಗೆ ಅವರು ಅರ್ಹರಾಗಿದ್ದಾರೆ. ಈ ಬಗ್ಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಪ್ರತಿಕ್ರಿಯಿಸಿದ್ದು, ಒಂದು ವೇಳೆ ಪ್ರಣಬ್ ಮೊಹಾಂತಿ ಕೇಂದ್ರ ಸೇವೆಗೆ ಆಯ್ಕೆಯಾದರೆ ಎಸ್ಐಟಿಗೆ ಬೇರೆ ಅಧಿಕಾರಿಯನ್ನು ನೇಮಕ ಮಾಡುವ ಬಗ್ಗೆ ಚರ್ಚಿಸುತ್ತೇವೆ. ಕೇಂದ್ರ ಸೇವೆಗೆ ವರ್ಗಾವಣೆಗೊಂಡರೂ ಎಸ್ಐಟಿ ತನಿಖೆಯನ್ನು ಮುಂದುವರಿಸಲು ಅವಕಾಶವಿದೆಯೇ ಎಂಬುದನ್ನೂ ಪರಿಶೀಲಿಸುತ್ತೇವೆ ಎಂದು ಸ್ಪಷ್ಟಪಡಿಸಿದರು. ಎಸ್ಐಟಿ ತನಿಖೆ ಕುರಿತು ಕೇಳಿದಾಗ, ಧರ್ಮಸ್ಥಳ ಪ್ರಕರಣದ ಎಸ್ಐಟಿ ತನಿಖೆ ಬಗ್ಗೆ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ತನಿಖೆ ಮುಗಿದು ವರದಿ ಬಂದ ನಂತರ ಮಾತನಾಡಬಹುದು. ಅಲ್ಲಿಯವರೆಗೆ ನಾನು ಮಾತನಾಡುವುದಿಲ್ಲ ಎಂದು ಹೇಳಿದರು.



ಪ್ರಣಬ್ ಮೊಹಾಂತಿ

ಅತ್ಯಾಚಾರ ಪ್ರಕರಣ

ನಾಳೆ ಪ್ರಜ್ವಲ್ ರೇವಣ್ಣ ಭವಿಷ್ಯ ನಿರ್ಧಾರ

ಬೆಂಗಳೂರು: ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ವಿರುದ್ಧ ದಾಖಲಾಗಿರುವ ನಾಲ್ಕು ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ ಪ್ರಕರಣಗಳಲ್ಲಿ ಒಂದರ ತೀರ್ಪನ್ನು ಬುಧವಾರ ವಿಶೇಷ ನ್ಯಾಯಾಲಯ ಆ.1ಕ್ಕೆ ಮುಂದೂಡಿದೆ. ಹೊಳೆನರಸೀಪುರದಲ್ಲಿ ಮನೆಕೆಲಸದ ಮಹಿಳೆ ಮೇಲೆ ಪ್ರಜ್ವಲ್ ರೇವಣ್ಣ ಅತ್ಯಾಚಾರ ಎಸಗಿದ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಂತೋಷ ಗಜಾನನ ಭಟ್ ಅವರು ಆದೇಶವನ್ನು ಇಂದಿಗೆ (ಬುಧವಾರ)ಕಾಯ್ದಿರಿಸಿದ್ದರು.



ನ್ಯಾಯಾಧೀಶ ಸಂತೋಷ್ ಗಜಾನನ್ ಭಟ್, ಎರಡೂ ಕಡೆಯ ವಕೀಲರಿಂದ ಕೆಲವು ಸ್ಪಷ್ಟೀಕರಣ ಕೇಳಿದರು. ಗೂಗಲ್ ಮ್ಯಾಪ್ ಅನ್ನು ಸಾಕ್ಷಿಯಾಗಿ ಪರಿಗಣಿಸಬಹುದೇ, ಸ್ಯಾಮ್‌ಸಂಗ್ ಜೆ 4 ಮೊಬೈಲ್ ಸೀಜ್ ಮಾಡಿರುವ ಬಗ್ಗೆಯೂ ಮಾಹಿತಿ ಕೇಳಿದ ನಂತರ, ಸ್ಪಷ್ಟೀಕರಣ ಅಗತ್ಯವಿರುವುದರಿಂದ ಆಗಸ್ಟ್ 1ಕ್ಕೆ ಆದೇಶ ಪ್ರಕಟಿಸುವುದಾಗಿ ನ್ಯಾಯಾಧೀಶರು ಹೇಳಿದರು.

ಮೈಸೂರಿನ ಡ್ರಗ್ಸ್ ಫ್ಯಾಕ್ಟರಿ ಸಂಬಂಧ ಲೋಕಸಭೆಯಲ್ಲಿ ಯದುವೀರ್ ಪ್ರಸ್ತಾಪ

- ಸ್ಥಳೀಯ ಪೊಲೀಸರ ವೈಫಲ್ಯದ ಬಗ್ಗೆಯೂ ಉಲ್ಲೇಖ
- ಕರ್ನಾಟಕದಲ್ಲಿ ಪೊಲೀಸ್ ವ್ಯವಸ್ಥೆ ಕುಸಿದಿರುವ ಆರೋಪ

ನವದೆಹಲಿ,ಜು.30–ಮೈಸೂರಿನಲ್ಲಿ ಡ್ರಗ್ಸ್ ತಯಾರಿಕಾ ಘಟಕ ಪತ್ತೆಯಾಗಿರುವ ಬಗ್ಗೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಇಂದು ಸಂಸತ್ ಗಮನ ಸೆಳೆದು ಈ ಪ್ರಕರಣದಲ್ಲಿ ಭಾಗಿಯಾದವರ ವಿರುದ್ಧ ಕೇಂದ್ರ ಗೃಹ ಸಚಿವಾಲಯ ಕ್ರಮಕ್ಕೆ ಮುಂದಾಗಬೇಕು ಎಂದು ಒತ್ತಾಯಿಸಿದರು.



ಯದುವೀರ್ ಒಡೆಯರ್

ಇದೇ ವೇಳೆ ಕರ್ನಾಟಕ ಪೊಲೀಸ್ ವೈಫಲ್ಯದ ಬಗ್ಗೆಯೂ ಸಂಸದರು ಎಳೆ ಎಳೆಯಾಗಿ ಬಿಡಿಸಿಟ್ಟರು. ಕರ್ನಾಟಕದಲ್ಲಿ ಸಂಪೂರ್ಣವಾಗಿ ಪೊಲೀಸ್ ವ್ಯವಸ್ಥೆ ಕುಸಿದಿದೆ ಎಂದು ಅವರು ಆರೋಪಿಸಿದರು.

ಸಾಂಸ್ಕೃತಿಕ ನಗರಿ ಮೈಸೂರು ಶಿಕ್ಷಣಕ್ಕೆ, ಸಂಸ್ಕೃತಿಗೆ ಹೆಸರುವಾಸಿಯಾಗಿದ್ದು, ಈ ನಗರದಲ್ಲಿ ಸರ್ಕಾರಿ ಜಾಗದಲ್ಲೇ ಡ್ರಗ್ಸ್ ತಯಾರಿಕಾ ಘಟಕ ಕಾರ್ಯನಿರ್ವಹಿಸುತ್ತಿತ್ತು. ಅದರ ಬಗ್ಗೆ ಸ್ಥಳೀಯ ಪೊಲೀಸರು ಯಾವುದೇ ರೀತಿಯಲ್ಲೂ ಕ್ರಮ ಕೈಗೊಂಡಿರಲಿಲ್ಲ. ಅಚ್ಚರಿ ಎಂದರೆ ಮಹಾರಾಷ್ಟ್ರ ಪೊಲೀಸರು ಈ ಘಟಕದ ಮೇಲೆ ದಾಳಿ ನಡೆಸಿ 390 ಕೋಟಿ ರೂ. ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡು ನಾಲ್ವರನ್ನು ಬಂಧಿಸಿದ್ದಾರೆ. ಮೈಸೂರು ನಗರ ಪ್ರದೇಶದಲ್ಲೇ ಡ್ರಗ್ಸ್ ತಯಾರಿಕಾ ಘಟಕ ಕಾರ್ಯನಿರ್ವಹಿಸುತ್ತಿದ್ದರೂ ಸ್ಥಳೀಯ ಪೊಲೀಸರು ಪತ್ತೆ ಹಚ್ಚದೇ ಇದ್ದುದು ಜನತೆಗೆ ಶಾಕಿಂಗ್ ವಿಚಾರವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು. ಈ ಪ್ರಕರಣದ ಬಗ್ಗೆ ರಾಜ್ಯ ಗೃಹ ಸಚಿವರನ್ನು ಕೇಳಿದರೆ ▶ 6ನೇ ಪುಟಕ್ಕೆ

ಭಾರತದ ಸರಕುಗಳ ಮೇಲೆ ಶೇ.25ರಷ್ಟು ಸುಂಕ ವಿಧಿಸಿದ ಟ್ರಂಪ್

ವಾಷಿಂಗ್ಟನ್, ಜು.30– ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಆಗಸ್ಟ್ 1ರಿಂದ ಶೇ.25ರಷ್ಟು ಸುಂಕ ವಿಧಿಸಲಾಗುವುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಈ ಕುರಿತು ತಮ್ಮದೇ ಒಡೆತನದ 'ಟ್ರುತ್' ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ನೀಡಿದ್ದಾರೆ. ಭಾರತ ನಮ್ಮ ಸ್ನೇಹಿತನಾಗಿದ್ದರೂ ಅವರೊಂದಿಗೆ ನಾವು ವ್ಯವಹಾರ ಮಾಡಿರುವುದು ಕಡಿಮೆಯೇ.




ಆ.1ರಿಂದಲೇ ಜಾರಿ

ಅಮೆರಿಕದ ಸರಕುಗಳ ಮೇಲೆ ಅವರು (ಭಾರತ) ಅಧಿಕ ಸುಂಕ ವಿಧಿಸಿರುವುದೇ ಅದಕ್ಕೆ ಕಾರಣ. ಎಲ್ಲ ದೇಶಗಳಿಗೆ ಹೋಲಿಸಿದರೆ ಅವರದ್ದು ಅಧಿಕ ಸುಂಕವಾಗಿದೆ. ಉಕ್ರೇನ್‌ನಲ್ಲಿ ನಡೆಯುತ್ತಿರುವ ಹತ್ಯೆಯನ್ನು ರಷ್ಯಾವು ನಿಲ್ಲಿಸಬೇಕು ಎಂದು ಜಗತ್ತು ಆಗ್ರಹಿಸುತ್ತಿರುವಾಗ ಭಾರತವು ರಷ್ಯಾದಿಂದ ಇಂಧನ ಖರೀದಿಸುತ್ತಿದೆ. ಇದು ಒಳ್ಳೆಯದಲ್ಲ. ಆದ್ದರಿಂದ ಆ.1ರಿಂದ ಸುಂಕ ವಿಧಿಸಲಾಗಿದೆ ಎಂದು ಹೇಳಿದ್ದಾರೆ.

ಮೈಸೂರಲ್ಲಿ ನೂರಾರು ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡ ವಿಚಾರ ಗೃಹ ಸಚಿವ ಪರಮೇಶ್ವರ್‌ಗೇ ಅರಿವಿಲ್ಲ!

ಬೆಂಗಳೂರು,ಜು.30(ಕೆಎಂಶಿ)–ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕೋಟ್ಯಾಂತರ ರೂ. ಮೌಲ್ಯದ ಮಾದಕ ದ್ರವ್ಯ (ಡ್ರಗ್ಸ್) ವಶಕ್ಕೆ ಪಡೆದುಕೊಂಡಿದ್ದರೂ ರಾಜ್ಯದ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರಿಗೆ ಮಾಹಿತಿಯೇ ಇಲ್ಲ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂಬೈ ಪೊಲೀಸ್ ನಮ್ಮ ರಾಜ್ಯದ ಪೊಲೀಸ್ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಸಿ, ಮಾದಕದ್ರವ್ಯ ಬೃಹತ್ ಜಾಲ ಪತ್ತೆ ಹಚ್ಚಿದ್ದಾರೆ. ಈಗಾಗಲೇ ಆರೋಪಿಗಳನ್ನು ವಶಕ್ಕೆ ಪಡೆದು, ತನಿಖೆ ನಡೆಸುತ್ತಿದ್ದಾರೆ. ಮುಂಬೈನಲ್ಲಿ ಡ್ರಗ್ಸ್ ದಂಧೆಕೋರರನ್ನು ಬಂಧಿಸಿ ನಡೆಸಿದ ವಿಚಾರಣೆ ಮಾಹಿತಿ ಆಧರಿಸಿ ಮೈಸೂರಿನಲ್ಲಿ ದಾಳಿ ಮಾಡಿ ಕೋಟ್ಯಾಂತರ ರೂ. ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ. ಮಹಾರಾಷ್ಟ್ರ ಪೊಲೀಸರು ತನಿಖೆ ನಡೆಸುತ್ತಿರುವುದರಿಂದ ನಮಗೆ ಪೂರ್ಣ ▶ 6ನೇ ಪುಟಕ್ಕೆ



ಮೈಸೂರು ನಗರ ಪೊಲೀಸರ ವಿನೂತನ ಪ್ರಯೋಗ ಮನೆ ಮನೆಗೆ ಪೊಲೀಸ್ ವ್ಯವಸ್ಥೆ ಜಾರಿ



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಮನೆ ಮನೆಗೆ ಪೊಲೀಸ್ ವ್ಯವಸ್ಥೆಗೆ ಅಂತರರಾಷ್ಟ್ರೀಯ ಮಾಜಿ ಕ್ರಿಕೆಟ್ ಪಟು ಜಾವಗಲ್ ಶ್ರೀನಾಥ್ ಚಾಲನೆ ನೀಡಿದರು. ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿಗಳಾದ ಆರ್.ಎನ್.ಬಿಂದುಮಣಿ, ಕೆ.ಎಸ್.ಸುಂದರ್‌ರಾಜ್, ಎಸಿಪಿಗಳಾದ ಮೋಹನ್‌ಕುಮಾರ್, ಅಶ್ವಥ್ ನಾರಾಯಣ್, ರಾಜೇಂದ್ರ, ರವಿಪ್ರಸಾದ್, ಶಿವಶಂಕರ್ ಚಿತ್ರದಲ್ಲಿದ್ದಾರೆ.

- ಮಾಜಿ ಕ್ರಿಕೆಟ್ ಪಟು ಜಾವಗಲ್ ಶ್ರೀನಾಥ್‌ರಿಂದ ಚಾಲನೆ
- ಪೊಲೀಸರ ಕಷ್ಟದ ಕೆಲಸ ಹತ್ತಿರದಿಂದ ನೋಡಬೇಕು
- ಜನಸ್ನೇಹಿ ಪೊಲೀಸ್ ಇದ್ದರೆ ಅಪರಾಧ ಕೃತ್ಯಗಳಿಗೆ ಕಡಿವಾಣ
- ಪ್ರತಿ 250 ಮನೆಗೆ ಒಬ್ಬ ಬೀಟ್ ಪೊಲೀಸ್ ನಿಯೋಜನೆ
- ಮನೆಗೆ ಬರುವ ಪೊಲೀಸರಿಗೆ ಮಾಹಿತಿ ನೀಡಿ ಸಮಸ್ಯೆ ಪರಿಹರಿಸಿಕೊಳ್ಳಿ

ಮೈಸೂರು, ಜು.30(ಬಿಎಲ್‌ಯು)– ನಾಗರಿಕರು ಹಾಗೂ ಪೊಲೀಸರ ನಡುವೆ ಅಂತರ ಕಡಿಮೆ ಮಾಡಲು ಜನಸ್ನೇಹಿ 'ಮನೆ ಮನೆಗೆ ಪೊಲೀಸ್' ವಿನೂತನ ವ್ಯವಸ್ಥೆಗೆ ಮೈಸೂರಿನಲ್ಲಿ ಬುಧವಾರ ಚಾಲನೆ ನೀಡಲಾಯಿತು.

ನಾಗರಿಕರ ಸಹಕಾರದೊಂದಿಗೆ ನಗರದಲ್ಲಿ ನಡೆಯುವ ಅಪರಾಧ ಚಟುವಟಿಕೆಗೆ ಕಡಿವಾಣ ಹಾಕಲು ಪೊಲೀಸರು ಜನಸ್ನೇಹಿ ವ್ಯವಸ್ಥೆ ಆರಂಭಿಸಿದ್ದಾರೆ.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಇಂದು ಮಾಜಿ ಕ್ರಿಕೆಟ್ ಪಟು ಜಾವಗಲ್ ಶ್ರೀನಾಥ್ ಅವರು ಮನೆ ಮನೆಗೆ ಪೊಲೀಸ್ ವ್ಯವಸ್ಥೆಯನ್ನು ವಿದ್ಯುಕ್ತವಾಗಿ ಉದ್ಘಾಟಿಸಿದರು.

ತರುವಾಯ ಮಾತನಾಡಿದ ಶ್ರೀನಾಥ್, 2010ರಲ್ಲಿ ನಾನು ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್‌ನಲ್ಲಿ ಕಾರ್ಯದರ್ಶಿಯಾಗಿದ್ದಾಗ ಪೊಲೀಸರೊಂದಿಗೆ ಸಂಪರ್ಕ ಬೆಳೆಯಿತು. ಅಂದು ಬೆಂಗಳೂರಿನ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದೆ. ಆ ಸಂದರ್ಭದಲ್ಲಿ ಪೊಲೀಸರ ಕಷ್ಟದ ಕೆಲಸ ನನಗೆ ಅರಿವಾಯಿತು ಎಂದು ಹೇಳಿದರು.

ಬೆಳಿಗ್ಗೆಯಿಂದ ಸಂಜೆವರೆಗೆ ನಾವು ಪೊಲೀಸರ ಜೊತೆ ಇದ್ದರೆ ಅವರ ಕಷ್ಟ ಏನೆಂದು ಅರಿವಾಗುತ್ತದೆ. ಈ ಹಿನ್ನೆಲೆಯಲ್ಲಿ ಪೊಲೀಸರ ಸವಾಲಿನ ಕೆಲಸ ಹೇಗಿರುತ್ತದೆ ಎಂದು ನಾವು ನಾಗರಿಕರಿಗೆ ತಿಳಿಸಬೇಕು. ಆಗ ನಾಗರಿಕರು ಪೊಲೀಸರ ಜೊತೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳುತ್ತಾರೆ ಎಂದು ಜಾವಗಲ್ ಶ್ರೀನಾಥ್ ಸಲಹೆ ನೀಡಿದರು.

ಜನರನ್ನು ಕೆಲಸದಿಂದ ಸಮಾಧಾನಪಡಿಸುವುದು ಕಷ್ಟದ ಕೆಲಸ. ಆದರೆ ನಾಗರಿಕರನ್ನು ಸ್ನೇಹಭಾವದಿಂದ ನೋಡಿ ದರೆ ಅದ್ಭುತ ಕೆಲಸವಾಗಲಿದೆ. ಇದರಿಂದ ಮನೆ ಮನೆಗೆ ಪೊಲೀಸ್ ವ್ಯವಸ್ಥೆ ಯಶಸ್ವಿಯಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಪೊಲೀಸರು ಮನೆಗಳಿಗೆ ಬಂದು ಹೋದರೆ ಜನರು ಕಾನೂನು ಸುವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳುತ್ತಾರೆ. ಇದರಿಂದ ಕೆಲಸ ಮಾಡಲು ಪೊಲೀಸರಿಗೆ ಧನಾತ್ಮಕ ಚಿಂತನೆ ಮೂಡುತ್ತದೆ. ಈ ಹಿನ್ನೆಲೆಯಲ್ಲಿ ▶ 6ನೇ ಪುಟಕ್ಕೆ

ಜನರು ಸಹಕರಿಸಿದರೆ ಈ ನೂತನ ವ್ಯವಸ್ಥೆ ಯಶಸ್ವಿ

ಮೈಸೂರು: ಪೊಲೀಸರು ನಾಗರಿಕರ ರಕ್ಷಕರಾಗಿದ್ದಾರೆ. ಅವರ ಕರ್ತವ್ಯ ಪಾಲನೆಯಲ್ಲಿ ಸಮಾಜದ ಸಹಕಾರ ಅತ್ಯಗತ್ಯ. ಅದಿಲ್ಲದಿದ್ದರೆ ಪೊಲೀಸರು ಕರ್ತವ್ಯ ನಿರ್ವಹಿಸುವುದು ಬಹಳ ಕಷ್ಟವಾಗುತ್ತದೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅಭಿಪ್ರಾಯಪಟ್ಟರು.

50 ಮನೆಗಳಿರುವ ಒಂದು ಕ್ಲಸ್ಟರ್ ರಚನೆ ಮಾಡಲಾಗುವುದು. ಹೀಗೆ ರಚನೆಯಾದ 3 ರಿಂದ 5 ಕ್ಲಸ್ಟರ್‌ಗಳ 250 ಮನೆಗಳಿಗೆ ಒಬ್ಬ ಬೀಟ್ ಪೊಲೀಸರನ್ನು ನಿಯೋಜನೆ ಮಾಡಲಾಗುವುದು. ಈ ಜವಾಬ್ದಾರಿ ವಹಿಸಿಕೊಂಡ ಪೊಲೀಸ್, ಮನೆಗಳಿಗೆ ಭೇಟಿ ನೀಡಿ ಮನೆ ಮನೆಗೆ ಪೊಲೀಸ್ ವ್ಯವಸ್ಥೆ ಬಗ್ಗೆ ಮಾಹಿತಿ ನೀಡಬೇಕು. ಜೊತೆಗೆ ಆಯಾಯ ಏರಿಯಾಗಳಲ್ಲಿ ನಡೆಯುವ ಪ್ರಕರಣದ ಬಗ್ಗೆ ಮಾಹಿತಿ ನೀಡುವರು. ಇದರಿಂದ ನಾಗರಿಕರು ಎಚ್ಚೆತ್ತುಕೊಳ್ಳುತ್ತಾರೆ ಎಂದು ಅವರು ಹೇಳಿದರು.

ಪ್ರತಿಯೊಂದು ಮನೆಯಲ್ಲಿ ಒಬ್ಬರ ಫೋನ್ ನಂಬರ್ ಸೇರಿದಂತೆ ಇತರೆ ಮಾಹಿತಿಯನ್ನು ಬೀಟ್ ಪೊಲೀಸ್ ಸಂಗ್ರಹಿಸುತ್ತಾರೆ. ಏರಿಯಾದಲ್ಲಿ ಯಾವುದಾದರೂ ಅಕ್ರಮ ಚಟುವಟಿಕೆ ನಡೆಯುತ್ತಿದ್ದರೆ ▶ 6ನೇ ಪುಟಕ್ಕೆ

ಮಾದಕ ವಸ್ತು ಸೇವಿಸುವವರ ವಿರುದ್ಧವೂ ಪ್ರಕರಣ ದಾಖಲು

> ಗಾಂಜಾ ಸೇರಿದಂತೆ ಯಾವುದೇ ಮಾದಕ ವಸ್ತು ಸೇವನೆ ಮಾಡಿದರೂ ಅವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು. ಮೈಸೂರಿನಲ್ಲಿ ಮಾದಕ ವಸ್ತುಗಳ ಪತ್ತೆ ಹಿನ್ನೆಲೆ ಕಳೆದ ಮೂರು ದಿನಗಳಿಂದ ನಿರಂತರವಾಗಿ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿದ್ದೇವೆ. ಆ ಸಂದರ್ಭದಲ್ಲಿ ಮಾದಕ ವಸ್ತು ಸೇವಿಸಿರುವ ಹಲವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಮಾದಕ ವಸ್ತು ಮಾರಾಟ ಮಾತ್ರವಲ್ಲದೆ ಮಾದಕ ವಸ್ತು ಸೇವನೆ ಮಾಡುವವರ ವಿರುದ್ಧ ಕೂಡ ಪ್ರಕರಣ ದಾಖಲಿಸುತ್ತೇವೆ. ಪೊಲೀಸರ ನಿರಂತರ ಕಾರ್ಯಾಚರಣೆ ನಡೆಯುತ್ತಿದೆ. ವೈದ್ಯರ ಸಲಹಾ ಚೀಟಿ ಇಲ್ಲದೆ ಔಷಧಿಗಳನ್ನು ನೀಡುವಂತಿಲ್ಲ. ಈ ಹಿನ್ನೆಲೆ ಹಲವು ಮೆಡಿಕಲ್ ಸ್ಟೋರ್‌ಗಳ ಮೇಲೆ ಕೂಡ ದಾಳಿ ಮಾಡಲಾಗಿದೆ ಎಂದರು. ಆದರೆ ಮೈಸೂರಿನಲ್ಲಿ ಪತ್ತೆಯಾದ ಡ್ರಗ್ಸ್ ಪ್ರಕರಣ ಸಂಬಂಧ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ.
>
> **–ಸೀಮಾ ಲಾಟ್ಕರ್, ನಗರ ಪೊಲೀಸ್ ಆಯುಕ್ತೆ**

ಡ್ರಗ್ಸ್ ಕೇಸ್: ಇಬ್ಬರು ಪೊಲೀಸರ ಅಮಾನತು

ಮೈಸೂರು: ಮೈಸೂರಿನ ಬನ್ನಿಮಂಟಪದ ರಿಂಗ್ ರಸ್ತೆಯ ಗ್ಯಾರೇಜ್‌ನಲ್ಲಿ ಎಂಡಿಎಂಎ ಮಾದಕ ವಸ್ತು ತಯಾರಿಕಾ ಘಟಕ ಪತ್ತೆ ಪ್ರಕರಣದಲ್ಲಿ ಕರ್ತವ್ಯ ಲೋಪ ಆರೋಪದ ಮೇರೆಗೆ ನರಸಿಂಹರಾಜ ಪೊಲೀಸ್ ಠಾಣೆಯ ಬೀಟ್ ಪೊಲೀಸ್ ಅನಿಲ್ ಹಾಗೂ ಎಸ್‌ಬಿ ಹೆಡ್‌ಕಾನ್‌ಸ್ಟೇಬಲ್ ಆಂಜನೇಯ ಅವರನ್ನು ಅಮಾನತುಗೊಳಿಸಿ ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಆದೇಶ ಹೊರಡಿಸಿದ್ದಾರೆ.

ಮೈಸೂರು ಮಿತ್ರ ಗುರುವಾರ 31 ಜುಲೈ 2025

ಮೈಸೂರು ಪಾಲಿಕೆಯಲ್ಲಿ ಇ-ಆಸ್ತಿ ತಂತ್ರಾಂಶ ಅಳವಡಿಕೆ ಕಡ್ಡಾಯ

ಹೊಸ ವ್ಯವಸ್ಥೆ ಕಲ್ಪಿಸಿರುವ ಬಗ್ಗೆ ಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್ ಮಾಹಿತಿ

ಮೈಸೂರು, ಜು.30(ಬಿಎಲ್‌ಯು)- ಆಸ್ತಿಗಳ ಸೃಜನೆ ಮತ್ತು ಹಕ್ಕು ವರ್ಗಾವಣೆಗೆ ಮೈಸೂರು ನಗರಪಾಲಿಕೆಯಲ್ಲಿ ಇ- ಆಸ್ತಿ ತಂತ್ರಾಂಶದ ಬಳಕೆಯನ್ನು ಕಡ್ಡಾಯಗೊಳಿಸಿ ಹೊಸ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ನಗರಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್ ತಿಳಿಸಿದ್ದಾರೆ.

ಮೈಸೂರು ಪಾಲಿಕೆಯ ಎಲ್ಲಾ ವಲಯ ಕಚೇರಿಗಳಲ್ಲಿ ಫಸ್ಟ್ ಇನ್ ಫಸ್ಟ್ ಔಟ್ ಮಾದರಿಯಲ್ಲಿ ಅರ್ಜಿಗಳಿಗೆ ಕಾಲಾವಧಿ ನಿಗದಿ ಮಾಡಲಾಗಿದೆ. ಅದರಂತೆ ಸಾರ್ವಜನಿಕರು ತಮ್ಮ ಅರ್ಜಿಗಳನ್ನು ಕರ್ನಾಟಕ ಒನ್ ಕೇಂದ್ರಗಳು, ಪಾಲಿಕೆ ವಲಯ ಕಚೇರಿಗಳ ಸಹಾಯವಾಣಿ ಕೇಂದ್ರಗಳ ಮೂಲಕವೇ ಅರ್ಜಿ ಸಲ್ಲಿಸಲು ಅವಕಾಶವಿದೆ. ಇ-ಆಸ್ತಿ ತಂತ್ರಾಂಶದ ಬಳಕೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಿ ಸಾರ್ವಜನಿಕರಿಗೆ ತ್ವರಿತವಾಗಿ ಸೇವೆ ಒದಗಿಸಲು ಪಾಲಿಕೆ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ಸೂಚಿಸಲಾಗಿದೆ. ಅಲ್ಲದೆ ಇದರ ಮೇಲ್ವಿಚಾರಣೆಗೆ ವಲಯ ಕಚೇರಿಗಳಿಗೆ



ಷೇಕ್ ತನ್ವೀರ್ ಆಸೀಫ್

ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಪ್ರತಿಯೊಬ್ಬ ನೋಡಲ್ ಅಧಿಕಾರಿ ಪ್ರತಿ ಶುಕ್ರವಾರ ಮಧ್ಯಾಹ್ನ 3 ಗಂಟೆಯಿಂದ ಸಂಜೆ 5.30 ಗಂಟೆವರೆಗೆ ವಲಯ ಕಚೇರಿಗೆ ಭೇಟಿ ನೀಡಬೇಕು ಎಂದು ತಾಕೀತು ಮಾಡಲಾಗಿದೆ ಎಂದಿದ್ದಾರೆ. ನೋಡಲ್ ಅಧಿಕಾರಿಗಳು ಜನಸ್ಪಂದನಾ ಕಾರ್ಯಕ್ರಮದ ಮಾದರಿಯಲ್ಲಿ ಇ-ಆಸ್ತಿ ಕುರಿತು ಸಾರ್ವಜನಿಕರಿಂದ ಕುಂದು-ಕೊರತೆಗಳನ್ನು ಆಲಿಸಿ ನಿಯಮಾನುಸಾರ ಪರಿಹಾರ ನೀಡಬೇಕು. ಪಾಲಿಕೆ ನೀಡಿರುವ ಈ ಸೌಲಭ್ಯವನ್ನು ಆಸ್ತಿಗಳ ಮಾಲೀಕರು ಸದುಪಯೋಗ ಮಾಡಿಕೊಳ್ಳುವಂತೆ ಷೇಕ್ ತನ್ವೀರ್ ಆಸೀಫ್ ಸಲಹೆ ನೀಡಿದ್ದಾರೆ.

ನೋಡಲ್ ಅಧಿಕಾರಿಗಳ ವಿವರ

- ನಗರ ಯೋಜನಾಧಿಕಾರಿ -ವಲಯ ಕಚೇರಿ 1
- ಕಾರ್ಯಪಾಲಕ ಅಭಿಯಂತರರು (ಪಶ್ಚಿಮ) -ವಲಯ ಕಚೇರಿ 2
- ಕಾರ್ಯಪಾಲಕ ಅಭಿಯಂತರರು (ಪೂರ್ವ) -ವಲಯ ಕಚೇರಿ 3
- ಉಪ ಆಯುಕ್ತರು (ಅಭಿವೃದ್ಧಿ)-ವಲಯ ಕಚೇರಿ 4
- ಆರೋಗ್ಯಾಧಿಕಾರಿ -ವಲಯ ಕಚೇರಿ 5
- ಕಾರ್ಯಪಾಲಕ ಅಭಿಯಂತರರು -(ವಿದ್ಯುತ್) ವಲಯ ಕಚೇರಿ 6
- ಉಪ ಆಯುಕ್ತರು (ಕಂದಾಯ) -ವಲಯ ಕಚೇರಿ 7
- ಉಪ ಆಯುಕ್ತರು (ಆಡಳಿತ) -ವಲಯ ಕಚೇರಿ 8
- ಹೆಚ್ಚುವರಿ ಆಯುಕ್ತರು -ವಲಯ ಕಚೇರಿ 9

ನಾಲ್ವಡಿಯವರ ಮಾದರಿಯಾಗಿಟ್ಟುಕೊಂಡು ಎಂದು ಯತೀಂದ್ರ ಹೇಳಿದ್ದರೆ ಸರಿಯಾಗ್ತಿತ್ತು!



ಸ.ರ.ಸುದರ್ಶನ

ಮೈಸೂರು,ಜು.30-ಮೈಸೂರು ಜಿಲ್ಲೆಗೆ ವರುಣಾ ನಾಲೆ, ಮೈಸೂರು ನಗರಕ್ಕೆ ಜಯದೇವ ಹಾಗೂ ಜಿಲ್ಲಾ ಆಸ್ಪತ್ರೆ, ತುಳಸಿದಾಸ್ ಆಸ್ಪತ್ರೆ, ಮೈಸೂರು ನಗರದ ರಸ್ತೆಗಳಿಗೆ ಅನುದಾನ, ನೃಪತುಂಗ ಕನ್ನಡ ಪದವಿ ಪೂರ್ವ ಕಾಲೇಜಿಗೆ ವಿಶೇಷ ಅನುದಾನ... ಹೀಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕೊಡುಗೆಯನ್ನು ಪಟ್ಟಿ ಮಾಡುತ್ತಾ ಹೋಗಬಹುದು. ಇವುಗಳೇನು ಕಡಿಮೆ ಕೊಡುಗೆ ಅಲ್ಲ ಎಂದು ಕನ್ನಡ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿ ಸ.ರ.ಸುದರ್ಶನ ಹೇಳಿದ್ದಾರೆ. ಆದರೆ ಅದನ್ನು ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆಗೆ ಹೋಲಿಸುವ ಬದಲು " ನಾಲ್ವಡಿ ಅವರನ್ನು ಮಾದರಿಯಾಗಿಟ್ಟು ಕೊಂಡು" ಎಂದು ಡಾ.ಯತೀಂದ್ರ ಹೇಳಿದ್ದರೆ ಹೆಚ್ಚು ಅರ್ಥಪೂರ್ಣವಾಗಿ ಇರುತ್ತಿತ್ತು. ದಿವಂಗತ ಗುಂಡೂರಾವ್ ಮುಖ್ಯಮಂತ್ರಿಯಾಗಿದ್ದಾಗ ಮೈಸೂರಲ್ಲಿ ಮೊದಲ ವಿಶ್ವ ಕನ್ನಡ ಸಮ್ಮೇಳನ ನಡೆಸಿದರು, ಕಲಾಮಂದಿರವನ್ನು ಕಟ್ಟಿಸಿದರು. ಆಗ ನಾವು 'ದುಂದು ವೆಚ್ಚ' ಎಂದು ಪ್ರತಿಭಟಿಸಿದ್ದೆವು, ಇಂದು ನೆನಪಿಸಿಕೊಳ್ಳುತ್ತೇವೆ ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.07.2025 ಗುರುವಾರ, ಮಳೆ ನಕ್ಷತ್ರ: ಪುಷ್ಯ, 20.07.2025 ರಿಂದ 2.08.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಚಿತ್ತ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಅರ್ಥ್ರೈಟಿಸ್, ಹೈಪೋಥೈರಾಯ್ಡಿಸಮ್ ಯೋಗ ಚಿಕಿತ್ಸಾ ಶಿಬಿರ, ವೆರಿಕೋಸ್ ವೇನ್ಸ್ ಮತ್ತು ಅಲ್ಸರ್, ಇಸುಬು ರೋಗಗಳಿಗೆ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ಕ್ಕೆ

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜೆ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.


■ **ಅನ್ನಪೂರ್ಣ ಪ್ರಕಾಶನ, ಸಿರಿಗೇರಿ, ಸಿರುಗುಪ್ಪ ತಾಲೂಕು, ಬಳ್ಳಾರಿ ಜಿಲ್ಲೆ:** ಲಂಕೇಶ್ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪ್ರದಾನ: ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್, ಪ್ರಶಸ್ತಿ ಪುರಸ್ಕೃತರು: ಪ್ರಜಾಪ್ರಗತಿ ಪತ್ರಿಕೆ ಸಂಪಾದಕ ಡಾ.ಎಸ್.ನಾಗಣ್ಣ, ಪಿ.ಲಂಕೇಶ್ ಕುರಿತು: ನಟ ಪ್ರಕಾಶ್‌ರಾಜ್, ಉಪಸ್ಥಿತರು: ನಿರ್ದೇಶಕಿ ಕವಿತಾ ಲಂಕೇಶ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಮೈಸೂರು ವಾಣಿಜ್ಯ-ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ. ಲಿಂಗರಾಜು, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಸ್ಥಳ: ಶ್ರೀ ನಟರಾಜ ಸಭಾ ಭವನ, ಶ್ರೀ ಹೊಸಮಠ, ಶಂಕರ ಮಠದ ರಸ್ತೆ, ಸಂಜೆ 5ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು):** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು, ವಾಚನ: ವಿಶ್ರಾಂತ ಕಾರ್ಯಪಾಲಕ ಅಭಿಯಂತರ ಗಮಕ ವಿದ್ವಾನ್ ಕೃ.ರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಕರುಮಾರಿಯಮ್ಮನವರ ದೇವಸ್ಥಾನ ಟ್ರಸ್ಟ್:** 95ನೇ ವರ್ಷದ ವಿಶೇಷ ಕರಗ ಮಹೋತ್ಸವ, ಮಧ್ಯಾಹ್ನ 12 ಗಂಟೆಗೆ ಅಮ್ಮನವರ ಕರಗ ಮಹೋತ್ಸವ ವಿಜೃಂಭಣೆ, ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಚಾಮುಂಡಿವನಂ ವಿದ್ಯಾರಣ್ಯಪುರಂ, ಮೈಸೂರು ದೇವಸ್ಥಾನದಿಂದ ಪ್ರಾರಂಭವಾಗಿ ದೇವಸ್ಥಾನದ ಮುಂಭಾಗದ ಪ್ರದೇಶಗಳಿಗೆ ತೆರಳಿ ಭಕ್ತಾದಿಗಳಿಂದ ಪೂಜೆ ಸ್ವೀಕರಿಸಿ, ಕರಗ ದೇವಸ್ಥಾನಕ್ಕೆ ತರುವುದು, ಸ್ಥಳ: ದೇವಸ್ಥಾನ, ವಿದ್ಯಾರಣ್ಯಪುರಂ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊ.ಸಿ.ನಾಗಣ್ಣ, ನಿರ್ಮಾಣ-ಜಿ. ಶಾಂತ ಕುಮಾರ್, 6.40-ಅರಿವಿನ ಶಿಖರ-ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಪಿ.ಸುರಭಿ ಹಾಗೂ ಎನ್.ಹೇಮಾ, ವ್ಯಾಖ್ಯಾನ: ಡಾ.ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ-ರಾಜನ್ ಐಯ್ಯರ್-ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ-ಕಾಡಿನಲ್ಲಿನ ಕಥೆಗಳು, ಪ್ರಸ್ತುತಿ: ಜಿ.ಶಾಂತಕುಮಾರ್.

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ-ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 3.00 ಹಿಂದಿ ಚಿತ್ರಗೀತೆಗಳು, 4.00 ಹಳ್ಳಿಹಾಡು-ಬನ್ನೂರು ಹೋಬಳಿ ಕುಂತನಹಳ್ಳಿಯ ಶಿವಮ್ಮ ಮತ್ತು ಸಂಗಡಿಗರು, ಪ್ರಸ್ತುತಿ-ಡಾ.ಮೈಸೂರು ಉಮೇಶ್, 4.30 ಚರ್ಚೆ, 6.50 ಕೃಷಿರಂಗ-ಭತ್ತದ ಸುಧಾರಿತ ಬೇಸಾಯ ವಿಧಾನಗಳು ಈ ಕುರಿತು ಮಂಡ್ಯದ ವಿ. ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಜಿ.ಆರ್. ದಿನೇಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಸಂಸತ್ ಸಮೀಕ್ಷಾ, 8.15 ಕರ್ನಾಟಕ ರಾಜ್ಯ ಮುಕ್ತ ವಿವಿ ಪ್ರವೇಶಾತಿ ಹಾಗೂ ಅಧ್ಯಯನ ಅವಕಾಶಗಳನ್ನು ಕುರಿತು ಕುಲಪತಿಗಳಾದ ಪ್ರೊ.ಶರಣಪ್ಪ ವಿ. ಹಲಸೆ ಅವರೊಂದಿಗೆ ಸಂವಾದ, ಭಾಗವಹಿಸುತ್ತಾರೆ-ಬೇದ್ರೆ ಮಂಜುನಾಥ್, ಪ್ರಾಯೋಜಕರು-ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಸ್. ಶಶಾಂಕ್-ವೇಣುವಾದನ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರ

ಮೈಸೂರಲ್ಲಿ ಡ್ರಗ್ಸ್ ತಯಾರಿಕಾ ಘಟಕ ಪತ್ತೆ ಪ್ರಕರಣ: ಗೃಹ ಸಚಿವ ಡಾ.ಪರಮೇಶ್ವರ್ ರಾಜೀನಾಮೆಗೆ ಆಗ್ರಹಿಸಿ

ಮೈಸೂರಲ್ಲಿ ಬಿಜೆಪಿ ಯುವ ಮೋರ್ಚಾ ಪ್ರತಿಭಟನೆ



ಮೈಸೂರಿನಲ್ಲಿ ಕಾರ್ಯಾಚರಿಸುತ್ತಿರುವ ಡ್ರಗ್ಸ್ ಮಾಫಿಯಾ ಕುರಿತು ಸಮಗ್ರ ತನಿಖೆ ನಡೆಸಬೇಕು. ಗೃಹ ಸಚಿವ ಡಾ.ಜಿ.ಪರಮೇಶ್ವರ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಸಿದ್ಧಾರ್ಥನಗರದಲ್ಲಿರುವ ನೂತನ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಬುಧವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಜು.30 (ಎಂಟಿವೈ)- ಮೈಸೂರು ನಗರದಲ್ಲಿ ವ್ಯಾಪಕವಾಗಿರುವ ಡ್ರಗ್ಸ್ ಮಾಫಿಯಾ ಹತ್ತಿಕ್ಕುವಲ್ಲಿ ಪೊಲೀಸ್ ಇಲಾಖೆ ವಿಫಲವಾಗಿದೆ ಎಂದು ಆರೋಪಿಸಿ, ಗೃಹ ಸಚಿವ ಡಾ.ಜಿ.ಪರಮೇಶ್ವರ್ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಹೊಸ ಜಿಲ್ಲಾಧಿಕಾರಿ ಕಚೇರಿ ಬಳಿ ಬಿಜೆಪಿ ನಗರ ಯುವ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಮೈಸೂರು ನಗರದಲ್ಲಿ ಡ್ರಗ್ಸ್ ಮಾಫಿಯಾ ಎಗ್ಗಿಲ್ಲದೆ ನಡೆಯುತ್ತಿದೆ. ಯುವ ಜನರು ಹಾಗೂ ವಿದ್ಯಾರ್ಥಿಗಳು ಮಾದಕ ವಸ್ತುಗಳ ಸೇವನೆಯಿಂದ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಪೊಲೀಸ್ ವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ. ಇದರಿಂದ ಡ್ರಗ್ಸ್ ಮಾಫಿಯಾ ಯಾವುದೇ ಭಯವಿಲ್ಲದೆ ಕಾರ್ಯಾಚರಿಸುತ್ತಿದೆ. ಇದಕ್ಕೆ ಪೂರಕವಾಗಿ ಮಹಾರಾಷ್ಟ್ರ ಪೊಲೀಸರು ಮೈಸೂರಿನ ಡ್ರಗ್ಸ್ ತಯಾರಿಕಾ ಕೇಂದ್ರದ ಮೇಲೆ ದಾಳಿ ನಡೆಸಿ, ನೂರಾರು ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಕಲೆ, ಸಾಹಿತ್ಯ, ಸಂಗೀತ, ಪರಂಪರೆಗೆ ಹೆಸರುವಾಸಿಯಾಗಿರುವ ಮೈಸೂರಿನಲ್ಲಿ ಡ್ರಗ್ಸ್ ಮಾಫಿಯಾ ಕಾರ್ಯಾಚರಿಸುತ್ತಿರುವುದು ಆತಂಕಕಾರಿಯಾಗಿದೆ. ಮೈಸೂರಿನಿಂದಲೇ ಬೇರೆ ಬೇರೆ ರಾಜ್ಯಗಳಿಗೆ ಡ್ರಗ್ಸ್ ಮಾರಾಟ ಮಾಡಲಾಗುತ್ತಿತ್ತು ಎನ್ನುವ ವಿಚಾರವನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಬೇಕು. ವ್ಯವಸ್ಥಿತವಾಗಿ ನಡೆಯುತ್ತಿರುವ ಡ್ರಗ್ಸ್ ಮಾಫಿಯಾ ಕುರಿತು ತನಿಖೆ ನಡೆಸಿ, ಕಾಣದ ಕೈಗಳನ್ನು ಪತ್ತೆ ಹಚ್ಚಬೇಕು ಎಂದು ಒತ್ತಾಯಿಸಿದರು.

ಮಾದಕ ದ್ರವ್ಯವನ್ನು ಉತ್ಪಾದನೆ ಮಾಡಿ ದೇಶವನ್ನು ಹಾಳು ಮಾಡುವುದರೊಂದಿಗೆ ದುಷ್ಕರ್ಮಿಗಳು ದೇಶದ್ರೋಹದ ಕೆಲಸ ಮಾಡಲು ಮುಂದಾಗಿದ್ದಾರೆ. ಮೈಸೂರಿಂದ ಮುಂಬಯಿ, ಗುಜರಾತ್, ಬೆಂಗಳೂರು, ಮಹಾರಾಷ್ಟ್ರ ಇನ್ನಿತರೆಡೆಗೆ ಡ್ರಗ್ಸ್ ಸರಬರಾಜು ಮಾಡುತ್ತಿರುವ ಮೂಲ ಜಾಲವನ್ನು ಪತ್ತೆ ಹಚ್ಚಬೇಕು. ಮುಂಬೈ ಪೊಲೀಸರು ಮೈಸೂರಿಗೆ ಬಂದು ಜಾಲ ಪತ್ತೆ ಹೆಚ್ಚಿದ್ದಾರೆ. ಇದನ್ನು ನೋಡಿದರೆ ಗೃಹ ಇಲಾಖೆ ಹಾಗೂ ಮೈಸೂರು ನಗರ ಪೊಲೀಸರ ವೈಫಲ್ಯತೆ ಎದ್ದು ಕಾಣಿಸುತ್ತದೆ. ಕಾನೂನು-ಸುವ್ಯವಸ್ಥೆ ಹಾಗೂ ದೇಶದ್ರೋಹಿ ಕೃತ್ಯಗಳನ್ನು ಹತ್ತಿಕ್ಕುವಲ್ಲಿ ವಿಫಲವಾಗಿರುವ ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಮ್ಮ ಹುದ್ದೆಗೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಜಿ.ಗಿರಿಧರ್, ಬಿ.ಎಂ.ರಘು, ವಕ್ತಾರ ಎಂ.ವಿ.ಮೋಹನ್, ಮಾಧ್ಯಮ ವಕ್ತಾರ ಮಹೇಶ್ ರಾಜೇ ಅರಸ್, ಬಿ.ಪಿ.ಮಂಜುನಾಥ್, ಜೋಗಿ ಮಂಜು, ಯುವ ಮೋರ್ಚಾ ಅಧ್ಯಕ್ಷ ಆರ್.ರಾಕೇಶ್ ಗೌಡ, ಮಾಜಿ ಅಧ್ಯಕ್ಷ ಎಂ.ಜೆ.ಕಿರಣ್‌ಗೌಡ, ಮಾಜಿ ಉಪ ಮೇಯರ್ ವಿ.ಶೈಲೇಂದ್ರ, ಮುಖಂಡರಾದ ಸು.ಮುರಳಿ, ಗೋಪಾಲ್‌ರಾವ್, ಭರತ್, ರಾಕೇಶ್ ಭಟ್, ಕೃಷ್ಣನಾಯಕ, ಗೋಕುಲ್ ಗೋವರ್ಧನ್, ಜಯರಾಮ್ ಮತ್ತಿತರರು ಪಾಲ್ಗೊಂಡಿದ್ದರು.



ವನ ಮಹೋತ್ಸವದ ಅಂಗವಾಗಿ ಇತ್ತೀಚೆಗೆ ಬನ್ನೂರು ಲಯನ್ಸ್ ಸಂಸ್ಥೆ ಹಾಗೂ ವಿದ್ಯಾಸಂಸ್ಥೆ ಆವರಣದಲ್ಲಿ 101 ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಅಧ್ಯಕ್ಷ ಲಯನ್ ಬಿ.ಬಸವರಾಜು, ಕಾರ್ಯದರ್ಶಿ ಲಯನ್ ಎಸ್. ರಾಮಚಂದ್ರ, ಖಜಾಂಚಿ ಲಯನ್ ಹೆಚ್.ಎಂ.ಸ್ವಾಮಿ, ಸದಸ್ಯರು ಪಾಲ್ಗೊಂಡಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು. 30- ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘದ ವತಿಯಿಂದ 2024-25ನೇ ಸಾಲಿನ ವಾರ್ಷಿಕ ಮಹಾಸಭೆ ಪ್ರಯುಕ್ತ ಸಂಘದ ಸದಸ್ಯರ ಮಕ್ಕಳಿಗೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತರಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ. ಆಸಕ್ತ ವಿದ್ಯಾರ್ಥಿಗಳು ತಮ್ಮ ಇತ್ತೀಚಿನ ಎರಡು ಪಾಸ್‌ಪೋರ್ಟ್ ಸೈಜಿನ ಭಾವಚಿತ್ರ, ಅಂಕಪಟ್ಟಿ ಜೆರಾಕ್ಸ್ ಅನ್ನು ಆಗಸ್ಟ್ 10ರೊಳಗೆ ಕಚೇರಿಗೆ ತಲುಪಿಸಲು ಕೋರಲಾಗಿದೆ.

ಕೋಲಾರದ ಮಹಿಳೆಯಲ್ಲಿ ವಿಶ್ವದಲ್ಲೇ ಅಪರೂಪದ ರಕ್ತದ ಗುಂಪು ಪತ್ತೆ

ಕೋಲಾರ, ಜು.30-ವಿಶ್ವದಲ್ಲೇ ಎಲ್ಲಿಯೂ ಗುರುತಿಸಲಾಗದ ಅತಿ ಅಪರೂಪದ, ವಿಜ್ಞಾನಕ್ಕೆ ಸವಾಲಾದ ವಿಸ್ಮಯ ಸಂಗತಿಯೆಂಬಂತೆ ರಕ್ತದ ಗುಂಪೊಂದು ಕೋಲಾರ ಮೂಲದ ಮಹಿಳೆಯೊಬ್ಬರಲ್ಲಿ ಪತ್ತೆಯಾಗಿದೆ.

ಕೋಲಾರದ ಆಸ್ಪತ್ರೆಯಲ್ಲಿ 38 ವರ್ಷದ ಮಹಿಳೆಯೊಬ್ಬರು ಹೃದಯ ಶಸ್ತ್ರಚಿಕಿತ್ಸೆಗೆ ದಾಖಲಾಗಿದ್ದಾಗ ಈ ಪ್ರಕರಣ ಬೆಳಕಿಗೆ ಬಂದಿದೆ ಎನ್ನಲಾಗಿದೆ. ಮಹಿಳೆಯಲ್ಲಿ ಅತ್ಯಂತ ಅಪರೂಪದ ಓ ಆರ್‌ಹೆಚ್+ (O RH+) ರಕ್ತದ ಗುಂಪು ಪತ್ತೆಯಾಗಿದೆ.

ಶಸ್ತ್ರಚಿಕಿತ್ಸೆಗಾಗಿ ಜಾಲಪ್ಪ ಆಸ್ಪತ್ರೆಯ ನಾರಾಯಣ ಹೃದಯಾಲಯದ ವೈದ್ಯರು ಮಹಿಳೆಯ ರಕ್ತಕ್ಕೆ ಹೊಂದಿಕೆಯಾಗುವ ರಕ್ತಕ್ಕಾಗಿ ಹುಡುಕಾಟ ಆರಂಭಿಸಿದ್ದರು. ಓ-ಪಾಸಿಟಿವ್ ರಕ್ತ ಸೇರಿದಂತೆ ಯಾವುದೇ

ವೈದ್ಯರಿಗೂ ಅಚ್ಚರಿ ಮೂಡಿಸಿದ ಪ್ರಕರಣ

ರಕ್ತದ ಗುಂಪಿಗೂ ಮಹಿಳೆಯ ರಕ್ತಕ್ಕೂ



ಹೊಂದಿಕೆಯಾಗಿಲ್ಲ. ಬಳಿಕ ಹೆಚ್ಚಿನ ತನಿಖೆಗಾಗಿ ಆಸ್ಪತ್ರೆಯ ರೋಟರಿ ಬೆಂಗಳೂರು ಟಿಟಿಕೆ ರಕ್ತ ಕೇಂದ್ರದಲ್ಲಿರುವ ಅಡ್ವಾನ್ಸ್ಡ್ ಇಮ್ಯುನೊಹೆಮಟಾಲಜಿ ರೆಫರೆನ್ಸ್ ಲ್ಯಾಬೋರೇಟರಿಗೆ ನೀಡಿತು.

ಅಲ್ಲಿ ಸುಧಾರಿತ ಸೆರೋಲಾಜಿಕಲ್ ತಂತ್ರಗಳನ್ನು ಬಳಸಿಕೊಂಡು, ಅಲ್ಲಿನ ತಂಡ ಮಹಿಳೆಯ ರಕ್ತವು ಪ್ಯಾನ್ರಿಯಾಕ್ಟಿವ್ ಎಂದು ಗುರುತಿಸಿದೆ.

ಮಹಿಳೆಯ ರಕ್ತದ ಮಾದರಿ ಯಾವುದೇ ರಕ್ತಕ್ಕೂ ಹೊಂದಿಕೆಯಾಗುವುದಿಲ್ಲ ಎಂದು ಪತ್ತೆ ಮಾಡಿದ್ದು, ಇದು ಅಪರೂಪದ ಪ್ರಕರಣ ಎಂದು ಗುರುತಿಸಲಾಗಿದೆ. ಮಹಿಳೆಯ ರಕ್ತಕ್ಕೆ ಹೊಂದಿಕೆಗಾಗಿ ಆಕೆಯ ಕುಟುಂಬದ 20 ಸದಸ್ಯರ ರಕ್ತದ ಮಾದರಿಗಳನ್ನು ಸಂಗ್ರಹಿಸಲಾಗಿದೆ. ಆದರೆ, ಯಾವುದೇ ರಕ್ತಕ್ಕೂ ಹೊಂದಿಕೆಯಾಗಿಲ್ಲ. ಹಾಗಾಗಿ ಪ್ರಕರಣವನ್ನು ಅತ್ಯಂತ ಎಚ್ಚರಿಕೆಯಿಂದ ನಿರ್ವಹಿಸಿ ಕುಟುಂಬದ ಸಹಯೋಗದ ಪ್ರಯತ್ನದಿಂದ ರಕ್ತ ವರ್ಗಾವಣೆಯ ಅಗತ್ಯವಿಲ್ಲದೆ ಶಸ್ತ್ರಚಿಕಿತ್ಸೆಯನ್ನು ವೈದ್ಯರು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ.

ಈ ಬಗ್ಗೆ ಜಿಲ್ಲಾ ಆರೋಗ್ಯಾಧಿಕಾರಿ ಶ್ರೀನಿವಾಸ್ ಮಾತನಾಡಿ, ಸದ್ಯ ರಕ್ತ ನೀಡದೆ ಯಶಸ್ವಿ ಶಸ್ತ್ರಚಿಕಿತ್ಸೆ ಮಾಡಲಾಗಿದೆ ಎಂಬ ಮಾಹಿತಿ ಇದೆ ಎಂದಿದ್ದಾರೆ.

ಐದನೇ ಪುಟದಿಂದ

1.35 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಬಿಡುಗಡೆ

ಯೂರಿಯಾ ಕೊಡುವುದಾಗಿ ಒತ್ತಡ ಹೇರಬಾರದು ಎಂಬ ಕೇಂದ್ರ ಸರ್ಕಾರದ ಆದೇಶ ಇದ್ದರೂ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಬೇರೆ ರಸಗೊಬ್ಬರ ಖರೀದಿಗೆ ಲಿಂಕ್ ಮಾಡಿ ಯೂರಿಯಾ ಮಾರಾಟ ಮಾಡುವವರ ಪರವಾನಗಿ ರದ್ದುಪಡಿಸುವಂತೆಯೂ ಕೇಂದ್ರ ಸರ್ಕಾರ ಸೂಚನೆ ಕೊಟ್ಟಿದೆ. ರಾಜ್ಯ ಸರ್ಕಾರ ಈ ಸೂಚನೆ ಪಾಲಿಸಬೇಕು. ಕಳೆದ ವರ್ಷ ಎಷ್ಟು ರಸಗೊಬ್ಬರ ಬಳಕೆಯಾಗಿತ್ತು ಎಂಬ ಲೆಕ್ಕಚಾರದಲ್ಲಿ ಪ್ರಸಕ್ತ ಸಾಲಿನ ಅಗತ್ಯತೆ ಅಂದಾಜು ಮಾಡಿ ದಾಸ್ತಾನು ಇಟ್ಟುಕೊಳ್ಳುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದರು.

ಈ ಬಾರಿ ಮುಂಗಾರು ಪೂರ್ವ ಹಾಗೂ ಮುಂಗಾರು ಮಳೆಯಿಂದಾಗಿ ರೈತರು ಕೃಷಿ ಚಟುವಟಿಕೆಯನ್ನು ಮೊದಲೇ ಆರಂಭಿಸಿದ್ದು, ಪದೇ ಪದೆ ಮಳೆ ಬಿದ್ದಿದ್ದರಿಂದ ಜಮೀನಿಗೆ ಹಾಕಿದ ಯೂರಿಯಾ ವ್ಯರ್ಥವಾಗಿ ಮತ್ತೊಮ್ಮೆ ಹಾಕಲು ಮುಂದಾಗಿದ್ದೇ ಕೊರತೆ ಹೆಚ್ಚಾಗಲು ಕಾರಣವಾಯಿತು. ಮೆಕ್ಕೆಜೋಳ ಬಿತ್ತನೆ ಪ್ರದೇಶ ಶೇ.1.5ರಷ್ಟು ಹೆಚ್ಚಳವಾಗಿದೆ. ಇದು ಕೃಷಿ ಇಲಾಖೆಗೂ ಗೊತ್ತಿದೆ, ಜೂನ್ 3ನೇ ವಾರದಿಂದಲೇ ರಸಗೊಬ್ಬರ ಬೇಡಿಕೆ ಪ್ರಾರಂಭವಾಗಿದೆ. ರಾಜ್ಯದ ಸುಮಾರು ಎಂಟತ್ತು ಜಿಲ್ಲೆಗಳಲ್ಲಿ ರಸಗೊಬ್ಬರ ಅಭಾವ ತೀವ್ರವಾಗಿದೆ ಮೂರ್ನಾಲ್ಕು ಜಿಲ್ಲೆಗಳಲ್ಲಿ ಸಾಮಾನ್ಯವಾಗಿದೆ. ಜುಲೈ ಅಂತ್ಯದವರೆಗೆ 6.25 ಲಕ್ಷ ಮೆಟ್ರಿಕ್ ಟನ್ ಪೂರೈಕೆ ಆಗಬೇಕಿದ್ದು, ಕೇಂದ್ರ ಈಗಾಗಲೇ 5.35 ಲಕ್ಷ ಮೆಟ್ರಿಕ್ ಟನ್ ಕೊಟ್ಟಿದೆ. ಕರ್ನಾಟಕಕ್ಕೆ 8.82 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಪೈಕಿ 7.74 ಲಕ್ಷ ಮೆಟ್ರಿಕ್ ಟನ್ ವಿತರಣೆಯಾಗಿದೆ ಎಂಬ ವರದಿ ಕಳುಹಿಸಿದ್ದು, ಇದರರ್ಥ ರಾಜ್ಯದ ಬಳಿ ಬಫರ್ ಸ್ಟಾಕ್ ಇತ್ತು. ಈಗ ಕೇಂದ್ರ ಕೊಡಬೇಕಿರುವುದು 1.35 ಲಕ್ಷ ಮೆಟ್ರಿಕ್ ಟನ್. ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಜೆ.ಪಿ.ನಡ್ಡಾ ಕರ್ನಾಟಕಕ್ಕೆ ತಕ್ಷಣಕ್ಕೆ 1.35 ಲಕ್ಷ ಮೆಟ್ರಿಕ್ ಟನ್ ಯುರಿಯಾ ಕಳುಹಿಸುವ ಭರವಸೆ ನೀಡಿದ್ದು, ಮೂರ್ನಾಲ್ಕು ಕಂಪನಿಗಳಿಗೂ ಸೂಚಿಸುವುದಾಗಿ ತಿಳಿಸಿದ್ದಾರೆ. ಕೇಂದ್ರದಿಂದ ಸರಬರಾಜಾದ ರಸಗೊಬ್ಬರವನ್ನು ಬೇಡಿಕೆಗೆ ತಕ್ಕಂತೆ ಆಯಾ ಪ್ರದೇಶಗಳಿಗೆ ಪೂರೈಕೆ ಮಾಡುವುದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ. ರೈತರು ಸರತಿ ಸಾಲಿನಲ್ಲಿ ನಿಲ್ಲದೇ ಅಗತ್ಯ ರಸಗೊಬ್ಬರ ಪಡೆದುಕೊಳ್ಳುವಂತೆ ನಿಗಾ ವಹಿಸಬೇಕು, ಅಕ್ರಮ ದಾಸ್ತಾನು ಹಾಗೂ ಹೆಚ್ಚಿನ ದರಕ್ಕೆ ಮಾರಾಟ ಮಾಡುವ ಮಳಿಗೆಗಳ ಮೇಲೆ ದಾಳಿ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬೇಕು, ಪರವಾನಗಿ ರದ್ದುಪಡಿಸಬೇಕು ಎಂದು ಒತ್ತಾಯಿಸಿದರು.

ಈ ಬಾರಿ 1.36 ಲಕ್ಷ ಮೆಟ್ರಿಕ್ ಟನ್ ಕೊರತೆ

ಪ್ರಮುಖ ಕಾರಣವಾಗಿದೆ. ಈ ಬಾರಿ ಮುಂಗಾರು ಬೇಗ ಪ್ರಾರಂಭವಾಗಿ ಉತ್ತಮ ಮಳೆಯಾಗಿದ್ದು, 2 ಲಕ್ಷ ಹೆಕ್ಟೇರ್ ಹೆಚ್ಚುವರಿ ಮುಸುಕಿನ ಜೋಳ ಬಿತ್ತನೆ ಮಾಡಿರುವುದು ಕೂಡ ಯೂರಿಯಾ ಬೇಡಿಕೆ ಹಠಾತ್ ಏರಿಕೆಗೆ ಕಾರಣವಾಗಿದೆ ಎಂದರು.

ರಸಗೊಬ್ಬರ ಪೂರೈಕೆ ಅಂಕಿ ಅಂಶ

- ಕೇಂದ್ರದಿಂದ ಏಪ್ರಿಲ್‌ನಿಂದ ಜುಲೈನವರೆಗಿನ ಹಂಚಿಕೆ-6.82 ಲಕ್ಷ ಮೆ.ಟನ್
- ಏಪ್ರಿಲ್‌ನಿಂದ ಇಲ್ಲಿಯವರೆಗೆ ಸರಬರಾಜು-5.46 ಲಕ್ಷ ಮೆ.ಟನ್.
- ಈಗಿನ ಉಳಿಕೆ ದಾಸ್ತಾನು-1.22 ಲಕ್ಷ ಮೆ.ಟನ್
- ಇಲ್ಲಿಯವರೆಗಿನ ಸರಬರಾಜಿನಲ್ಲಿ ಕೊರತೆ-1.36 ಲಕ್ಷ ಮೆ.ಟನ್

ರಾಜ್ಯದಲ್ಲಿ ಅಕ್ರಮ ಸಾಗಾಟ, ಯೂರಿಯಾ ದುರ್ಬಳಕೆ ಬಗ್ಗೆ ವಿಚಕ್ಷಣ ದಳ ಚುರುಕಾಗಿ ಕಾರ್ಯನಿರ್ವಹಿಸುತ್ತಿದ್ದು, ಅಕ್ರಮಗಳಿಗೆ ಕಡಿವಾಣ ಹಾಕಿದೆ. ಶ್ರೀಲಂಕಾ ಮತ್ತು ಬಾಂಗ್ಲಾದೇಶಕ್ಕೆ ರಸಗೊಬ್ಬರ ರಫ್ತು ಮಾಡಲಾಗಿದೆ ಎಂಬ ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯಿಸಿ, ಈ ಹೇಳಿಕೆಯು ಹಾಸ್ಯಾಸ್ಪದ. ವಿರೋಧ ಪಕ್ಷದ ನಾಯಕರು ಅರ್ಥ ಮಾಡಿಕೊಳ್ಳಬೇಕು. ರಸಗೊಬ್ಬರ ಪೂರೈಕೆ ಕಾಪು ದಾಸ್ತಾನಿಗೆ ಇರಿಸಲಾಗಿದ್ದ ಗ್ಯಾರಂಟಿ ಹಣ ಕಡಿತಗೊಳಿಸಲಾಗಿದೆ ಎಂದು ಆರೋಪಿಸಿದ್ದಾರೆ. ಆದರೆ ಈ ಹಿಂದೆ ಇದ್ದದ್ದು ಬಿಜೆಪಿ ಸರ್ಕಾರ ಅವರೇ ನಿಗದಿಪಡಿಸಿದ್ದ 400 ಕೋಟಿ ರೂ. ಹಣವನ್ನು ನಾವು ಯಥಾಸ್ಥಿತಿಯಲ್ಲಿ ಮುಂದುವರೆಸಿದ್ದೇವೆ. ಇನ್ನೂ 600 ಕೋಟಿ ರೂ. ಹೆಚ್ಚುವರಿ ಹಣ ನೀಡಲು ರಾಜ್ಯ ಸರ್ಕಾರ ಸಿದ್ಧವಿದೆ. ಪ್ರತಿಯಾಗಿ ಬಿಜೆಪಿ ನಾಯಕರು ಗೊಬ್ಬರ ಒದಗಿಸಲು ಸಾಧ್ಯವೇ ತಿಳಿಸಬೇಕು ಎಂದು ಸಚಿವ ಚಲುವರಾಯಸ್ವಾಮಿ ಪ್ರಶ್ನಿಸಿದರು.

ರಾಜ್ಯದಲ್ಲಿ ದಾವಣಗೆರೆ, ಗದಗ, ಕೊಪ್ಪಳ, ಧಾರವಾಡ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಯೂರಿಯಾ ಕೊರತೆ ಸ್ವಲ್ಪ ಕಂಡು ಬಂದಿರುವುದು ನಿಜ. ಆದರೆ ಅದನ್ನು ನಿಭಾಯಿಸಲಾಗುತ್ತಿದೆ. ಹೆಚ್ಚುವರಿ ದಾಸ್ತಾನು ಬೇರೆ ಜಿಲ್ಲೆಗಳಿಂದ ವರ್ಗಾವಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ರಸಗೊಬ್ಬರ ಅದರಲ್ಲೂ ಮುಖ್ಯವಾಗಿ ಯೂರಿಯಾ ಮತ್ತು ಡಿ.ಎ.ಪಿ. ಪೂರೈಕೆ ಕೋರಿ ಜುಲೈ 7ರಂದು ಕೇಂದ್ರ ಕೃಷಿ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗಿತ್ತು. ಆ ನಂತರ ನಾನು ಹಾಗೂ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಸಹ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಮನವಿ ಮಾಡಲಾಗಿದೆ ಎಂದು ತಿಳಿಸಿದರು. ಕೇಂದ್ರ ರಸಗೊಬ್ಬರ ಖಾತೆ ಸಚಿವರ ಭೇಟಿಗಾಗಿ ಸಮಯಾವಕಾಶ ಕೋರಿ ಪತ್ರ ಬರೆಯಲಾಗಿದ್ದು, ಅವಕಾಶ ಸಿಕ್ಕರೆ ಭೇಟಿ ಮಾಡಿ, ರಾಜ್ಯದ ಪರಿಸ್ಥಿತಿ ವಿವರಿಸಿ ಮನವಿ ಮಾಡಲಾಗುವುದು ಎಂದು ಚಲುವರಾಯಸ್ವಾಮಿ ತಿಳಿಸಿದರು.

ನಿವೃತ್ತ ಪೊಲೀಸ್ ಅಧಿಕಾರಿ ಹೆಸರು ತಳುಕು

ಒಂದು ವೇಳೆ ಹೋದರೂ ಕೂಡ ಅರಣ್ಯ ಇಲಾಖೆ ಹೋಗದಂತೆ ನಿರ್ಬಂಧ ಹೇರಿದೆ. ಹೀಗಾಗಿ ಇಂದಿನ ಉತ್ಖನನ ಕಾರ್ಯ ಅಧಿಕಾರಿಗಳಿಗೆ ಸವಾಲಾಗಿ ಪರಿಣಮಿಸಿದೆ. ಇಂದೂ ಯಾವುದೇ ಶವದ ಕುರುಹುಗಳು ಪತ್ತೆಯಾಗಿಲ್ಲ ಎಂದು ಹೇಳಲಾಗಿದೆ.

ಎಸ್‌ಐಟಿ ಮುಖ್ಯಸ್ಥರಾದ ಪ್ರಣಾವ್ ಮೊಹಾಂತಿ ಅವರು ಇಂದು ಸ್ಥಳಕ್ಕೆ ಭೇಟಿ ನೀಡಿ, ಅಧಿಕಾರಿಗಳಿಂದ ಮಾಹಿತಿ ಪಡೆದರು. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತನಿಖೆ ಆರಂಭದ ಹಂತದಲ್ಲಿದೆ ಅಷ್ಟೇ. ದೂರುದಾರ ತೆಗೆದುಕೊಂಡು ಬಂದಿದ್ದ ತಲೆ ಬುರುಡೆಯ ಪರಿಶೀಲನೆ ನಡೆಸಿದ್ದೇವೆ ಎಂದರು.

ಸೋಮವಾರ ದೂರುದಾರ (ಜು.28) 13 ಜಾಗಗಳನ್ನು ಗುರುತಿಸಿದ್ದ. ಅದಾದ ಬಳಿಕ ಮಂಗಳವಾರ ಮೊದಲು ಗುರುತು ಮಾಡಿದ್ದ ಸ್ಥಳದಿಂದಲೇ ಎಸ್‌ಐಟಿ ಅಗೆಯುವ ಕೆಲಸ ಆರಂಭಿಸಿತ್ತು, 12 ಜನ ಕಾರ್ಮಿಕರು, ನಾಲ್ವರು ವೈದ್ಯರು, ಸಹಾಯಕ ಸಿಬ್ಬಂದಿ, ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳ ಸಮ್ಮುಖದಲ್ಲೇ ಬೆಳಿಗ್ಗೆ 11 ಗಂಟೆಗೆ ಶುರುವಾದ ಶೋಧ ಕಾರ್ಯ 7 ತಾಸು ನಡೆದಿತ್ತು. ಆದರೆ 15 ಅಡಿ ಅಗಲ, 8 ಅಡಿ ಆಳ ಅಗೆದರೂ ಯಾವುದೇ ಕುರುಹು ಸಿಕ್ಕಿರಲಿಲ್ಲ. ಬಳಿಕ ಎಸ್‌ಐಟಿ ಅಧಿಕಾರಿಗಳು, ಆಳಕ್ಕೆ ಹೋದಷ್ಟು ಅಸ್ಥಿಪಂಜರ ಸಿಗಬಹುದು ಎನ್ನುವ ಕಾರಣಕ್ಕಾಗಿ ಹಿಟಾಚಿಯಿಂದಲೂ ಕಾರ್ಯಾಚರಣೆ ನಡೆಸಿದ್ದರು. ಆದರೂ ಕೂಡ ಯಾವುದೇ ಕಳೇಬರ ಸಿಕ್ಕಿರಲಿಲ್ಲ. ಸೋಮವಾರ ಗುರುತಿಸಿದ್ದ ಎಲ್ಲಾ 13 ಜಾಗಗಳಿಗೂ ಎಸ್‌ಐಟಿ ವಿಶೇಷ ಭದ್ರತೆ ಕಲ್ಪಿಸಿದೆ.

ಮನೆ ಮನೆಗೆ ಪೊಲೀಸ್ ವ್ಯವಸ್ಥೆ ಜಾರಿ

ತಮ್ಮ ಮನೆಗೆ ಬರುವ ಪೊಲೀಸರನ್ನು ನಾಗರಿಕರು ಸ್ವಾಗತಿಸಬೇಕು. ಈ ಮೂಲಕ ನಾಗರಿಕರು ಪೊಲೀಸರೊಡನೆ ಗಟ್ಟಿಯಾದ ಸಂಬಂಧ ವೃದ್ಧಿಸಿಕೊಂಡರೆ ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮನೆಗಳಿಗೆ ಪೊಲೀಸರು ಬರುವ ಬೆಳವಣಿಗೆಗಳಾದರೆ ನಾಗರಿಕರು ಪೊಲೀಸ್ ಇಲಾಖೆಯನ್ನು ನೋಡುವ ದೃಷ್ಟಿಯೇ ಬದಲಾಗುತ್ತದೆ. ರಸ್ತೆಗಳಲ್ಲಿ ಪೊಲೀಸರು ಓಡಾಡುತ್ತಿದ್ದರೆ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಆಗುವುದಿಲ್ಲ. ಜೊತೆಗೆ ಅಪರಾಧ ಕೃತ್ಯ ನಡೆಯುವುದಿಲ್ಲ ಎಂದು ಅಭಿಪ್ರಾಯಪಟ್ಟರು. ಡಿಸಿಪಿಗಳಾದ ಆರ್.ಎನ್. ಬಿಂದುಮಣಿ, ಕೆ.ಎಸ್.ಸುಂದರ್‌ರಾಜ್, ಎಸಿಪಿಗಳಾದ ಮೋಹನ್‌ಕುಮಾರ್, ಅಶ್ವಥ್ ನಾರಾಯಣ್, ರಾಜೇಂದ್ರ ರವಿಪ್ರಸಾದ್, ಶಿವಶಂಕರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನೂತನ ವ್ಯವಸ್ಥೆ ಯಶಸ್ವಿ

ಅವರಿಂದ ಮಾಹಿತಿ ಪಡೆದು ಮೇಲಾಧಿಕಾರಿ ಗಮನಕ್ಕೆ ತರುತ್ತಾರೆ. ಬಳಿಕ ಸಮಸ್ಯೆ ಪರಿಹಾರ ಸಂಬಂಧ ಹಿರಿಯ ಪೊಲೀಸ್ ಅಧಿಕಾರಿಗಳು ಗಮನಹರಿಸುತ್ತಾರೆ ಎಂದು ವಿವರಿಸಿದರು. 250 ಮನೆಗೊಬ್ಬ ಸಲಹೆಗಾರನ್ನನ್ನು ಆಯ್ಕೆ ಮಾಡಿ ಪ್ರತಿ ಶನಿವಾರ ಮೀಟಿಂಗ್ ನಡೆಸುತ್ತಾರೆ. ಆಯಾ ಪ್ರದೇಶದಲ್ಲಿ ನಡೆಯುವ ಚಟುವಟಿಕೆಗಳ ಬಗ್ಗೆ ಬೀಟ್ ಪೊಲೀಸರು ಮಾಹಿತಿ ಪಡೆಯುತ್ತಾರೆ. ಆ ವೇಳೆ ಉತ್ತಮವಾಗಿ ಕೆಲಸ ಮಾಡುವವರಿಗೆ ಪೊಲೀಸ್ ಸ್ನೇಹಿತ, ಸಲಹೆಗಾರ ಪ್ರಶಸ್ತಿ ನೀಡಲಾಗುವುದು ಎಂದು ಮಾಹಿತಿ ನೀಡಿದರು. ಮನೆಯಲ್ಲಿ ಪುರುಷರಿಲ್ಲದೆ ಮಹಿಳೆಯರು ಮಾತ್ರ ಇದ್ದರೆ ಅಂತಹ ಮನೆಗೆ ಮಹಿಳಾ ಪೊಲೀಸರನ್ನು ನಿಯೋಜನೆ ಮಾಡಲಾಗುವುದು ಎಂದರು.

ಸಮಾಜದಲ್ಲಿ ಶಾಂತಿಯುತ ವಾತಾವರಣ ನಿರ್ಮಾಣ ಮಾಡುವುದು ನಮ್ಮ ಮೂಲ ಉದ್ದೇಶವಾಗಿದೆ. ಈಗ ಮನೆಗಳಿಗೆ ಬರುವ ಬೀಟ್ ಪೊಲೀಸರಿಗೆ ಸ್ಪಷ್ಟ ಮಾಹಿತಿ ನೀಡಬೇಕು. ಇಂತಹ ವಿನೂತನ ಕಾರ್ಯಕ್ರಮ ಯಶಸ್ವಿಯಾಗಿಸಲು ನಾಗರಿಕರ ಬೆಂಬಲ ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಪೊಲೀಸ್ ಕಾರ್ಯಕ್ಕೆ ಒತ್ತಾಸೆಯಾಗಿ ನಿಲ್ಲಬೇಕು ಎಂದು ಸೀಮಾ ಲಾಟ್ಕರ್ ಮನವಿ ಮಾಡಿದರು.

ಲೋಕಸಭೆಯಲ್ಲಿ ಯದುವೀರ್ ಪ್ರಸ್ತಾಪ

ಅವರು ನಮ್ಮ ವೈಫಲ್ಯವಿದೆ ಎಂದು ಮಾತ್ರ ಹೇಳಿ ಕೈತೊಳೆದುಕೊಂಡಿದ್ದಾರೆ. ಇದು ಕಾನೂನು-ಸುವ್ಯವಸ್ಥೆ ಬಗೆಗಿನ ಬೇಜವಾಬ್ದಾರಿಯ ಪರಮಾವಧಿ ಎಂದು ಹೇಳಿದರು. ಇಷ್ಟೇ ಅಲ್ಲದೆ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಯ ಮೇಲೆ ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿದ್ದರು. ಅಚ್ಚರಿ ವಿಷಯವೆಂದರೆ ರಾಜ್ಯ ಗೃಹ ಇಲಾಖೆ ಅವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತಕ್ಕೆ 11 ಮಂದಿ ಸಾವನ್ನಪ್ಪಿದರೆ, ಅದಕ್ಕೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳುವ ಬದಲು ರಾಜ್ಯ ಸರ್ಕಾರವು ಆ ಪ್ರಕರಣದಲ್ಲಿ ಪೊಲೀಸರನ್ನು ಹರಕೆಯ ಕುರಿ ಮಾಡಿದೆ. ಕರ್ನಾಟಕದ ಕಲಬುರಗಿಯಲ್ಲಿ ರಾಜ್ಯದ ಐಟಿಬಿಟಿ ಸಚಿವರ ಆಪ್ತರೊಬ್ಬರು ಡ್ರಗ್ಸ್ ದಂಧೆಯಲ್ಲಿ ಸಿಕ್ಕಿಬಿದ್ದಿದ್ದಾರೆ ಎಂದು ಸಂಸದ ಯದುವೀರ್ ಒಡೆಯರ್ ವಿವರಿಸಿದರು. ಡ್ರಗ್ಸ್ ದಂಧೆ ವಿಚಾರವಾಗಿ ರಾಷ್ಟ್ರೀಯ ಮಟ್ಟದ ತನಿಖೆ ನಡೆಸಬೇಕು. ಮೈಸೂರಿನಲ್ಲಿ ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಮಂಡಳಿ (ಎನ್‌ಸಿಬಿ) ಘಟಕವನ್ನು ಸ್ಥಾಪಿಸಬೇಕು ಎಂದು ಅವರು ಒತ್ತಾಯಿಸಿದರು.

ಪರಮೇಶ್ವರ್‌ಗೇ ಅರಿವಿಲ್ಲ!

ಮಾಹಿತಿ ಲಭ್ಯವಿಲ್ಲ. ಆದರೆ, ಕಾರ್ಯಾಚರಣೆ ಮತ್ತು ತನಿಖೆಗೆ ನಮ್ಮವರು ಪೂರ್ಣ ಸಹಕಾರ ನೀಡಿದ್ದಾರೆ ಎಂದರು. ರಾಜ್ಯದಲ್ಲಿ ಚುನಾವಣಾ ಅಕ್ರಮಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಆಗಸ್ಟ್ 4ರಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿ ನಂತರ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಲಿದ್ದಾರೆ. ರಾಹುಲ್ ಗಾಂಧಿ ರೋಡ್ ಶೋ ನಡೆಸುತ್ತಿಲ್ಲ. ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುವ ಕಾರ್ಯಕ್ರಮವಿದೆ. ಹೈಕೋರ್ಟ್ ತೀರ್ಪಿನಂತೆ ರ್‍ಯಾಲಿ ಮಾಡುತ್ತಿಲ್ಲ. ಪ್ರತಿಭಟನೆ ಹೇಗಿರಬೇಕು ಎಂಬ ಬಗ್ಗೆ ಕೆಪಿಸಿಸಿ ಅಧ್ಯಕ್ಷರು ಸಭೆ ನಡೆಸಿ ನಿರ್ಧರಿಸಲಿದ್ದಾರೆ ಎಂದು ಪರಮೇಶ್ವರ್ ಹೇಳಿದರು.

ಕನ್ನಡ ಕಿರುಚಿತ್ರ ಪ್ರದರ್ಶನ-ಚರ್ಚೆ

ಮೈಸೂರು: ಮೈಸೂರು ಸಿನಿಮಾ ಸೊಸೈಟಿ ತನ್ನ ಸಿನಿ ಸಂಜೆ ಕಾರ್ಯಕ್ರಮದ ಅಂಗವಾಗಿ ಆ.2ರಂದು ಸಂಜೆ 7ರಿಂದ 8ರವರೆಗೆ, 2 ಕನ್ನಡ ಕಿರುಚಿತ್ರಗಳಾದ ಬೆನ್ನಿಗೆಲ್ಲಿಯ ಕಣ್ಣು, ಸಮಾನಾಂತರ ರೇಖೆಗಳು ಪ್ರದರ್ಶನ, ಚರ್ಚೆ ಆಯೋಜಿಸಲಾಗಿದೆ. ಸರಸ್ವತಿಪುರಂನ 1ನೇ ಮೇನ್ 5ನೇ ಅಡ್ಡ ರಸ್ತೆಯಲ್ಲಿರುವ ಸುಮಶ್ರೀ ಆರ್ಕೆಡ್‌ನಲ್ಲಿ ಈ ಕಿರು ಚಿತ್ರ ಪ್ರದರ್ಶನ ನಡೆಯಲಿದೆ. ನೋಂದಣಿಗೆ 9980596824.

15ನೇ ಹಣಕಾಸು ಆಯೋಗದ ವರದಿ ನೆಪದಲ್ಲಿ

ಕೇಂದ್ರದಿಂದ ರಾಜ್ಯಕ್ಕೆ ಶೇ.23ರಷ್ಟು ತೆರಿಗೆ ಪಾಲು ಕಡಿತ

ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪ

ಬೆಂಗಳೂರು,ಜು.30– ಕೇಂದ್ರ ಸರ್ಕಾರವು 15ನೇ ಹಣಕಾಸು ಆಯೋಗದ ವರದಿಯ ನೆಪದಲ್ಲಿ ಶೇ.23ರಷ್ಟು ತೆರಿಗೆ ಪಾಲು ಕಡಿಮೆ ಮಾಡಿದೆ ಎಂದು ಆರೋಪಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯಕ್ಕೆ ಈ 5 ವರ್ಷಗಳಲ್ಲಿ 68,000 ಕೋಟಿಗೂ ಹೆಚ್ಚು ನಷ್ಟವಾಗಿದೆ. ಇದನ್ನು ಕ್ಷೇತ್ರದ ಮತದಾರರಿಗೆ ಅರ್ಥ ಮಾಡಿಸುವಂತೆ ಸಚಿವರು ಹಾಗೂ ತಮ್ಮ ಪಕ್ಷದ ಶಾಸಕರಿಗೆ ತಿಳಿಸಿದರು.

ಬುಧವಾರ ಜಿಲ್ಲಾ ಉಸ್ತುವಾರಿ ಸಚಿವರು, ಸಚಿವರು ಮತ್ತು ಶಾಸಕರ ಜೊತೆಗಿನ ಚರ್ಚೆಯ ವೇಳೆ ಮಾತನಾಡಿದ ಮುಖ್ಯಮಂತ್ರಿಗಳು, ಇಷ್ಟರ ನಡುವೆಯೂ ನಾವು ಗ್ಯಾರಂಟಿ ಯೋಜನೆಗಳಿಗಾಗಿ ವರ್ಷಕ್ಕೆ 52,000 ಕೋಟಿ ಖರ್ಚು ಮಾಡುತ್ತಿದ್ದೇವೆ. ಗ್ಯಾರಂಟಿ ಯೋಜನೆಗಳು ಹಾಗೂ ಸಾಮಾಜಿಕ ಪಿಂಚಣಿಗಳು, ಸಹಾಯಧನಗಳು, ಪ್ರೋತ್ಸಾಹ ಧನಗಳು ಹಾಗೂ ಫಲಾನುಭವಿಗಳಿಗೆ ನೇರವಾಗಿ ತಲುಪುವ ಯೋಜನೆಗಳಿಗಾಗಿ ಪ್ರತಿ ವರ್ಷ 1.12 ಲಕ್ಷ ಕೋಟಿ ಖರ್ಚು ಮಾಡುತ್ತಿದ್ದೇವೆ ಎಂದು ವಿವರಿಸಿದರು.

ಎಲ್ಲಾ ಕೆಡಿಪಿ ಸಭೆಗಳಲ್ಲೂ ಶಾಸಕರು, ಸಚಿವರು ಅರ್ಥಪೂರ್ಣವಾಗಿ ಪಾಲ್ಗೊಳ್ಳಬೇಕು. ಅದಕ್ಕೆ ಮೊದಲು ಜನರ ಸಮಸ್ಯೆಗಳ ಬಗ್ಗೆ, ಕಾಮಗಾರಿಗೆ ಇರುವ ತಾಂತ್ರಿಕ ತೊಂದರೆಗಳ ಬಗ್ಗೆ, ಅಧಿಕಾರಿ ಗಳ ನಿರ್ಲಕ್ಷ್ಯ ಮತ್ತು ನಿಧಾನಗತಿಯ ಬಗ್ಗೆ ಕೆಡಿಪಿ ಸಭೆಗಳಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕು ಎಂದು ಸೂಚಿಸಿದರು.

ಕೇಂದ್ರದ ಅಸಹಕಾರ: ಕೇಂದ್ರದ ಅಸಹಕಾರ ಇದ್ದರೂ ನಮ್ಮ ರೈತರಿಗೆ ಸಮಸ್ಯೆ ಆಗಬಾರದು. ಮುಂಗಾರು ಹಂಗಾಮಿಗೆ 11.17 ಲಕ್ಷ ಮೆಟ್ರಿಕ್ ಟನ್ ಯೂರಿಯಾ ಬೇಕಾಗಿದೆ. ಏಪ್ರಿಲ್‌ನಿಂದ ಜುಲೈವರೆಗೆ 6.81 ಲಕ್ಷ ಮೆಟ್ರಿಕ್ ಟನ್ ಬೇಕಾಗುತ್ತದೆ. ಆದರೆ ಕೇಂದ್ರ ಸರ್ಕಾರ ಸರಬರಾಜು ಮಾಡಿದ್ದು 5.17 ಲಕ್ಷ ಮೆಟ್ರಿಕ್ ಟನ್ ಮಾತ್ರ. ಈ ವರ್ಷ 2 ಲಕ್ಷ ಹೆಕ್ಟೇರ್ ಮುಸುಕಿನ ಜೋಳ ಹೆಚ್ಚಾಗಿ ಬಿತ್ತನೆ ಮಾಡಲಾಗಿದೆ. ಹಾಗಾಗಿ ಹೆಚ್ಚಿನ ಬೇಡಿಕೆ ಇದೆ. ಆದರೆ ಯೂರಿಯಾ ಸರಬರಾಜನ್ನು ಕೇಂದ್ರ ಸರ್ಕಾರ ಕಡಿಮೆ ಮಾಡಿದೆ. ನಮಗೆ ಬರಬೇಕಾದ ಯೂರಿಯಾ ಪ್ರಮಾಣದಲ್ಲಿ 1.66 ಲಕ್ಷ ಮೆಟ್ರಿಕ್ ಟನ್ ಕಡಿಮೆ ಆಗಿದೆ. ಆದರೂ ಬಿಜೆಪಿಯವರು ಪ್ರತಿಭಟನೆ ಮಾಡುತ್ತಿರುವುದು ರಾಜಕೀಯ ದುರುದ್ದೇಶ ಹಾಗೂ ನಾಚಿಕೇಡಿತನ. ಇದನ್ನು ನೀವು ಕ್ಷೇತ್ರದ ಜನತೆಗೆ ಅರ್ಥ ಮಾಡಿಸಬೇಕು ಎಂದು ಶಾಸಕರು, ಸಚಿವರಿಗೆ ಮುಖ್ಯಮಂತ್ರಿಗಳು ತಿಳಿಸಿದರು.

ಕೇಂದ್ರ ಸರ್ಕಾರದ ಅಸಹಕಾರದ ನಡುವೆಯೂ ನಮ್ಮ ರೈತರಿಗೆ ಸಮಸ್ಯೆ ಆಗದಂತೆ ಅಧಿಕಾರಿಗಳ ಜೊತೆ ಸಂಪರ್ಕದಲ್ಲಿದ್ದು ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಬೇಕು. ಹಿಂದಿನ ಬಿಜೆಪಿ ಸರ್ಕಾರದ ಲೋಪಗಳನ್ನು ನಾವು ಸರಿ ಮಾಡುವ ಜೊತೆಗೆ ಆರ್ಥಿಕತೆಗೆ ಚೈತನ್ಯ ನೀಡುತ್ತಿದ್ದೇವೆ. ಹಿಂದಿನ ಬಿಜೆಪಿ ಸರ್ಕಾರ 2,70,695 ಕೋಟಿ ರೂಪಾಯಿ ಕಾಮಗಾರಿಗಳನ್ನು ತೆಗೆದುಕೊಂಡು ಅನುದಾನ ಒದಗಿಸದೆ ಟೆಂಡರ್‌ಗಳನ್ನು ಕರೆದಿತ್ತು. ಅಲ್ಲದೆ, 1,66,426 ಕೋಟಿ ಮುಖ್ಯಮಂತ್ರಿಗಳ ವಿವೇಚನಾ ಕೋಟಾದಡಿ ಕಾಮಗಾರಿಗಳನ್ನು ತೆಗೆದುಕೊಂಡು 72,000 ಕೋಟಿಗೂ ಹೆಚ್ಚು ಬಿಲ್‌ಗಳನ್ನು ಬಿಟ್ಟು ಹೋಗಿದ್ದರು ಎಂದು ದೂರಿದರು.

ಈ ವರ್ಷ 1,24,440 ಕೋಟಿ ವೇತನ ಮತ್ತು ಪಿಂಚಣಿಗಳಿಗಾಗಿ ವಿನಿಯೋಗಿಸುತ್ತಿದ್ದೇವೆ. 7ನೇ ವೇತನ ಆಯೋಗವನ್ನು ಅನುಷ್ಠಾನ ಮಾಡಿದ್ದರಿಂದ ವೇತನ ಮತ್ತು ಪಿಂಚಣಿಗಳ ಮೊತ್ತ ಹೆಚ್ಚಾಗಿದೆ. ಇಷ್ಟರ ನಡುವೆಯೂ ನಮ್ಮ ಸರ್ಕಾರವು ಈ ವರ್ಷ ಬಂಡವಾಳ ವೆಚ್ಚಗಳಿಗಾಗಿ 83,200 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಇದು ನಮ್ಮ ಬಜೆಟ್‌ನ ಶೇ.20.03ರಷ್ಟು, ಇದು ದೇಶದಲ್ಲಿಯೇ ಹೆಚ್ಚಿನ ಪ್ರಮಾಣದಲ್ಲಿದೆ. ರಾಜ್ಯ ಸರ್ಕಾರ ಮಾಡಿರುವ ಸಾಲದ ಬಡ್ಡಿ ತೀರಿಸುವುದಕ್ಕಾಗಿ 45,600 ಕೋಟಿ ರೂ.ಗಳು ವೆಚ್ಚವಾಗುತ್ತಿದೆ ಎಂದು ತಿಳಿಸಿದರು.

ಉದ್ಯೋಗ ಪ್ರಮಾಣ ಹೆಚ್ಚಳ: ಚುನಾವಣೆಗೆ ಮೊದಲು ಕೊಟ್ಟ ಆಶ್ವಾಸನೆಗಳ ಪ್ರಕಾರ ಎಲ್ಲಾ ಯೋಜನೆಗಳನ್ನು ಅನುಷ್ಠಾನ ಮಾಡುತ್ತಿದ್ದೇವೆ. ನಾವು ಜಾರಿಗೆ ತಂದ ಯೋಜನೆಗಳಿಂದಾಗಿ ಇಂದು ತಲಾದಾಯದ ವಿಚಾರದಲ್ಲಿ ನಮ್ಮ ರಾಜ್ಯ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಇತ್ತೀಚಿಗೆ ಕೇಂದ್ರ ಸರ್ಕಾರವು 2024–25ಕ್ಕೆ ಸಂಬಂಧಿಸಿದಂತೆ ಲೋಕಸಭೆಯಲ್ಲಿ ನೀಡಿರುವ ಉತ್ತರದ ಪ್ರಕಾರ ರಾಜ್ಯದ ತಲಾದಾಯವು ಸ್ಥಿರ ಬೆಲೆಗಳಲ್ಲಿ 2,04,605 ರೂಪಾಯಿಗಳಷ್ಟಿದೆ. ಇತ್ತೀಚಿಗೆ ಶಕ್ತಿ ಯೋಜನೆ ಮೇಲೆ ನಡೆದಿರುವ ಅಧ್ಯಯನ ಗಳ ಪ್ರಕಾರ, ಶಕ್ತಿ ಯೋಜನೆಯಿಂದ ಮಹಿಳೆಯರ ಉದ್ಯೋಗದ ಪ್ರಮಾಣ ಬೆಂಗಳೂರಿನಲ್ಲಿ ಶೇ.23 ಹಾಗೂ ಧಾರವಾಡದಲ್ಲಿ ಶೇ.21ರಷ್ಟು ಹೆಚ್ಚಾಗಿದೆ ಎಂದು ಎಂದರು. ವಿಶೇಷ ಅನುದಾನದ ರೂಪದಲ್ಲಿ 50 ಕೋಟಿ ರೂಪಾಯಿಗಳನ್ನು ನೀಡುತ್ತಿದೇವೆ. ಇದನ್ನು ಶೇ.100 ರಷ್ಟು ಸದ್ಬಳಕೆ ಮಾಡಿಕೊಳ್ಳ ಬೇಕು. ಪ್ರಮುಖವಾಗಿ ನಡೆಯುತ್ತಿರುವ ಅಭಿವೃದ್ಧಿ ಕೆಲಸಗಳ ಸ್ಥಿತಿಗತಿ, ಕೃಷಿ ಚಟುವಟಿಕೆಗಳು ಮತ್ತು ಬಿಡುಗಡೆಯಾಗಿರುವ ಅನುದಾನದಲ್ಲಿ ಖರ್ಚಾಗಿರುವ ಹಣದ ಪ್ರಮಾಣ, ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ ನಿಗದಿ ಮಾಡುವ ಕುರಿತು ಅಧಿಕಾರಿಗಳನ್ನು ಚುರುಕುಗೊಳಿಸಬೇಕು ಎಂದು ಸಲಹೆ ನೀಡಿದರು.



ಉತ್ತರ ಕರ್ನಾಟಕದ ನಾನಾ ಜಿಲ್ಲೆಗಳ ಶಾಸಕರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ ನಡೆಸಿದರು.

ರಾಜ್ಯದ ಜನರ ತಲಾದಾಯ ದೇಶದಲ್ಲೇ ನಂಬರ್ 1

ರಾಜ್ಯದ ಜನರ ತಲಾದಾಯ ಇಡೀ ದೇಶದಲ್ಲಿ ನಂಬರ್ ಒನ್ ಆಗಿದೆ. ಇದನ್ನು ನಾವೆಲ್ಲಾ ಹೆಮ್ಮೆಯಿಂದ ಹೇಳಿಕೊಳ್ಳಬೇಕು. ಕ್ಷೇತ್ರದ ಮತದಾರರಿಗೆ ಅರ್ಥ ಮಾಡಿಸಬೇಕು. ರಾಜ್ಯದ ಈ ಆರ್ಥಿಕ ಸಾಧನೆಗೆ ನಾವು ಜಾರಿ ಮಾಡಿದ ಐದು ಗ್ಯಾರಂಟಿಗಳು ನೇರ ಕಾರಣವಾಗಿದೆ ಎನ್ನುವುದನ್ನು ರಾಜ್ಯದ ಜನತೆಗೆ ಅರ್ಥಮಾಡಿಸುವ ಕೆಲಸ ಇನ್ನಷ್ಟು ವೇಗವಾಗಿ ನಡೆಯಬೇಕು.

-ಸಿದ್ದರಾಮಯ್ಯ, ಮುಖ್ಯಮಂತ್ರಿಗಳು.

ಆ.5ಕ್ಕೆ ರಾಜ್ಯಕ್ಕೆ ರಾಹುಲ್ ಗಾಂಧಿ

ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು, ಪಕ್ಷದ ಮುಖಂಡರ ಸಭೆ ಬಳಿಕ ಹೋರಾಟದ ರೂಪುರೇಷೆ ನಿರ್ಧಾರ ; ಡಿಸಿಎಂ ಡಿ.ಕೆ.ಶಿವಕುಮಾರ್

ಬೆಂಗಳೂರು, ಜು.30– ಲೋಕಸಭಾ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಆ.5ರಂದು ರಾಜ್ಯಕ್ಕೆ ಆಗಮಿಸುತ್ತಿದ್ದಾರೆ. ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು, ಪಕ್ಷದ ಮುಖಂಡರ ಸಭೆ ಬಳಿಕ ಕಾರ್ಯಕ್ರಮದ ಸ್ವರೂಪ ಹಾಗೂ ಸ್ಥಳದ ಬಗ್ಗೆ ತೀರ್ಮಾನ ಮಾಡಲಾಗುವುದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.



ರಾಹುಲ್‌ಗಾಂಧಿ

ಲೋಕಸಭೆ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಚುನಾವಣಾ ಆಯೋಗದ ವಿರುದ್ಧ ಬೆಂಗಳೂರಿನಲ್ಲಿ ನಡೆಸುತ್ತಿರುವ ಹೋರಾಟ ಸಂಬಂಧ ಬೆಂಗಳೂರಿನ ಕೆಪಿಸಿಸಿ ಕಚೇರಿ ಬಳಿ ಬುಧವಾರ ಮಾಧ್ಯಮಗಳ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು ಗುರುವಾರ ಶಾಸಕರು, ಎಂಎಲ್‌ಸಿಗಳು, ಪರಾಜಿತ ಅಭ್ಯರ್ಥಿಗಳು, ಕೆಪಿಸಿಸಿ ಪದಾಧಿಕಾರಿಗಳು, ಪಕ್ಷದ ವಿವಿಧ ಘಟಕಗಳ ಅಧ್ಯಕ್ಷರ ಜೊತೆ ಸಭೆ ಮಾಡಲಿದ್ದಾರೆ. ಈ ಸಭೆಯಲ್ಲಿ ಮುಖ್ಯಮಂತ್ರಿಗಳು ಸಹ ಭಾಗವಹಿಸಲಿದ್ದಾರೆ. ಈ ಸಭೆ ಬಳಿಕ ಕಾರ್ಯಕ್ರಮದ ಅಂತಿಮ ರೂಪುರೇಷೆ ಬಗ್ಗೆ ತೀರ್ಮಾನಿಸಲಾಗುವುದು ಎಂದು

ನಾವು ಕೆಲವು ಸ್ಥಳಗಳ ಸಲಹೆ ನೀಡಿದ್ದು, ಪ್ರಧಾನ ಕಾರ್ಯದರ್ಶಿಗಳು ಸ್ಥಳ ಪರಿಶೀಲನೆ ಮಾಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ಎಲ್ಲಾ ಕ್ಷೇತ್ರದಿಂದ ಜನ ಬರಬೇಕು. ರಾಜ್ಯದ ಎಲ್ಲಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಪರಾಜಿತ ಅಭ್ಯರ್ಥಿಗಳು ಹಾಗೂ ನಾಯಕರು ಕಡ್ಡಾಯವಾಗಿ ಕಾರ್ಯಕ್ರಮಕ್ಕೆ ಆಗಮಿಸಬೇಕು. ಈ ಸಂಬಂಧ ಆ.3ರ ಒಳಗಾಗಿ ಬ್ಲಾಕ್ ಮಟ್ಟದಲ್ಲಿ ಕಾರ್ಯಕರ್ತರ ಸಭೆ ನಡೆಸಲು ಸೂಚಿಸಲಾಗಿದೆ. ಅಂತೆಯೇ ಶಾಸಕರು ತಮ್ಮ ಕ್ಷೇತ್ರಗಳಲ್ಲಿ ಸಭೆ ಮಾಡಲಿದ್ದಾರೆ ಎಂದು ತಿಳಿಸಿದರು.

ರ್‍ಯಾಲಿ, ಸಮಾವೇಶ ಎರಡರಲ್ಲಿ ಯಾವುದನ್ನು ಆಯೋಜನೆ ಮಾಡಲಾಗುತ್ತದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ನಾನು ನಿನ್ನೆ ಪೊಲೀಸ್ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದು, ಇಲ್ಲಿ ಅನೇಕ ತಾಂತ್ರಿಕ ಅಂಶಗಳಿವೆ. ನ್ಯಾಯಾಲಯದ ಕೆಲವು ಷರತ್ತುಗಳಿವೆ. ಅವುಗಳ ಬಗ್ಗೆ ಮಾಹಿತಿ ನೀಡಿದ್ದೇನೆ. ಹೀಗಾಗಿ ನಮ್ಮ ನಾಯಕರ ಜೊತೆ ಚರ್ಚಿಸಿ ತೀರ್ಮಾನ ಮಾಡಲಾಗುವುದು. ಲೋಕಸಭೆ ಚುನಾವಣೆಯಲ್ಲಿ ಹೇಗೆ ಅಕ್ರಮ ನಡೆಸಲಾಗಿದೆ ಎಂಬ ಬಗ್ಗೆ ನಮ್ಮ ನಾಯಕರೇ ನಿಮಗೆ ಮಾಹಿತಿ ನೀಡಲಿದ್ದಾರೆ ಎಂದು ಮತ್ತೊಂದು ಪ್ರಶ್ನೆಗೆ ಪ್ರತಿಕ್ರಿಯಿಸಿದರು. ರಾಹುಲ್ ಗಾಂಧಿ ರಾಜ್ಯಕ್ಕೆ ಆಗಮಿಸುತ್ತಿರುವ ಕುರಿತು ಬಿಜೆಪಿ ವಿರೋಧ ವ್ಯಕ್ತಪಡಿಸುತ್ತಿರುವ ಬಗ್ಗೆ ಕೇಳಿದಾಗ, ನಮ್ಮ ಪಕ್ಷದ ಸಂಶೋಧನಾ ವಿಭಾಗವು ಲೋಕಸಭೆಯಲ್ಲಿ ಆಗಿರುವ ಅಕ್ರಮಗಳ ಬಗ್ಗೆ ನಮ್ಮ ನಾಯಕ ರಾಹುಲ್ ಗಾಂಧಿ ಅವರ ಗಮನಕ್ಕೆ ತಂದಿದೆ. ಈ ವಿಚಾರವಾಗಿ ಅವರು ರಾಜ್ಯಕ್ಕೆ ಆಗಮಿಸುತ್ತಿದ್ದಾರೆ. ಸಚಿವರು, ಶಾಸಕರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಆ.5ರಂದು ನಡೆಯಲಿರುವ ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ ಎಂದು ತಿಳಿಸಿದರು.



ಡಿ.ಕೆ.ಶಿವಕುಮಾರ್

ಬಿಜೆಪಿ ಕೂಡ ಹೋರಾಟ ಮಾಡುವುದಾಗಿ ತಿಳಿಸಿರುವ ಬಗ್ಗೆ ಕೇಳಿದಾಗ, ಅವರು ಹೋರಾಟ ಮಾಡಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವರಿಗೆ ಹೋರಾಟ ಮಾಡಬೇಡ ಎಂದು ಹೇಳಲು ಸಾಧ್ಯವೇ? ಅವರ ಹೋರಾಟವನ್ನು ನಾನೇಕೆ ಟೀಕೆ ಮಾಡಲಿ. ಅವರ ವಿಚಾರ ಅವರು ಹೇಳಲಿ, ನಮ್ಮ ವಿಚಾರ ನಾವು ಹೇಳುತ್ತೇವೆ. ಮಾಧ್ಯಮ ಗಳಿರುವುದು ಎಲ್ಲರ ವಿಚಾರಗಳನ್ನು ಪ್ರಚಾರ ಮಾಡುವುದಕ್ಕೆ. ಆ ಕೆಲಸ ನೀವು ಮಾಡಿ ಎಂದರು.

ಎ.ಎಸ್.ರಾಜೇಶ್‌ಗೆ ಪಿಎಚ್.ಡಿ



ಮೈಸೂರು: ಡಾ.ಜಿ.ಹೆಚ್.ನಾಗರಾಜ ಅವರ ಮಾರ್ಗದರ್ಶನದಲ್ಲಿ ಎ.ಎಸ್. ರಾಜೇಶ್ ಅವರು ರಾಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಡಾ.ಸುಧಾ ಫಣೀಶ್‌ಗೆ ಮುಕ್ತ ವಿವಿ ಪಿಹೆಚ್.ಡಿ



ಮೈಸೂರು, ಜು.30– ಪ್ರೊ.ರಂಗಸ್ವಾಮಿಯವರ ಮಾರ್ಗದರ್ಶನದಲ್ಲಿ ಡಾ.ಸುಧಾ ಫಣೀಶ್ 'ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಮಹಿಳೆ' ಕುರಿತು ಸಂಶೋಧನೆ ನಡೆಸಿ, ಸಾದರಪಡಿಸಿದ ಮಹಾಪ್ರಬಂಧವನ್ನು ಕರ್ನಾಟಕ ಮುಕ್ತ ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಹುಣಸೂರು–ಮೈಸೂರಿಗೆ ಹೆಚ್ಚುವರಿ ಬಸ್ ಸೌಲಭ್ಯಕ್ಕಾಗಿ ನಾಳೆ ಪ್ರತಿಭಟನೆ

ಹುಣಸೂರು, ಜು.30–ಹುಣಸೂರಿನಿಂದ ಮೈಸೂರಿಗೆ ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸಿ ಹಾಗೂ ಬಸ್ ನಿಲ್ದಾಣದ ಬಳಿ ಪೆಟ್ರೋಲ್ ಬಂಕ್ ತೆರೆಯುವುದನ್ನು ತಡೆಯುವಂತೆ ಆಗ್ರಹಿಸಿ ಆ.1ರಂದು ಹುಣಸೂರು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗ ಪ್ರತಿಭಟನೆ ನಡೆಸಲಾಗುವುದು ಎಂದು ಸತ್ಯ ಫೌಂಡೇಷನ್ ಅಧ್ಯಕ್ಷ ಸತ್ಯಪ್ಪ ತಿಳಿಸಿದ್ದಾರೆ.

ಹುಣಸೂರಿನಿಂದ ಮೈಸೂರಿಗೆ ಹಾಗೂ ಮೈಸೂರಿಂದ ಹುಣಸೂರಿಗೆ ಬೆಳಗ್ಗೆ 7ರಿಂದ 10, ಸಂಜೆ 4ರಿಂದ 7 ಗಂಟೆಯವರೆಗೆ ಬಸ್ ಸೌಲಭ್ಯ ಕಲ್ಪಿಸಬೇಕು. ಹೊಸ ಬಸ್ ನಿಲ್ದಾಣದಲ್ಲಿ ಪೆಟ್ರೋಲ್ ಬಂಕ್ ತೆರೆಯುವುದನ್ನು ತಡೆ ಹಿಡಿಯಬೇಕು ಎಂದು ಅವರು ಆಗ್ರಹಿಸಿದ್ದಾರೆ.

ನಾಳೆ ರಾಕೇಶ್ ಸಿದ್ದರಾಮಯ್ಯ ಪುಣ್ಯಸ್ಮರಣೆ ಕಾರ್ಯಕ್ರಮ

ಮೈಸೂರು, ಜು.30– ಕನಕದಾಸನಗರ ದಟ್ಟಗಳ್ಳಿ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆ.1ರಂದು ರಾಕೇಶ್ ಸಿದ್ದರಾಮಯ್ಯ ಅವರ ಪುಣ್ಯಸ್ಮರಣೆ ಕಾರ್ಯಕ್ರಮ ಆಯೋಜಿಸಲಾಗಿದೆ. ದಟ್ಟಗಳ್ಳಿಯ ಕನಕದಾಸನಗರದ ನೇತಾಜಿ ಸರ್ಕಲ್ ಹತ್ತಿರ ಅಂದು ಬೆಳಗ್ಗೆ 9.30ಕ್ಕೆ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಪ್ರಮುಖ ಮುಖಂಡರು, ವಾರ್ಡಿನ ನಾಗರಿಕರು ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ವಿಶೇಷ ಚೇತನರಿಗೆ ವೀಲ್‌ಚೇರ್ ವಿತರಣೆ ಮಾಡುವುದರೊಂದಿಗೆ 46ನೇ ವಾರ್ಡಿನ ಹಲವು ಹಿರಿಯ ನಾಗರಿಕರನ್ನು ಸನ್ಮಾನಿಸಲಾಗುವುದು ಎಂದು ಕೆಪಿಸಿಸಿ ರಾಜ್ಯ ಓಬಿಸಿ ಕಾರ್ಯದರ್ಶಿ ಹರೀಶ್‌ಮೊಗಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಜಿಲ್ಲಾಧಿಕಾರಿಗಳ ಕಾರ್ಯಾಲಯ

ಜಿಲ್ಲಾ ನಗರಾಭಿವೃದ್ಧಿ ಕೋಶ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಸಂಖ್ಯೆ:ಚಾಜಿನಕೋ/ನಗರೋತ್ಥಾನ ಹಂತ-4/ಗು.ಪು/ಸಿ.ಆರ್:218/2021-22 ದಿನಾಂಕ:28.07.2025

ಟೆಂಡರ್ ಪ್ರಕಟಣೆ

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಪುರಸಭೆಗೆ ಮಾನ್ಯ ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿಯಲ್ಲಿ ಮಂಜೂರಾಗಿರುವ ಈ ಕೆಳಕಂಡ ಕಾಮಗಾರಿಗೆ ಆನ್‌ಲೈನ್ ಟೆಂಡರ್ ಅನ್ನು (ಕೆಪಿಪಿಪಿ) https://kppp.karnataka.gov.in ಮೂಲಕ ಆಹ್ವಾನಿಸಲಾಗಿದ್ದು, ಆಸಕ್ತ, ಅರ್ಹ ಮತ್ತು ನುರಿತ ಗುತ್ತಿಗೆದಾರರು ತಮ್ಮ ಟೆಂಡರ್‌ಗಳನ್ನು ಕೆಪಿಪಿಪಿಯ ಮೂಲಕ ಈ ಕೆಳಕಂಡಂತಿರುವ ಅಂತಿಮ ದಿನಾಂಕದವರೆಗೆ ಸಲ್ಲಿಸಬಹುದಾಗಿದೆ.

ಕ್ರ. ಸಂ	ಕಾಮಗಾರಿಯ ಹೆಸರು ಮತ್ತು ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಗಳಲ್ಲಿ)	ಕಾಲಾವಧಿ (ತಿಂಗಳುಗಳಲ್ಲಿ)
1.	ಗುಂಡ್ಲುಪೇಟೆ ಪಟ್ಟಣ ವ್ಯಾಪ್ತಿಯಲ್ಲಿ ಬಿ.ಎನ್.ರಸ್ತೆ, ಕೆ.ಪಿ.ಟಿ ಹೋಟೆಲ್ ಮಂಭಾಗದಿಂದ ಊಟಿ ಸರ್ಕಲ್‌ವರೆಗೆ ಮತ್ತು ಕೆ.ಆರ್.ಸಿ. ರಸ್ತೆ ಮತ್ತು ಅಬ್ದುಲ್ ನಜೀರ್ ಸಾಬ್ ರಸ್ತೆ ಗಾಂಧಿ ವೃತ್ತದಿಂದ ವೀರಯೋಧ ಶಿವಾನಂದ ವೃತ್ತದವರೆಗೆ ಕ್ಯಾಮರ ಅಳವಡಿಸುವುದು ಹಾಗೂ ರಸ್ತೆ ಸೂಚನಾ ಮಾಹಿತಿ ಫಲಕ ಅಳವಡಿಸುವುದು ಮತ್ತು ಗುಂಡ್ಲುಪೇಟೆ ಪಟ್ಟಣ ವ್ಯಾಪ್ತಿಯ ಡಿ. ದೇವರಾಜು ಅರಸು ಕ್ರೀಡಾಂಗಣದ ಹೊರಾಂಗಣದಲ್ಲಿ ತೆರೆದ ವ್ಯಾಯಾಮ ಸಾಧನಗಳನ್ನು ಅಳವಡಿಸುವುದು.	20.00	50,000	4

ಭದ್ರತಾ ಠೇವಣಿಯ ಮೊತ್ತ: ಗುತ್ತಿಗೆ ಮೊತ್ತದ ಶೇ 5ರಷ್ಟು, ಟೆಂಡರ್ ದಸ್ತಾವೇಜು ದಾಖಲೆಯನ್ನು ಅಪ್ಲೋಡ್ ಮಾಡುವ ದಿನಾಂಕ:29.07.2025 ಸಂಜೆ 04.30 ಗಂಟೆಗೆ. ಟೆಂಡರ್‌ನ್ನು ಆನ್‌ಲೈನ್ ನಲ್ಲಿ ಕೆಪಿಪಿಪಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ:18.08.2025 ಸಂಜೆ 5:00 ಗಂಟೆಯವರೆಗೆ. ಟೆಂಡರ್‌ನ ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ ಮತ್ತು ಸಮಯ:19.08.2025 ಸಂಜೆ 5:15 ಗಂಟೆಗೆ. ಟೆಂಡರ್ ನ ಆರ್ಥಿಕ ಬಿಡ್ ಅನ್ನು ತೆರೆಯುವ ದಿನಾಂಕ ಮತ್ತು ಸಮಯ: ದಿ:25.08.2025 ಮಧ್ಯಾಹ್ನ 3.00 ಗಂಟೆಗೆ.

ಸಹಿ/-ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ,
ಚಾಮರಾಜನಗರ ಜಿಲ್ಲೆ, ಚಾಮರಾಜನಗರ.

ಸಂ.ವಾಸಾಸಂಇ:ಚಾನಗರ:244:2025-26

ಲಾರಿ-ಬೈಕ್ ಡಿಕ್ಕಿ : ಸವಾರ ಸಾವು

ಮಡಿಕೇರಿ,ಜು.30: ಲಾರಿ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಸವಾರ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಇಂದು ಬೆಳಿಗ್ಗೆ ನಡೆದಿದೆ.

ಕುಶಾಲನಗರ ತಾಲೂಕು ಶಿರಂಗಾಲ ಶ್ರೀ ಮಂಟಿಗಮ್ಮ ದೇವಾಲಯ ಪ್ರವೇಶದ್ವಾರದ ತಿರುವಿನಲ್ಲಿ ಬುಧವಾರ ಸಂಭವಿಸಿದ ಅಪಘಾತದಲ್ಲಿ ಪಿರಿಯಾಪಟ್ಟಣ ತಾಲೂಕು ಕಣಗಾಲು ಹೋಬಳಿಯ ಚಾಮರಾಯನ ಕೋಟೆ ಗ್ರಾಮದ ನಿವಾಸಿ ಅಶೋಕ್(36) ಮೃತ ಪಟ್ಟಿದ್ದಾರೆ.



ಕುಶಾಲನಗರ ತಾಲೂಕು ಶಿರಂಗಾಲದಲ್ಲಿ ಸಂಭವಿಸಿದ ಅಪಘಾತದಲ್ಲಿ ಜಖಂಗೊಂಡಿರುವ ಸ್ಕೂಟರನ್ನು ಸ್ಥಳಾಂತರಿಸಿದರು

ಕೊಣನೂರು ಕಡೆಯಿಂದ ಕುಶಾಲನಗರ ಕಡೆಗೆ ತೆರಳುತ್ತಿದ್ದ ಲಾರಿ ಹಾಗೂ ಶಿರಂಗಾಲದಿಂದ ಕೊಣನೂರು ಕಡೆಗೆ ತೆರಳುತ್ತಿದ್ದ ಸ್ಕೂಟರ್ ನಡುವೆ ಡಿಕ್ಕಿಯಾಗಿದೆ. ಪರಿಣಾಮ ತೀವ್ರವಾಗಿ ಗಾಯಗೊಂಡ ಸ್ಕೂಟರ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಸ್ಥಳಕ್ಕೆ ಡಿವೈಎಸ್‌ಪಿ ಚಂದ್ರಶೇಖರ್, ವೃತ್ತ ನಿರೀಕ್ಷಕ ದಿನೇಶ್ ಹಾಗೂ ಸಂಚಾರಿ ಠಾಣಾಧಿಕಾರಿ ಶ್ರೀನಿವಾಸ್, ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಲಾರಿ ಚಾಲಕನನ್ನು ವಶಕ್ಕೆ ಪಡೆದ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ಮೃತ ಅಶೋಕ್ ಪತ್ನಿ ರಂಜಿತಾ, ಮಕ್ಕಳಾದ ಸಮರ್ಥ್ ಹಾಗೂ ಸಾನ್ವಿ ಅವರನ್ನು ಅಗಲಿದ್ದಾರೆ.

ರವೀಂದ್ರಗೆ ಕೆಂಪೇಗೌಡ ಪ್ರಶಸ್ತಿ



ಕುಶಾಲನಗರ: ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಹರಪಳ್ಳಿ ರವೀಂದ್ರ ಈ ಬಾರಿಯ ಕೆಂಪೇಗೌಡ ಪ್ರಶಸ್ತಿಗೆ ಭಾಜನರಾಗಿದ್ದಾರೆ. ರಾಜ್ಯ ಒಕ್ಕಲಿಗರ ಜಾಗೃತಿ ಸಂಘದಿಂದ ಆ.2 ರಂದು ಬೆಂಗಳೂರು ಕುವೆಂಪು ಕಲಾಕ್ಷೇತ್ರದಲ್ಲಿ ನಡೆಯುವ ನಾಡಪ್ರಭು ಕೆಂಪೇಗೌಡ ಜಯಂತ್ಯೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಕಾರ್ಯಕ್ರಮ ಸಂಘಟಕರು ತಿಳಿಸಿದ್ದಾರೆ.

ಸೂರ್ಯಕುಮಾರ್‌ಗೆ ಅತ್ಯುತ್ತಮ ಕೃತಿ ಪ್ರಶಸ್ತಿ



ಮಡಿಕೇರಿ: ನಗರದ ಹಿರಿಯ ವೈದ್ಯ ಸಾಹಿತಿ ಡಾ.ಕೆ.ಬಿ. ಸೂರ್ಯಕುಮಾರ್ ಅವರ ಮಂಗಳಿ ಕೃತಿಗೆ ಕನ್ನಡ ವೈದ್ಯ ಬರಹಗಾರರ ಸಮಿತಿ ನೀಡುವ ಅತ್ಯುತ್ತಮ ಕೃತಿ ಪ್ರಶಸ್ತಿ ದೊರಕಿದೆ.

ದೊಡ್ಡಬಳ್ಳಾಪುರದ ಡಾ.ಇಂದಿರಾ ನೀಡಿರುವ ಪ್ರಶಸ್ತಿಯು ಇವರು ಬರೆದಿರುವ ಮಂಗಳ ಮುಖಿಯರ ಜೀವನ ಶೈಲಿಯ ನಿರೂಪಣೆ ಇರುವ ಮಂಗಳಿ ಕೃತಿಗೆ ಸಂದಿದೆ. ಆ. 24ರಂದು ಬೆಳ್ಳಾರಿನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಈವರೆಗೂ ಡಾ. ಸೂರ್ಯಕುಮಾರ್ ಅವರು ಕನ್ನಡದಲ್ಲಿ 7 ಮತ್ತು ಇಂಗ್ಲಿಷ್‌ನಲ್ಲಿ 1 ಕೃತಿಗಳನ್ನು ಪ್ರಕಟಿಸಿದ್ದಾರೆ.

ರುಂಡವಿಲ್ಲದ ಪುರುಷ ಮೃತದೇಹ ಪತ್ತೆ

ವಿರಾಜಪೇಟೆ: ತಾಲೂಕಿನ ಭೇತ್ರಿ ಕಾವೇರಿ ನದಿಯ ತಟದಲ್ಲಿ ಪುರುಷನ ರುಂಡ ಇಲ್ಲದ ಮೃತದೇಹ ಇಂದು ಬೆಳಿಗ್ಗೆ ಪತ್ತೆಯಾಗಿದೆ.

ಸ್ಥಳೀಯ ನಿವಾಸಿಯೊಬ್ಬರು ನದಿ ತಟಕ್ಕೆ ತೆರಳಿದ್ದ ದುರ್ವಾಸನೆ ಬೀರುತ್ತಿದ್ದನ್ನು ಕಂಡು ಸ್ಥಳಕ್ಕೆ ಹೋಗಿ ನೋಡಿದಾಗ ಪುರುಷನ ರುಂಡವಿಲ್ಲದ ಮೃತದೇಹ ಪತ್ತೆಯಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯ ಠಾಣಾಧಿಕಾರಿ ವಾಣಿಶ್ರಿ ಮತ್ತು ಸಿಬ್ಬಂದಿಗಳು ಸ್ಥಳಕ್ಕೆ ತೆರಳಿ ಮಡಿಕೇರಿಯ ಮುಳುಗು ತಜ್ಞ ಮತ್ತಪ್ಪ ಅವರ ಸಹಾಯದಿಂದ ಮೃತ ದೇಹ ಹೊರತೆಗೆಯುವಲ್ಲಿ ಸಫಲರಾಗಿದ್ದಾರೆ. ಮೃತದೇಹವು ಸಂಪೂರ್ಣ ಕೊಳೆತಿರುವ ಸ್ಥಿತಿಯಲ್ಲಿದ್ದು, ರುಂಡ ಶರೀರದಿಂದ ಬೇರ್ಪಟ್ಟಿದೆ. ಮೃತವ್ಯಕ್ತಿ ಕೆಂಪು ಬಣ್ಣದ ಮೇಲಂಗಿ ಮತ್ತು ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ.

ಈ ಶವವನ್ನು ಬೇರೆಲ್ಲೋ ಹತ್ಯೆ ಮಾಡಿ ಕಾವೇರಿ ನದಿಯಲ್ಲಿ ಬಿಸಾಡಿರಬಹುದು ಇಲ್ಲವೆ ಬೇರೆಲ್ಲೋ ಬಿಸಾಡಿರುವ ಶವ ನದಿಯಲ್ಲಿ ತೇಲಿಕೊಂಡು ಬಂದಿರಬಹುದೆಂದು ಪೋಲಿಸರು ಶಂಕಿಸಿದ್ದಾರೆ.

ಮೃತ ವ್ಯಕ್ತಿ ಸುಮಾರು 35-40 ವರ್ಷದವರೆಂದು ಅಂದಾಜಿಸಲಾಗಿದೆ. ಮೃತರ ಬಗ್ಗೆ ಮಾಹಿತಿ ದೊರತಲ್ಲಿ ಸ್ಥಳೀಯ ಪೊಲೀಸ್ ಠಾಣೆಯ 9480804956, ಮತ್ತು 9480804952 ದೂರವಾಣಿ ಸಂಖ್ಯೆ ಸಂಪರ್ಕಿಸುವಂತೆ ಆರಕ್ಷಕ ಇಲಾಖೆಯು ಮನವಿ ಮಾಡಿದೆ.

ಮಳೆ ಅಬ್ಬರ ಕಡಿಮೆಯಾದರೂ ಹಾನಿ ಮಾತ್ರ ನಿಂತಿಲ್ಲ



ಭಾರೀ ಗಾಳಿ-ಮಳೆಗೆ ಗ್ರಾಮದ ಕುಕ್ಕೇರ ಚಿಮ್ಮ ಮನೆ ಮೇಲೆ ಮರ ಉರುಳಿ ಬಿದ್ದ. ಪರಿಣಾಮ ಮನೆಯ ಶೀಟ್‌ಗೆ, ಕಾರಿಗೂ ತೀವ್ರ ಹಾನಿ ಸಂಭವಿಸಿದೆ.

ಮಡಿಕೇರಿ,ಜು.30-ಪುಷ್ಯ ಮಳೆಯ ಅಬ್ಬರ ಕಡಿಮೆಯಾಗಿದ್ದರೂ ಮಳೆ ಹಾನಿ ಪ್ರಕರಣ ವರದಿಯಾಗಿದೆ. ಭಾರೀ ಗಾಳಿ ಮಳೆಯಿಂದ ಮನೆ ಹಾಗೂ ಕಾರಿನ ಮೇಲೆ ಮರ ಮುರಿದು ಬಿದ್ದು ಹಾನಿಯಾದ ಘಟನೆ ಮಡಿಕೇರಿ ಹೊರವಲಯದ ದೇವಸ್ತೂರಿನಲ್ಲಿ ನಡೆದಿದೆ.

ಭಾರೀ ಗಾಳಿ ಮಳೆಗೆ ಗ್ರಾಮದ ಕುಕ್ಕೇರ ಚಿಮ್ಮ ಎಂಬುವರ ಮನೆ ಪಕ್ಕದಲ್ಲಿದ್ದ ಮರವೊಂದು ಮನೆ ಮೇಲೆ ಉರುಳಿ ಬಿದ್ದಿದೆ. ಪರಿಣಾಮ ಚಿಮ್ಮ ಅವರಿಗೆ ಸೇರಿದ ಮನೆಯ ಶೀಟ್‌ಗಳು ಧ್ವಂಸವಾಗಿದ್ದು, ಶೆಡ್‌ನಲ್ಲಿ ನಿಲ್ಲಿಸಿದ್ದ ಕಾರಿಗೂ ತೀವ್ರ ಹಾನಿ ಸಂಭವಿಸಿದೆ. ಘಟನಾ ಸ್ಥಳಕ್ಕೆ ಮಡಿಕೇರಿ ಕಂದಾಯ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಮುಂದಿನ ಕ್ರಮ ಕೈಗೊಂಡಿದ್ದಾರೆ.

800 ವಿದ್ಯುತ್ ಕಂಬಕ್ಕೆ ಹಾನಿ: 4 ದಿನಗಳಿಂದ ಬಿರುಗಾಳಿ ಸಹಿತ ಸುರಿದ ಮಳೆಯಿಂದ ಜಿಲ್ಲೆಯ ವಿವಿಧ ಭಾಗಗಳಲ್ಲಿ ಒಟ್ಟು 800ಕ್ಕೂ ಅಧಿಕ ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಮಡಿಕೇರಿ ತಾಲೂಕು ಮತ್ತು ಸೋಮವಾರಪೇಟೆ ವ್ಯಾಪ್ತಿಯಲ್ಲಿ ಬಿರುಗಾಳಿ ಸಹಿತ ಸುರಿದ ಮಳೆಯಿಂದ ಅತಿ ಹೆಚ್ಚು ಹಾನಿ ಸಂಭವಿಸಿದೆ ಎಂದು ಚೆಸ್ಕಾಂ ಇಲಾಖೆ ಮಾಹಿತಿ ನೀಡಿದೆ. ಮಳೆ ಜೊತೆಯಲ್ಲಿಯೇ ಗಾಳಿಯೂ ಇದ್ದ ಹಿನ್ನೆಲೆಯಲ್ಲಿ ಈ ಎರಡು ತಾಲೂಕುಗಳಲ್ಲಿ ವಿದ್ಯುತ್ ಪೂರೈಕೆ ಮರು ಸ್ಥಾಪಿಸುವ ಕೆಲಸಕ್ಕೆ ವಿಳಂಬವಾಗಿದೆ. ಹೀಗಿದ್ದರೂ ಚೆಸ್ಕಾಂ ಸಿಬ್ಬಂದಿಗಳು ಸಮಾರೋಪಾದಿಯಲ್ಲಿ ದುರಸ್ಥಿ ಕಾರ್ಯ ನಡೆಸುತ್ತಿದ್ದಾರೆ.

ಕೆಂಪೇಗೌಡರು ನಿರ್ಮಿಸಿದ ಬೆಂಗಳೂರು ವಿಶ್ವಕ್ಕೆ ಮಾದರಿ: ಸಚಿವ ಕೆ.ವೆಂಕಟೇಶ್



ತಾಲೂಕು ಒಕ್ಕಲಿಗರ ಸಂಘ ವತಿಯಿಂದ ನಡೆದ ನಾಡಪ್ರಭು ಶ್ರೀಕೆಂಪೇಗೌಡ ಜಯಂತೋತ್ಸವ ಸಮಾರಂಭವನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಉದ್ಘಾಟಿಸಿದರು.

ಚಾಮರಾಜನಗರ, ಜು.30- ನಾಡಪ್ರಭು ಕೆಂಪೇಗೌಡರು ನಿರ್ಮಿಸಿದ ಬೆಂಗಳೂರು ವಿಶ್ವಕ್ಕೆ ಮಾದರಿಯಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಹೇಳಿದರು.

ನಗರದ ಡಾ.ರಾಜ್‌ಕುಮಾರ್ ಕಲಾಮಂದಿರದಲ್ಲಿ ತಾಲೂಕು ಒಕ್ಕಲಿಗರ ಸಂಘ ವತಿಯಿಂದ ನಡೆದ ನಾಡಪ್ರಭು ಶ್ರೀಕೆಂಪೇಗೌಡ ಜಯಂತೋತ್ಸವ ಸಮಾರಂಭವನ್ನು ಉದ್ಘಾಟಿಸಿ ನಾಡಪ್ರಭು ಕೆಂಪೇಗೌಡರು ದೂರದೃಷ್ಟಿಯ ನಾಯಕರಾಗಿದ್ದರು. ಅವರು ನಾಡು ಕಂಡ ಅದ್ವಿತೀಯ ನಾಯಕರಾಗಿದ್ದಾರೆ. ಎಲ್ಲ ಜನಾಂಗದವರಿಗೂ ಅನುಕೂಲವಾಗುವ ರೀತಿಯಲ್ಲಿ ಬೆಂಗಳೂರು ನಗರವನ್ನು ಕಟ್ಟಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಾಲೂಕು ಒಕ್ಕಲಿಗರ ಸಂಘಕ್ಕೆ ವೈಯಕ್ತಿಕವಾಗಿ ಐದು ಲಕ್ಷ ರೂ. ಕೊಟ್ಟಿರುವ ನಿವೇಶನವನ್ನು ಸದುಪಯೋಗ ಪಡಿಸಿಕೊಳ್ಳಿ ನಾನೂ ಕೂಡ ಅದರ ಬೆಳವಣಿಗೆ ಸಹಕಾರ ನೀಡುತ್ತೇನೆ ಎಂದು ಭರವಸೆ ನೀಡಿದರು.

ಮೈಸೂರು ಆದಿಚುಂಚನಗಿರಿ ಸಂಸ್ಥಾನ ಮಠದ ಶ್ರೀ ಸೋಮನಾಥಸ್ವಾಮೀಜಿ ಆಶೀರ್ವಚನ ನೀಡಿ, ನಾಡುಪ್ರಭು ಕೆಂಪೇಗೌಡರ ಧಾರ್ಮಿಕ ಭಾವನೆಯನ್ನು ನಮ್ಮ ಮಕ್ಕಳಲ್ಲಿ ಬಿತ್ತಬೇಕು. ಎಲ್ಲರೂ ಸಹೃದಯ ಭಾವನೆಯಿಂದ ಬೆರೆಯಬೇಕು. ಕೆಂಪೇಗೌಡ ಜಯಂತಿಯನ್ನು ತುಂಬಾ ಚೆನ್ನಾಗಿ ಆಚರಣೆ ಮಾಡಿರುವುದು ಸಂತಸ ವಾಗಿದೆ ಮುಂದಿನ ದಿನಗಳಲ್ಲಿ ಒಕ್ಕಲಿಗರಿಗಷ್ಟೆ ಅಲ್ಲ ಎಲ್ಲ ಸಮುದಾಯಗಳನ್ನು ಒಗ್ಗೂಡಿಸಿಕೊಂಡು ಕೆಂಪೇಗೌಡರ ಜಯಂತಿ ಆಚರಣೆ ಮಾಡಬೇಕು ಎಂದರು.

ಮುಖ್ಯ ಭಾಷಣಕಾರ ವೈದ್ಯ ಡಾ. ಎಸ್.ಪಿ.ಯೋಗಣ್ಣ ಮಾತನಾಡಿ, ಕೆಂಪೇಗೌಡರ ಸಾಧನೆ, ಸಾಮಾಜಿಕ ಕಳಕಳಿಯನ್ನು ಮುಂದಿನ ಪೀಳಿಗೆಗೆ ಪಸರಿಸುವ ಕೆಲಸವನ್ನು ಮಾಡಬೇಕಾಗಿದೆ. ಒಕ್ಕಲಿಗರು ಈ ದೇಶದ ಮೂಲ ಪುರುಷರಾಗಿದ್ದಾರೆ. ಆದ್ದರಿಂದ ಜಾತಿಯಲ್ಲಿ ಒಕ್ಕಲಿಗ ಎಂದೇ ಬರೆಸಿ ಎಂದು ಸಲಹೆ ನೀಡಿದರು.

ಅದ್ದೂರಿ ಮೆರವಣಿಗೆ: ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಕೆಂಪೇಗೌಡರ ಭಾವಚಿತ್ರ ಮೆರವಣಿಗೆಗೆ ಚಾಲನೆ ನೀಡಲಾಯಿತು. ಮೆರವಣಿಗೆಯು ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಡಾ.ರಾಜ್ ಕುಮಾರ್ ಕಲಾಮಂದಿರದ ಬಳಿಗೆ ತೆರಳಿ ಮುಕ್ತಾಯವಾಯಿತು.

ವಿಧಾನಪರಿಷತ್ ಸದಸ್ಯ ಮಂಜೇಗೌಡ ಅಧ್ಯಕ್ಷತೆ ವಹಿಸಿದ್ದರು. ಶ್ರೀರಂಗಪಟ್ಟಣ ಕ್ಷೇತ್ರದ ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಮಾಜಿ ಶಾಸಕ ಆರ್. ನರೇಂದ್ರ ಮಾತನಾಡಿದರು. ತಾಲೂಕು ಒಕ್ಕಲಿಗರ ಸಂಘ ಅಧ್ಯಕ್ಷ ಸುದರ್ಶನ ಗೌಡ ಉಪಸ್ಥಿತಿ ವಹಿಸಿದ್ದರು. ಗೌರವಾಧ್ಯಕ್ಷ ಕೆ.ಪುಟ್ಟಸ್ವಾಮಿ ಗೌಡ ಪ್ರಾಸ್ತಾವಿಕ ಭಾಷಣ ಮಾಡಿದರು.

ಕಾರ್ಯಕ್ರಮದಲ್ಲಿ ಚೂಡಾಧ್ಯಕ್ಷ ಮಹಮ್ಮದ್ ಅಸ್ಗರ್, ಮಾಜಿ ಶಾಸಕ ಆರ್.ನರೇಂದ್ರ, ಎಡಿಸಿ ಜವರೇಗೌಡ, ಎಸ್ಪಿ ಡಾ.ಬಿ.ಟಿ.ಕವಿತ, ಮಾನಸ ವಿದ್ಯಾ ಸಂಸ್ಥೆ ಕಾರ್ಯದರ್ಶಿ ದತ್ತೇಶ್, ಸತೀಶ್, ಸಂಘ ಉಪಾಧ್ಯಕ್ಷರಾದ ಚನ್ನಮುತ್ತು, ಪಿ.ಕೆ.ರಾಜು, ಕೆ.ಎಂ. ಮಂಜು, ಪ್ರಧಾನ ಕಾರ್ಯದರ್ಶಿ ಸೋಮಶೇಖರ್, ಸಹಕಾರ್ಯದರ್ಶಿ ನಾಗೇಂದ್ರಗೌಡ, ಖಜಾಂಚಿ ನಾರಾಯಣ ಪ್ರಸಾದ್, ಮಹಾ ಪೋಷಕ ಚಿಕ್ಕರಂಗೇಗೌಡ, ಪೋಷಕರಾದ ಮಂಜುನಾಥ್ ಗೌಡ, ಸಿದ್ದೇಗೌಡ, ಚಿಕ್ಕತಾಯಮ್ಮ, ಸದಸ್ಯರಾದ ಪಿ.ಹೆಚ್.ರಾಜು, ರಾಜೇಶ್, ನಾಗೇಂದ್ರ, ಶೇಖರ್, ಸಿದ್ದರಾಜೇ ಗೌಡ, ಮರಿಸ್ವಾಮಿ, ಅರುಣ್‌ಕುಮಾರ್ ಗೌಡ, ಪುರುಷೋತ್ತಮ, ರಾಜಶೇಖರ, ರಮೇಶ್, ಮಹೇಶ್ ಹಾಜರಿದ್ದರು.

ಅಕ್ರಮ ಅಕ್ಕಿ ಸಾಗಾಣಿಕೆ: ಮೂವರ ಬಂಧನ



ಕೊಳ್ಳೇಗಾಲ: ತಾಲೂಕಿನ ಚೆಲುವಹಳ್ಳಿ ಗ್ರಾಮದ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಕ್ರಮವಾಗಿ ಅಕ್ಕಿ ಸಾಗಾಣಿಕೆ ಮಾಡುತ್ತಿದ್ದ ಆರೋಪದ ಮೇರೆಗೆ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಚಾ.ನಗರದ ಇರ್ಫಾನ್ ಖಾನ್(19), ಜುಬೇರ್ ಉಲ್ಲಾ(45) ಹಾಗೂ ವಾಸೀಂ ಉಲ್ಲಾ (30) ಬಂಧಿತ ಆರೋಪಿಗಳು. ಇವರಿಂದ 248 ಕೆಜಿ ಅಕ್ಕಿ ಹಾಗೂ ಸಾಗಾಣಿಕೆ ಬಳಸಿದ್ದ ಕಾರನ್ನು ಪೋಲಿಸರು ಜಪ್ತಿ ಮಾಡಿದ್ದಾರೆ.

ಚಾ.ನಗರದ ಕಡೆಯಿಂದ ಅಕ್ಕಿ ಮೂಟೆಗಳನ್ನು ಕಾರಿನಲ್ಲಿ ಹಾಕಿಕೊಂಡು ಕಾಳಸಂತೆಯಲ್ಲಿ ಮಾರಾಟ ಮಾಡಲು ಕೊಳ್ಳೇಗಾಲ ಮಾರ್ಗವಾಗಿ ಸಾಗಾಣಿಕೆ ಮಾಡುತ್ತಿದ್ದಾರೆಂಬ ಖಚಿತ ಮಾಹಿತಿ ಮೇರೆಗೆ ಗ್ರಾಮಾಂತರ ಪೊಲೀಸರು ಹಾಗೂ ಅಹಾರ ಇಲಾಖೆಯ ಅಧಿಕಾರಿಗಳು ಚೆಲುವಹಳ್ಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಜಂಟಿ ದಾಳಿ ನಡೆಸಿ ಅಕ್ಕಿ ಸಮೇತ ಆರೋಪಿಗಳನ್ನು ಬಂಧಿಸಿದ್ದಾರೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಜರುಗಿಸಿದ್ದಾರೆ.

ಒಣ ಗಾಂಜಾ ಮಾರುತ್ತಿದ್ದ ಇಬ್ಬರ ಬಂಧನ: 1.60 ಕೆಜಿ ಗಾಂಜಾ ವಶ



ಗಾಂಜಾ ಮಾರಾಟ ಮಾಡುತ್ತಿದ್ದ ಜಾಕೀರ್ ಹುಸೇನ್ ನಗರದ ಸಲ್ಮಾನ್ ಮತ್ತು ಇಮ್ರಾನ್‌ರನ್ನು ಪೋಲೀಸರು ಬಂಧಿಸಿದ್ದಾರೆ.

ಗುಂಡ್ಲುಪೇಟೆ,ಜು.30 (ಸೋಮ್.ಜಿ)-ಒಣಗಾಂಜಾ ಮಾರಾಟ ಮಾಡುತ್ತಿದ್ದ ಆರೋಪದ ಮೇರೆಗೆ ಪಟ್ಟಣದ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಪಟ್ಟಣದ ಹೊರ ವಲಯದಲ್ಲಿರುವ ಸುಲ್ತಾನ್ ಭತ್ತೇರಿ ರಸ್ತೆಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದಾರೆಂಬ ಖಚಿತ ಮಾಹಿತಿಯ ಮೇರೆಗೆ ಪೊಲೀಸರು ದಾಳಿ ನಡೆಸಿ ಪಟ್ಟಣದ ಜಾಕೀರ್ ಹುಸೇನ್ ನಗರದ ಸಲ್ಮಾನ್ ಮತ್ತು ಇಮ್ರಾನ್ ಎಂಬವರನ್ನು ಬಂಧಿಸಿದ್ದು, ಅವರಿಂದ 1 ಕೆ.ಜಿ 60 ಗ್ರಾಂ ಒಣ ಗಾಂಜಾವನ್ನು ವಶಕ್ಕೆ ಪಡೆದಿದ್ದಾರೆ.

ಪಟ್ಟಣ ಪೋಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಜಯಕುಮಾರ್, ಸಬ್ ಇನ್ಸ್‌ಪೆಕ್ಟರ್ ಸಾಹೇಬಗೌಡ, ಸಿಬ್ಬಂದಿಗಳಾದ ಕಿಶೋರ್, ಶಿವರಾಜು, ನಟೇಶ ಹಾಗೂ ಇತರರು ಭಾಗವಹಿಸಿದ್ದರು.

ಕಡಿಮೆ ಬೆಲೆಗೆ ಸೀರೆ ಆಫರ್; ಮುಗಿಬಿದ್ದ ಗ್ರಾಹಕರು

ಅಂಗಡಿ ಮುಂದೆ ಜನಜಂಗುಳಿ, ಅಕ್ಕಪಕ್ಕ ವರ್ತಕರಿಗೆ ಕಿರಿಕಿರಿ, ಪೊಲೀಸರಿಂದ ಅಂಗಡಿ ಬಂದ್



ಮಂಡ್ಯ, ಜು.30- ಪುಕ್ಕಟೆ ಪ್ರಚಾರ ಪಡೆಯಲು ಕಡಿಮೆ ದರದಲ್ಲಿ ಸೀರೆ ಕೊಡುತ್ತೇವೆಂದು ಕಳೆದೊಂದು ವಾರದಿಂದ ಪ್ರಚಾರ ಮಾಡಿದ ಪರಿಣಾಮ ನಗರದ ವಿ.ವಿ.ರಸ್ತೆಯಲ್ಲಿ ಬುಧವಾರ ಲೋಕಾರ್ಪಣೆಗೊಂಡ ಸೆಂಥಿಲ್ ಕುಮಾರ್ ಟೆಕ್ಸ್‌ಟೈಲ್ ಬಟ್ಟೆ ಅಂಗಡಿ ಎದುರು ಕಡಿಮೆ ದರದಲ್ಲಿ ಸೀರೆ ಪಡೆಯಲು ಸಾವಿರಾರು ಮಹಿಳಾ ಗ್ರಾಹಕರು ಜಮಾಯಿಸಿದ್ದರು.

ನಗರದ ಜನನಿಬಿಡ ಪ್ರದೇಶವಾದ ವಿ.ವಿ.ರಸ್ತೆಯಲ್ಲಿ ಸೆಂಥಿಲ್ ಕುಮಾರ್ ಟೆಕ್ಸ್ ಟೈಲ್ ಬಟ್ಟೆ ಅಂಗಡಿ ಲೋಕಾರ್ಪಣೆಗೊಂಡಿದ್ದು, ವಾರಕ್ಕೂ ಮುನ್ನಾ ಅಂಗಡಿ ಮಾಲೀಕರು ಸಾವಿರ ರೂ.ಗಳಿಗೆ 4 ಸೀರೆ ಕೊಡುತ್ತೇವೆಂದು ಮಂಡ್ಯ ಸೇರಿದಂತೆ ತಾಲೂಕಿನಾದ್ಯಂತ ಆಟೋ, ಕೃತಕ ಆನೆಗಳ ಮೂಲಕ ವಿಭಿನ್ನ ಪ್ರಚಾರ ಕೈಗೊಂಡಿದ್ದರು. ಆದರೆ ಇಂದು ಅಂಗಡಿ ಉದ್ಘಾಟನೆಗೊಂಡು ಬಾಗಿಲು ತೆರೆಯುವ ಮುನ್ನವೇ ಜನಜಂಗುಳಿ ಜಮಾಯಿಸಿತ್ತು

ಸ್ಥಳೀಯರ ಪ್ರಕಾರ ಮುಂಜಾನೆ 4 ಗಂಟೆಗೆ ಜನ ಜಮಾಯಿಸಿದ್ದರು ಎಂದು ಹೇಳಲಾಗುತ್ತಿದ್ದು, ಸಾವಿರಾರು ಮಂದಿ ಮಹಿಳಾ ಗ್ರಾಹಕರು ಜಮಾಯಿಸುತ್ತಾರೆಂಬ ಮಾಹಿತಿ ಹಿನ್ನೆಲೆಯಲ್ಲಿ ಅಂಗಡಿ ಮಾಲೀಕರು ಬ್ಯಾರಿಕೇಟ್ ಅಳವಡಿಸಿ, ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಂಡಿದ್ದರು. ಅಂಗಡಿ ಲೋಕಾರ್ಪಣೆಯಾಗಿ ಕೆಲ ನಿಮಿಷಗಳಲ್ಲೇ ವಿ.ವಿ.ರಸ್ತೆಯಲ್ಲಿ ಜನಜಾತ್ರೆ ಸೃಷ್ಟಿಯಾಗಿತ್ತು. ಅಲ್ಲದೆ ಗ್ರಾಹಕರು ಬ್ಯಾರಿಕೇಟ್ ತಳ್ಳಿಕೊಂಡು ಅಂಗಡಿಗೆ ನುಗ್ಗುವ ದೃಶ್ಯ ಕಂಡು ಬಂತು. ಅದರಲ್ಲೂ ಬ್ಯಾರಿಕೇಟ್ ಹಾಕಿದ್ದರಿಂದ ಅಕ್ಕಪಕ್ಕದ ಅಂಗಡಿಗಳ ವ್ಯಾಪಾರಕ್ಕೂ ಕುತ್ತು ಬಿತ್ತು. ಜೊತೆಗೆ ವಿ.ವಿ.ರಸ್ತೆ ತುಂಬಾ ಜನರಿದ್ದರಿಂದ ಬಹುತೇಕ ಅಂಗಡಿಗಳಲ್ಲಿ ವ್ಯಾಪಾರಕ್ಕೆ ಸಂಚಕಾರ ಉಂಟಾಯಿತು. ಅಲ್ಲದೆ ಮೊದಲೇ ಟ್ರಾಫಿಕ್ ಜಾಮ್‌ನಿಂದ ಕೂಡಿರುವ ವಿ.ವಿ.ರಸ್ತೆಯಲ್ಲಿ ಸಾವಿರಾರು ಜನ ಸೇರಿದ್ದರಿಂದ ಸಂಚಾರ ಅಸ್ತವ್ಯಸ್ತವಾಯಿತು. ಇನ್ನು ಆ ರಸ್ತೆಯಲ್ಲಿ ಕೆಲ ಪ್ರಯಾಣಿಕರು ಜನರನ್ನು ನೋಡಿ ಬೇರೆ ರಸ್ತೆ ಆಯ್ಕೆ ಮಾಡಿಕೊಂಡರು.

ಇತ್ತ ಕೆಲ ಮಹಿಳಾ ಗ್ರಾಹಕರಿಗೆ ಸೀರೆ ಸಿಕ್ಕರೆ, ಇನ್ನು ಕೆಲವರು ಸೀರೆಗಾಗಿ ಕಾಯುತ್ತಿದ್ದ ದೃಶ್ಯ ಕಂಡು ಬಂತು. ಯಾವಾಗ ಗ್ರಾಹಕರು ಹೆಚ್ಚಾದರೋ ಅಕ್ಕಪಕ್ಕ ಅಂಗಡಿಯವರಿಗೆ ಕಿರಿಕಿರಿ ಹೆಚ್ಚಾಗಿ ಮಂಡ್ಯದ ಪಶ್ಚಿಮ ಠಾಣೆ ಪೊಲೀಸರಿಗೆ ವಿಚಾರ ಮುಟ್ಟಿಸಿದ್ದು, ಸ್ಥಳಕ್ಕಾಗಮಿಸಿದ ಪೊಲೀಸ್ ಸಿಬ್ಬಂದಿ ಸೆಂದಿಲ್ ಕುಮಾರ್ ಟೆಕ್ಸ್‌ಟೈಲ್ ಬಟ್ಟೆ ಅಂಗಡಿ ಮಾಲೀಕರನ್ನು ತರಾಟೆಗೆ ತೆಗೆದುಕೊಂಡರು. ಅಲ್ಲದೇ ಈ ರೀತಿ ಜನ ಬರುತ್ತಾರೆಂದ ಮೇಲೆ ಅನುಮತಿ ಪಡೆದಿದ್ದೀರಾ? ಪಡೆದಿದ್ದರೆ ಎಷ್ಟು ಮಂದಿ ಬರುತ್ತಾರೆಂದು ಅನುಮತಿ ಪತ್ರದಲ್ಲಿ ಉಲ್ಲೇಖಿಸಿದ್ದೀರಾ? ಜನನಿಬಿಡ ಮತ್ತು ವಾಣಿಜ್ಯ ಮಳಿಗೆಗಳಿರುವ ಇಂತಹ ರಸ್ತೆಯಲ್ಲಿ ಸಾವಿರಾರು ಜನರನ್ನು ಸೇರಿಸಿ ಕಿರಿಕಿರಿ ಏಕೆ ಮಾಡುತ್ತಿದ್ದೀರಿ ಎಂದು ಪ್ರಶ್ನಿಸಿದರು.

ನಿಮ್ಮ ಕಿರಿಕಿರಿಯಿಂದ ಅಕ್ಕಪಕ್ಕದ ಮಳಿಗೆಯವರು ವ್ಯಾಪಾರ ಮಾಡದಂತಾಗಿದೆ. ಜನ ಈ ರಸ್ತೆಗೆ ಕಾಲಿಡಲು ಆಗುತ್ತಿಲ್ಲ. ವಾಹನಗಳ ಸಂಚಾರ ದಟ್ಟಣೆ ಹೆಚ್ಚಾಗಿದ್ದು, ನಿಮ್ಮ ಮೇಲೇಕೆ ಕಾನೂನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ಇದರಿಂದ ತಬ್ಬಿಬ್ಬಾದ ಮಾಲೀಕರು ಕಡೆಗೆ ಪೊಲೀಸರಿಗೆ ಪರಿಸ್ಥಿತಿ ಬಗ್ಗೆ ವಿವರಿಸಿ, ಕ್ಷಮೆ ಕೇಳಿ ಅಂಗಡಿ ಮುಚ್ಚಿದ್ದಾರೆ. ಅಂಗಡಿ ಮುಚ್ಚಿದರೂ ಸಹ ಗ್ರಾಹಕರು ಮಾತ್ರ ಅಂಗಡಿ ಮತ್ತೆ ತೆರೆಯಬಹುದೆಂಬ ನಿರೀಕ್ಷೆಯಲ್ಲಿ ಹಾಗೆ ನಿಂತಿದ್ದರು.

ಸೆಂದಿಲ್ ಕುಮಾರ್ ಟೆಕ್ಸ್‌ಟೈಲ್ ಬಟ್ಟೆ ಅಂಗಡಿ ಮಾಲೀಕರು ಮಾಡಿದ ಯಡವಟ್ಟಿಗೆ ಅಕ್ಕಪಕ್ಕದ ವಾಣಿಜ್ಯ ಮಳಿಗೆ ಮಾಲೀಕರು ಹಿಡಿ ಶಾಪ ಹಾಕಿದ್ದು ಇವರು ಮಾಡಿದ ಯಡವಟ್ಟಿಗೆ ನಮ್ಮ ವ್ಯಾಪಾರ ಬಲಿಯಾಗಿದೆ. ನಮ್ಮ ಅಂಗಡಿಗಳ ಮುಂದೆ ಬ್ಯಾರಿಕೇಟ್ ಹಾಕಿದ್ದಾರೆ. ಇದರಿಂದ ಪಾರ್ಕಿಂಗ್ ಮತ್ತು ಟ್ರಾಫಿಕ್ ಸಮಸ್ಯೆಯಾಗಿದೆ ಎಂದರೆ, ಇತ್ತ ಗ್ರಾಹಕರು ಪುಕ್ಕಟೆ ಪ್ರಚಾರ ಪಡೆಯಲು ನಮಗೆ ಸೀರೆ ಕೊಡದೇ ನಮ್ಮ ಸಮಯ ವ್ಯರ್ಥ ಮಾಡಿದ್ದಾರೆಂದು ಅಸಮಾಧಾನ ಹೊರ ಹಾಕಿದರು.

ವೈ.ಎನ್.ಶಂಕರೇಗೌಡರಿಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡಿ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್‌ಸಿಎಂಗೆ ಮನವಿ



ವೈ.ಎನ್.ಶಂಕರೇಗೌಡರಿಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡುವಂತೆ ಸಚಿವರಿಗೆ ಮನವಿ ಸಲ್ಲಿಸಲಾಯಿತು.

ತಿ.ನರಸೀಪುರ, ಜು.30- ಸಹಕಾರಿ ಧುರೀಣರು, ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಮುಖಂಡರಾದ ವೈ.ಎನ್.ಶಂಕರೇಗೌಡರಿಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡುವಂತೆ ಬನ್ನೂರು ಹೋಬಳಿ, ತುರಗನೂರು ಜಿಪಂ ವ್ಯಾಪ್ತಿಯ 150ಕ್ಕೂ ಹೆಚ್ಚು ಮುಖಂಡರು, ಕಾರ್ಯಕರ್ತರು ಬುಧವಾರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.

ಬೆಂಗಳೂರಿನಲ್ಲಿರುವ ಜಿಲ್ಲಾ ಉಸ್ತುವಾರಿ ಸಚಿವರ ಮನೆಗೆ ತುರುಗನೂರಿನ ನಾದನಂದನಾಥ ಸ್ವಾಮೀಜಿ, ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ತಾಪಂ ಮಾಜಿ ಅಧ್ಯಕ್ಷ ಚಾಮೇಗೌಡ, ಜಿಪಂ ಮಾಜಿ ಸದಸ್ಯ ಮಾರಗೌಡನಹಳ್ಳಿ ಸುಧೀರ್, ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಕೇಶವ, ಯಾಚೇನಹಳ್ಳಿ ಹನುಮಂತೇಗೌಡ, ಬೋರೇಗೌಡ, ಕ್ಯಾತೇಗೌಡ, ದೊಡ್ಡಮುಲಗೂಡು ಸ್ವಾಮಿಗೌಡ ಅವರೊಂದಿಗೆ ಭೇಟಿ ನೀಡಿದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಶಂಕರೇಗೌಡರ ಅಭಿಮಾನಿಗಳು, ಬೆಂಬಲಿಗರು ವೈಎನ್.ಶಂಕರೇಗೌಡರಿಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡುವಂತೆ ಸಚಿವರಿಗೆ ಮನವಿ ಸಲ್ಲಿಸಿದರು.


ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಮಾತನಾಡಿ, ವೈ.ಎನ್.ಶಂಕರೇಗೌಡರು ದಶಕಗಳಿಂದ ಕಾಂಗ್ರೆಸ್ ಪಕ್ಷಕ್ಕೆ ನಿಷ್ಠಾವಂತರಾಗಿ ದುಡಿದಿದ್ದಾರೆ. ಹೀಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅವರನ್ನು ನಿಗಮ ಮಂಡಳಿ ಅಧ್ಯಕ್ಷರನ್ನಾಗಿ ಮಾಡಬೇಕು. ಆ ಮೂಲಕ ಬನ್ನೂರು ಹೋಬಳಿಯಲ್ಲಿ ಪಕ್ಷವನ್ನು ಮತ್ತಷ್ಟು ಬಲಗೊಳಿಸಲು ಮುಂದಾಗಬೇಕು ಎಂದರು.

ಮನವಿ ಸ್ವೀಕರಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ವೈಎನ್.ಶಂಕರೇಗೌಡರು ಹಲವು ವರ್ಷಗಳಿಂದ ಮುಂಚೂಣಿ ನಾಯಕರಾಗಿ ಪಕ್ಷ ಸಂಘಟನೆ ಮಾಡಿದ್ದಾರೆ. ಹೀಗಾಗಿ ಅವರನ್ನು ನಿಗಮ ಮಂಡಳಿ ಅಧ್ಯಕ್ಷರನ್ನಾಗಿ ನೇಮಕ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಶಿಫಾರಸ್ಸು ಮಾಡುತ್ತೇನೆ ಎಂದು ಭರವಸೆ ನೀಡಿದರು.

ಈ ವೇಳೆ ಮುಖಂಡರಾದ ಸೋಮಶೇಖರ್, ಮಹೇಂದ್ರ, ಶೇಖರ್, ಮರೀಗೌಡ, ಲೋಕೇಶ್, ಮಾಲಿಂಗೇಗೌಡ, ರಾಜು, ಕೃಷ್ಣೇಗೌಡ ಪಟೇಲ್, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಪ್ರಸನ್ನ, ದೇವರಾಜ್, ಮಹೇಂದ್ರ, ಕೃಷ್ಣೇಗೌಡ, ನಂದೀಶ್, ನಾಗೇಶ್, ನಾಗೇಶ್, ಪುಟ್ಟರಾಜು, ಚನ್ನಮಲ್ಲೂ, ಮಹದೇವು, ಪುಟ್ಟಸ್ವಾಮಿ, ಮಹದೇವು, ನಾಗೇಂದ್ರ, ರಾಮು, ಲಕ್ಷ್ಮಣ, ರಾಘವೇಂದ್ರ ಕಾಂಗ್ರೆಸ್ ಮುಖಂಡರು ಇದ್ದರು.

ಸಾರ್ವಜನಿಕರ ಸಮಸ್ಯೆ ಪರಿಹರಿಸಲು ಆ್ಯಪ್ ಅಭಿವೃದ್ಧಿ

ಶಾಸಕ ದರ್ಶನ್ ಪುಟ್ಟಣ್ಣಯ್ಯ



ಕಾರ್ಯಕ್ರಮವನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಉದ್ಘಾಟಿಸಿದರು.

ಮಂಡ್ಯ, ಜು.30- ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸಲು ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ನಿಮ್ಮ ಸಮಸ್ಯೆಗಳನ್ನು ನಮೂದಿಸಿದರೆ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ ಪರಿಹರಿಸುತ್ತಾರೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.


ಬುಧವಾರ ತಾಲೂಕಿನ ದುದ್ದ ಗ್ರಾಮದಲ್ಲಿ ಆಯೋಜಿಸಿದ್ದ 'ಸರ್ಕಾರಿ ಕಚೇರಿಗಳಿಗೆ ನೀವು ಬರಬೇಡಿ ಕಚೇರಿಯೇ ನಿಮ್ಮ ಮನೆ ಬಾಗಿಲಿಗೆ ಬರಲಿದೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದುದ್ದ ಗ್ರಾಪಂ ವ್ಯಾಪ್ತಿಯಲ್ಲಿ 1310ಕ್ಕೂ ಹೆಚ್ಚು ಮನೆಗಳಿದ್ದು, ಈಗಾಗಲೇ ಅಧಿಕಾರಿಗಳು ಶೇ.90ರಷ್ಟು ಮನೆಗಳಿಗೆ ತೆರಳಿ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದು ಆ್ಯಪ್‌ನಲ್ಲಿ ನಮೂದಿಸಿದ್ದಾರೆ ಎಂದರು.

ಸಮಸ್ಯೆ ಹೊಂದಿರುವ ಸಾರ್ವಜನಿಕರಲ್ಲಿ ಶೇ.80 ರಷ್ಟು ಮಂದಿ ಅರ್ಜಿ ಸಲ್ಲಿಸಲು ಹಿಂದೇಟು ಹಾಕುತ್ತಾರೆ. ಶೇ.20 ರಷ್ಟು ಮಾತ್ರ ಶಾಸಕರ ಹಾಗೂ ಸರ್ಕಾರಿ ಕಚೇರಿಗಳಿಗೆ ತೆರಳಿ ಅರ್ಜಿ ಸಲ್ಲಿಸುತ್ತಾರೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಕಚೇರಿಗಳಿಗೆ ನೀವು ಬರಬೇಡಿ ಕಚೇರಿಯೇ ನಿಮ್ಮ ಮನೆ ಬಾಗಿಲಿಗೆ ಬರಲಿದೆ ಎಂಬ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಧಿಕಾರಿಗಳಲ್ಲಿ ಅರ್ಜಿ ಕೊಟ್ಟರೆ ಮಾತ್ರ ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂಬ ಮನೋಭಾವವಿದೆ. ಇದನ್ನು ಹೋಗಲಾಡಿಸಲು ಹೊಸ ಆ್ಯಪ್ ಅಭಿವೃದ್ಧಿ ಪಡಿಸಿದ್ದೇವೆ. ಆ್ಯಪ್‌ನಲ್ಲಿ ಸಮಸ್ಯೆಗಳನ್ನು ತಿಳಿಸಿದರೆ ಸಂಬಂಧ ಪಟ್ಟ ಅಧಿಕಾರಿಗಳು ಅದರ ನಿವಾರಣೆಗೆ ಕ್ರಮ ಕೈಗೊಳ್ಳಲಿದ್ದಾರೆ. ಮುಂದಿನ ದಿನಗಳಲ್ಲಿ ಸಾರ್ವಜನಿಕರೆ ಆ್ಯಪ್ ಬಳಸಿ ತಮ್ಮ ಸಮಸ್ಯೆಗಳನ್ನು ನಮೂದಿಸಬಹುದಾಗಿದೆ ಎಂದರು.

ತಹಸೀಲ್ದಾರ್ ವಿಶ್ವನಾಥ್, ತಾಪಂ ಇಓ ಲೋಕೇಶ್ ಮೂರ್ತಿ ಮಾತನಾಡಿದರು. ನಂತರ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಸಾರ್ವಜನಿಕರ ಅಹವಾಲು ಸ್ವೀಕರಿಸಿ ಸ್ಥಳದಲ್ಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಸ್ಯೆಗಳನ್ನು ಪರಿಹರಿಸಲು ಸೂಚಿಸಿದರು.

ಕಾರ್ಯಕ್ರಮದಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ.ಚಲುವಯ್ಯ, ಬಿಇಓ ಸೌಭಾಗ್ಯಮ್ಮ, ಗ್ರಾಪಂ ಅಧ್ಯಕ್ಷ ರಾಮಚಂದ್ರ, ಅಧಿಕಾರಿ ಕುಮಾರಸ್ವಾಮಿ ಮತ್ತಿತರರಿದ್ದರು.

ಎ.ಎಸ್.ಕೃಷ್ಣೇಗೌಡ ನಿಧನ



ಕೆ.ಆರ್.ಪೇಟೆ, ಜು.30- ತಾಲೂಕಿನ ಅಕ್ಕಿಹೆಬ್ಬಾಳು ಗ್ರಾಮದ ನಿವಾಸಿ ಎ.ಎಸ್. ಕೃಷ್ಣೇಗೌಡ(75) ಬುಧವಾರ ನಿಧನರಾದರು.

ಮೃತರು ಪತ್ನಿ, ತಾಪಂ ಮಾಜಿ ಸದಸ್ಯೆ ರೇಣುಕಾ, ಸಹೋದರರು, ಸಹೋದರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಬೆಳಗ್ಗೆ 10 ಗಂಟೆಗೆ ಹುಟ್ಟೂರಲ್ಲಿ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಆ.6, ಸೇವಾ ಕಾರ್ಯಗಳೊಂದಿಗೆ ವಿ.ಶ್ರೀನಿವಾಸ ಪ್ರಸಾದ್ ಹುಟ್ಟುಹಬ್ಬ

ಪೂರ್ವಭಾವಿ ಸಭೆಯಲ್ಲಿ ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾಹಿತಿ



ಪೂರ್ವಭಾವಿ ಸಭೆಯಲ್ಲಿ ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿದರು.

ನಂಜನಗೂಡು, ಜು.30- ಮಾಜಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ 78ನೇ ಹುಟ್ಟುಹಬ್ಬದ ಪ್ರಯುಕ್ತ ನಗರದಲ್ಲಿ ಆ.6ರಂದು ವಿವಿಧ ಸಾಮಾಜಿಕ ಸೇವಾ ಕಾರ್ಯಗಳೊಂದಿಗೆ ಅವರ ರಾಜಕೀಯ ಹೆಜ್ಜೆ ಗುರುತು ಹಾಗೂ ಸೇವಾ ಕಾರ್ಯಗಳನ್ನು ಸ್ಮರಿಸುವ ಬೃಹತ್ ಸಮಾರಂಭ ಆಯೋಜಿಸಲಾಗಿದೆ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಬುಧವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ವಿ.ಶ್ರೀನಿವಾಸ ಪ್ರಸಾದ್ ಅಭಿಮಾನಿಗಳಿಂದ ನಗರದ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಪಕ್ಷಾತೀತವಾಗಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮಾಜಿ ಸಚಿವರಾದ ಬಿ.ಶ್ರೀರಾಮುಲು, ಪಿಜಿಆರ್ ಸಿಂಧ್ಯಾ, ಆರ್‌ಎಸ್‌ಎಸ್ ಪ್ರಮುಖ ಮಾ.ವೆಂಕಟರಾಮ್, ಪ್ರೊ.ಕಾಳೇಗೌಡ ನಾಗವಾರ ಹಾಗೂ ಭಾಗ್ಯಲಕ್ಷ್ಮಿ ಶ್ರೀನಿವಾಸ ಪ್ರಸಾದ್ ಭಾಗವಹಿಸಲಿದ್ದಾರೆ. 5 ದಶಕಗಳಿಗೂ ಹೆಚ್ಚು ಕಾಲ ಮೈಸೂರು ಚಾಮರಾಜನಗರ ಭಾಗದಲ್ಲಿ ಜನ ಸೇವೆ ಮೂಲಕ ಜನರ ಮನಸ್ಸಿನಲ್ಲಿ ಉಳಿದಿರುವ ಮಾಜಿ ಕೇಂದ್ರ ಸಚಿವರೂ ಆಗಿದ್ದ ವಿ.ಶ್ರೀನಿವಾಸ ಪ್ರಸಾದ್ ಹುಟ್ಟುಹಬ್ಬವನ್ನು ತಾಲೂಕಿನ ವಿವಿಧೆಡೆ ಆಚರಿಸಲು ಅಭಿಮಾನಿಗಳು ಮುಂದಾಗಿದ್ದು, ಹೆಡಿಯಾಲ ಸಮೀಪದ ಗಿರಿಜನ ಹಾಡಿಗಳಲ್ಲಿ ವಿವಿಧ ಸಾಮಾಜಿಕ ಸೇವಾ ಕಾರ್ಯ ಆಯೋಜಿಸಲಾಗಿದೆ. ಇನ್ನು ಪ್ರಸಾದ್ ಅವರ ಅಭಿಮಾನಿಗಳೇ ಸೇರಿ ರೂಪಿಸಿರುವ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಸಲುವಾಗಿ ವೈಯಕ್ತಿಕ ಭಿನ್ನಾಭಿಪ್ರಾಯ ಬದಿಗೊತ್ತಿ ಎಲ್ಲರೂ ಒಟ್ಟಾಗಿ ಭಾಗಿಯಾಗುವ ಮೂಲಕ ಸಮಾರಂಭದ ಯಶಸ್ವಿಗೆ ಸಹಕರಿಸುವಂತೆ ಮನವಿ ಮಾಡಿದರು.

ಸಭೆಯಲ್ಲಿ ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ಕೆಂಡಗಣ್ಣಪ್ಪ, ನಗರಾಧ್ಯಕ್ಷ ಸಿದ್ದರಾಜು, ನಗರಸಭೆ ಸದಸ್ಯರಾದ ಮಹದೇವ ಪ್ರಸಾದ್, ದೇವ, ತಾಪಂ ಮಾಜಿ ಸದಸ್ಯರಾದ ರಾಮು, ಶಿವಣ್ಣ, ಹುರ ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರು, ಬಿಜೆಪಿ ಮಾಜಿ ಅಧ್ಯಕ್ಷ ಮಹೇಶ್, ಮುಖಂಡರಾದ ಸೋಮಣ್ಣ, ಪರಶಿವಮೂರ್ತಿ, ಪುಟ್ಟಸ್ವಾಮಿ, ಮಹದೇವ್, ರಾಜು, ಮಹದೇವಸ್ವಾಮಿ, ಮಹೇಶ್ ಬಾಬು, ಅಬ್ದುಲ್ ರಜಾಕ್, ಪಿಎಲ್‌ಡಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಕೃಷ್ಣ, ದಸಂಸ ಮೈಸೂರು ಉಪವಿಭಾಗೀಯ ಸಂಚಾಲಕ ಮಂಜು, ಕೃಷ್ಣಮೂರ್ತಿ, ಮಹೇಶ್, ಶಿವರಾಜು, ಹೊಳೆಯಪ್ಪ ಮೊದಲಾದವರಿದ್ದರು.

ರಾಜಯ್ಯ ನಿಧನ



ಹುಣಸೂರು, ಜು.30- ರಾಜ್ಯ ಛಲವಾದಿ ಮಹಾಸಭಾ ತಾಲೂಕು ಅಧ್ಯಕ್ಷ ಹಾಗೂ ತರಿಕಲ್ ಗ್ರಾಮದ ನಿವಾಸಿ ರಾಜು ಅವರ ತಂದೆ ರಾಜಯ್ಯ(65) ಮಂಗಳವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ತಾಲೂಕಿನ ಹೊಸವಾರಂಚಿ ಗ್ರಾಮದ ಮೃತರ ತೋಟದಲ್ಲಿ ಬುಧವಾರ ನಡೆಯಿತು.

ಸಿದ್ದಮ್ಮ




ಹೆಚ್.ಡಿ.ಕೋಟೆ, ಜು.30- ತಾಲೂಕಿನ ತುಂಬಸೋಗೆ ಗ್ರಾಪಂ ಅಧ್ಯಕ್ಷೆ ಲಕ್ಷ್ಮಿ ಅವರ ತಾಯಿ ಬೊಪ್ಪನಹಳ್ಳಿ ಗ್ರಾಮದ ನಿವಾಸಿ ಸಿದ್ದಮ್ಮ (55) ಬುಧವಾರ ನಿಧನರಾದರು. ಮೃತರು ಪತಿ, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬೊಪ್ಪನಹಳ್ಳಿಯಲ್ಲಿ ನಡೆಯಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಸತತ ಸೋಲಿನ ಹತಾಶೆಯಿಂದ ರಾಹುಲ್ ಗಾಂಧಿ ಹೊಸ ನಾಟಕ!

ಚುನಾವಣಾ ಆಯೋಗದ ಮೇಲೆ ಆರೋಪ; ಪ್ರತಿಭಟನೆ ಅಯ್ಯೋ ಪಾಪ ಅನ್ಸುತ್ತೆ...

- ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕೆ
- ಅಕ್ರಮದ ಪುರಾವೆ ಇದ್ದರೆ ಸುಪ್ರೀಂಕೋರ್ಟ್‌ಗೆ ಕೊಡಲಿ

ಬೆಂಗಳೂರು, ಜು.30(ಕೆಎಂಶಿ)– ಕೇಂದ್ರದಲ್ಲಿ ಅಧಿಕಾರಕ್ಕೆ ಬರಲಾಗದೆ ಸತತ ಸೋಲಿನ ಹತಾಶೆಯಲ್ಲಿರುವ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಕರ್ನಾಟಕದಲ್ಲಿ ಚುನಾವಣಾ ಅಕ್ರಮದ ಹೊಸ ನಾಟಕ ಆಡುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ಟೀಕಿಸಿದ್ದಾರೆ.


ವಿಜಯೇಂದ್ರ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಹುಲ್ ಗಾಂಧಿ ಬೆಂಗಳೂರಿಗೆ ಬಂದು ಚುನಾವಣಾ ಅಕ್ರಮ ಆರೋಪ ಹೊರಿಸಿ ಪ್ರತಿಭಟನೆ, ಪಾದಯಾತ್ರೆ, ಧರಣಿ ನಡವಳಿಕೆ ಗಮನಿಸಿದರೆ ಅಯ್ಯೋ ಪಾಪ ಅನ್ನಿಸುತ್ತದೆ. ಒಮ್ಮೆ ಚುನಾವಣಾ ಆಯೋಗದ ಮೇಲೆ, ಮತ್ತೊಮ್ಮೆ ಸುಪ್ರೀಂಕೋರ್ಟ್ ಮೇಲೆ ಅನುಮಾನ ವ್ಯಕ್ತಪಡಿಸುತ್ತಾರೆ.

ರಾಹುಲ್ ಗಾಂಧಿ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಬಳಿ ಚುನಾವಣಾ ಅಕ್ರಮ ನಡೆದ ಪುರಾವೆ ಇದ್ದರೆ ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಲಿ, ಬರೀ ಆರೋಪದಿಂದ ಏನೂ ಸಾಧನೆ ಮಾಡಲಾಗದು. ಚುನಾವಣಾ ಆಯೋಗವನ್ನು ಬಿಜೆಪಿ ದುರ್ಬಳಕೆ ಮಾಡಿಕೊಂಡಿದ್ದರೆ ಕರ್ನಾಟಕದಲ್ಲಿ ನಾವು ವಿರೋಧಪಕ್ಷದ ಸ್ಥಾನದಲ್ಲಿ ಕೂರುತ್ತಿರಲಿಲ್ಲ, ಕಾಂಗ್ರೆಸ್ 66 ಸ್ಥಾನ ಪಡೆದರೆ, ಬಿಜೆಪಿ 136 ಸ್ಥಾನಗಳಲ್ಲಿ ಗೆದ್ದು ಅಧಿಕಾರದಲ್ಲಿ ಇರುತ್ತಿತ್ತು ಎಂದರು.

ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿದ್ದು ಹೇಗೆ, ಚುನಾವಣಾ ಅಕ್ರಮ ಆರೋಪ ಮೂರ್ಖತನದ ಪರಮಾವಧಿ, ಕಾಂಗ್ರೆಸ್ ಪಕ್ಷ ಮೂರ್ಖರ ಪಕ್ಷ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ 19 ಸ್ಥಾನ ಗೆದ್ದಿವೆ, ಅಕ್ರಮ ನಡೆದಿದ್ದರೆ ರಾಯಚೂರು, ದಾವಣಗೆರೆಯಲ್ಲಿ ಕಾಂಗ್ರೆಸ್ ಗೆಲುವು ಹೇಗೆ ಸಾಧ್ಯವಾಯಿತು. ಹುಚ್ಚಾಟ, ರಂಪಾಟದ ಮೂಲಕ ಸಂವಿಧಾನಿಕ ಸಂಸ್ಥೆ ಬಗ್ಗೆ ಅನುಮಾನ ವ್ಯಕ್ತಪಡಿಸುವುದು ಅಪಾಯಕಾರಿ ಬೆಳವಣಿಗೆ, ಅಕ್ಷಮ್ಯ ಅಪರಾಧ ಎಂದರು.

ರಾಹುಲ್ ಗಾಂಧಿ ಬೆಂಗಳೂರಿಗೆ ಬಂದು ಅದೇನು ಕಡಿದು ಕಟ್ಟೆ ಹಾಕುತ್ತಾರೆಂದು ನಾವೂ ನೋಡುತ್ತೇವೆ, ನಾವು ಕಾರ್ಯತಂತ್ರ ರೂಪಿಸುತ್ತೇವೆ.

ಮುಖ್ಯಮಂತ್ರಿ ಮನೆ ಮುಂದೆ ಪ್ರತಿಭಟನೆಗೆ ಮುಂದಾದರೆ ಪೊಲೀಸ್ ಕಮಿಷನರ್ ಹೈಕೋರ್ಟ್‌ನ ಆದೇಶ ತೋರಿಸುತ್ತಾರೆ. ಸಿದ್ದರಾಮಯ್ಯ ಎಲ್ಲಿಂದ ಬೇಕಾದರೂ ಪಾದಯಾತ್ರೆ ಮಾಡಬಹುದು, ರಾಹುಲ್ ಗಾಂಧಿ ಮೆರವಣಿಗೆ ಮಾಡಬಹುದು, ನಮಗೊಂದು ಕಾನೂನು, ಅವರಿಗೊಂದು ಕಾನೂನು ಇರಲು ಸಾಧ್ಯವಿಲ್ಲ. ಅವರಿಗೆ ಅವಕಾಶ ನೀಡಿದರೆ ನಾವೂ ಹೋರಾಟ ಮಾಡುತ್ತೇವೆ.

ರಾಹುಲ್ ಗಾಂಧಿ ಹತಾಶರಾಗಿದ್ದು, ಅವರಿಗೆ ದಿಕ್ಕು ತೋಚುತ್ತಿಲ್ಲ. ಒಂದೆಡೆ ನ್ಯಾಷನಲ್ ಹೆರಾಲ್ಡ್ ಕೇಸ್‌ನಲ್ಲಿ ಜಾಮೀನಿನ ಮೇಲೆ ಹೊರಗಿದ್ದಾರೆ. ದೇಶದ ಯಾವುದೇ ರಾಜ್ಯದಲ್ಲಿ ಅವರಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲ. ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇರುವುದರಿಂದ ಇಲ್ಲಿಗೆ ಬಂದು ಪುಂಗಿ ಊದುವ ಕೆಲಸ ಮಾಡುತ್ತಿದ್ದಾರೆ, ಬರಲಿ ಎಂದರು.

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ನಡುವೆ ಬಿಕ್ಕಟ್ಟು ಕಾಣುತ್ತಿದೆ. ಮೈಸೂರಿನಲ್ಲಿ ನಡೆದಿದ್ದು ಕಾಂಗ್ರೆಸ್ ಸಾಧನೆ ಅಲ್ಲ, ಸಿದ್ದರಾಮಯ್ಯ ಸಾಧನಾ ಸಮಾವೇಶ. ಇಲ್ಲಿ ಶಿವಕುಮಾರ್ ವೇದಿಕೆ ಬಿಟ್ಟು ನಡೆದು ಹೋದುದನ್ನು ನೋಡಿದ್ದೀರಿ, ರಾತ್ರೋರಾತ್ರಿ ದೆಹಲಿಗೂ ಹೋದರು. ಆಡಳಿತ ಪಕ್ಷದ ಶಾಸಕರ ಮಧ್ಯೆ ವ್ಯತ್ಯಾಸ ಕಾಣಿಸುತ್ತಿದೆ, ಮುಖ್ಯಮಂತ್ರಿಗಳ ಬಗ್ಗೆ ವಿಶ್ವಾಸ ಕಳೆದು ಹೋಗಿದೆ, ಸಿದ್ದರಾಮಯ್ಯ ವಿಚಲಿತರಾಗಿ ಮತ್ತೆ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ.

ಶಾಸಕರಿಗೆ ತಲಾ 50 ಕೋಟಿ ರೂ. ಅನುದಾನ ಬಿಡುಗಡೆ ಕುರಿತು ಸಿದ್ದರಾಮಯ್ಯ ಹೇಳಿಕೆ ನೀಡಿ ಒಂದು ವಾರ ಕಳೆಯುತ್ತಾ ಬಂದಿದೆ, ಆಡಳಿತ ಶಾಸಕರಿಗೆ ಇವತ್ತಿಗೂ ಅನುದಾನ ಬಿಡುಗಡೆ ಆಗಿಲ್ಲ. ವಿರೋಧ ಪಕ್ಷದ ಶಾಸಕರಿಗೆ ತಲಾ 25 ಕೋಟಿ ರೂ. ಎಂಬುದು ಊಹಾಪೋಹ, ಒಟ್ಟಾರೆ ಮುಂದಿನ ದೀಪಾವಳಿಗೆ ಕರ್ನಾಟಕದಲ್ಲಿ ಧಮಾಕಾ ಆಗುವುದು ಸತ್ಯ, ರಷ್ಯಾ–ಉಕ್ರೇನ್ ಯುದ್ಧ ನಿಲ್ಲಬಹುದು. ಆದರೆ, ಇಲ್ಲಂತೂ ಯುದ್ಧ ಪ್ರಾರಂಭ ಆಗಲಿದೆ ಎಂದರು.

ರೈತರ ಜಮೀನಿನಲ್ಲಿ ಕೃಷಿ ತರಬೇತಿಯೊಂದಿಗೆ ಕ್ಷೇತ್ರೋತ್ಸವ


ಹೆಚ್.ಡಿ.ಕೋಟೆ ತಾಲೂಕಿನ ಬಸವನಗಿರಿ ಹಾಗೂ ಸೊಳ್ಳೆಪುರ ಹಾಡಿಯ ರೈತರ ಜಮೀನಿನಲ್ಲಿ ಕ್ಷೇತ್ರೋತ್ಸವ ನಡೆಯಿತು.

ಮೈಸೂರು, ಜು.30(ಎಂಕೆ)– ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕಿನ ಬಸವನಗಿರಿ ಹಾಗೂ ಸೊಳ್ಳೆಪುರ ಹಾಡಿಯ 100 ಮಂದಿ ರೈತರ ಜಮೀನಿನಲ್ಲಿ ಬೆಂಗಳೂರು ಕೃಷಿ ವಿವಿ ಹಾಗೂ ಭಾರತೀಯ ಕೃಷಿ ಅನುಸಂಧಾನ ಪರಿಷತ್ ವತಿಯಿಂದ 5 ದಿನಗಳ ಕೃಷಿ ತರಬೇತಿಯೊಂದಿಗೆ ಕ್ಷೇತ್ರೋತ್ಸವ ನಡೆಸಲಾಯಿತು.

ಈ ವೇಳೆ ಹತ್ತಿ, ಮುಸುಕಿನ ಜೋಳ ಹಾಗೂ ಇನ್ನಿತರೆ ಬೆಳೆಗಳಿಗೆ ರಸಗೊಬ್ಬರ ಬಳಕೆ, ಕೀಟ ನಾಶಕಗಳ ಸಿಂಪಡಣೆ ಕುರಿತು ತಿಳಿಸಿಕೊಟ್ಟು, ವಿತರಣೆ ಮಾಡಲಾಯಿತು. 50 ಎಕರೆ ಪ್ರದೇಶದಲ್ಲಿ ಹತ್ತಿ, 75 ಎಕರೆ ಪ್ರದೇಶದಲ್ಲಿ ಮುಸುಕಿನ ಜೋಳ, 100 ಎಕರೆ ಪ್ರದೇಶದಲ್ಲಿ ಬೆಳೆದಿದ್ದ ವಿವಿಧ ತರಕಾರಿ ಬೆಳೆಗಳ ಸಂರಕ್ಷಣೆ ಕುರಿತು ಪ್ರತ್ಯಕ್ಷ ಪ್ರಾತ್ಯಕ್ಷಿಕೆ ಮೂಲಕ ತಿಳಿಸಿಕೊಡಲಾಯಿತು. ಅಲ್ಲದೆ ಕೃಷಿ ತಂತ್ರಜ್ಞಾನದ ಬಗ್ಗೆಯೂ ತಿಳಿ ಹೇಳಲಾಯಿತು. ಕ್ಷೇತ್ರೋತ್ಸವದಲ್ಲಿ ಬೆಂಗಳೂರಿನ ಯುಎಎಸ್‌ನ ಉಪಕುಲಪತಿ ಡಾ.ಎಸ್‌ವಿ.ಸುರೇಶ, ಕೃಷಿ ವಿವಿಯ ಪ್ರಾಧ್ಯಾಪಕರು, ಕೃಷಿ ತಂತ್ರಜ್ಞರು, ಅಧಿಕಾರಿಗಳು ಹಾಗೂ ರೈತರು ಭಾಗವಹಿಸಿದ್ದರು.

ಕನ್ನಡ ಕೈರಳಿ ಫೋರಂ ಸಂಸ್ಥೆ ಸ್ಥಾಪನೆ

ನಿವೇಶನವಿದ್ದು, ಮನೆ ಕಟ್ಟಲಾಗದವರಿಗೆ ನೆರವು

ಮೈಸೂರು, ಜು.30(ಜಿಎ)– ಮೈಸೂರಿನ ಋಣ ತೀರಿಸಲು ಮುಂದಾಗಿರುವ ಕೇರಳದ ನಾಗರಿಕರ ತಂಡವು ಕನ್ನಡ ಕೈರಳಿ ಫೋರಂ (ಕೆಕೆಎಫ್) ಸಂಸ್ಥೆ ಸ್ಥಾಪಿಸಿಕೊಂಡು ನಿವೇಶನ ಇದ್ದು, ಮನೆ ಇಲ್ಲದೆ ಇರುವ ಕಡು ಬಡವರಿಗೆ ಮನೆ ನಿರ್ಮಿಸಿಕೊಡಲು ನಿರ್ಧರಿಸಿದೆ ಎಂದು ಫೋರಂ ಅಧ್ಯಕ್ಷ ಡಾ.ಮನು ಬಿ.ಮೆನನ್ ತಿಳಿಸಿದರು.

ಕೇರಳದಿಂದ ಬಂದು ಮೈಸೂರಿನಲ್ಲಿ ಜೀವನ ರೂಪಿಸಿಕೊಂಡಿರುವ ನಾವು ಮೈಸೂರಿನ ಋಣ ತೀರಿಸುವ ದೃಷ್ಟಿಯಿಂದ ಈ ನಿರ್ಧಾರ ಕೈಕೊಳ್ಳಲಾಗಿದೆ. ಸಾಕಷ್ಟು ನಿವೇಶನವಿದ್ದು, ಮನೆ ಕಟ್ಟಿಕೊಳ್ಳಲಾಗದೆ ಗುಡಿಸಲುಗಳಲ್ಲಿ ವಾಸಿಸುತ್ತಿರುವ ಮೈಸೂರು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿನ ಬಡ ಕುಟುಂಬಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಈ ಯೋಜನೆ ರೂಪಿಸಲಾಗಿದೆ. ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಮನೆ ನಿರ್ಮಾಣಕ್ಕೆ ನಗರಪಾಲಿಕೆ ಅಥವಾ ಗ್ರಾಮ ಪಂಚಾಯಿತಿಗಳಲ್ಲಿ ಮನೆ ಮಾಡಿರುವ ಹಾಗೂ ಸ್ಥಳೀಯ ಜನಪ್ರತಿನಿಧಿಗಳ ಶಿಫಾರಸ್ಸು ಹೊಂದಿರುವ ಆರ್ಥಿಕ ದುರ್ಬಲ ಕುಟುಂಬಗಳಿಗೆ ಕೇರಳ ಇಟ್ಟಿಗೆಯಲ್ಲಿ ದುಂದು ವೆಚ್ಚವಿಲ್ಲದೆ ಸುಸಜ್ಜಿತ ಮನೆ ನಿರ್ಮಿಸಿಕೊಟ್ಟು ಗೌರವಯುತ ಜೀವನ ನಡೆಸಲು ನೆರವು ನೀಡಲಾಗುವುದು ಎಂದರು.

ಸೂರು ಇಲ್ಲದೆ ಇರುವ ವಸತಿ ರಹಿತ ಕುಟುಂಬಗಳು, ವಿಧವೆಯರು, ಬೇರೆಯವರ ಮೇಲೆ ಅವಲಂಬಿತರಾಗಿರುವ ಏಕ ತಾಯಂದಿರು, ಹಣಕಾಸು ಬೆಂಬಲ ಇಲ್ಲದೆ ಇರುವ ಹಿರಿಯ ನಾಗರಿಕರು, ಅಂಗವಿಕಲ ವ್ಯಕ್ತಿಗಳು, ತೀರಾ ಬಡವರಾದ ದಿನಗೂಲಿ ನೌಕರರು ಅಥವಾ ನಿರುದ್ಯೋಗಿ ವ್ಯಕ್ತಿಗಳು ಮಹದೇವಪುರ ಮುಖ್ಯ ರಸ್ತೆಯಲ್ಲಿರುವ ಕಾಳಿಸಿದ್ದನಹುಂಡಿಯ ಸರ್ಕಾರಿ ಶಾಲೆಯ ಬಳಿಯಿರುವ ಟ್ರಸ್ಟ್‌ಗೆ ಬಂದು ಅರ್ಜಿ ಸಲ್ಲಿಸ ಬಹುದು. ಆಸಕ್ತರು ಹೆಚ್ಚಿನ ವಿವರಗಳಿಗೆ ಮೊ.ಸಂ.9945502475, 9481087499, 8861499988 ಸಂಪರ್ಕಿಸಬಹುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಉಪಾಧ್ಯಕ್ಷ ಚಂದ್ರು ಸೇನನ್, ಉಪಾಧ್ಯಕ್ಷ ಆರ್.ಹರಿದಾಸ್, ಕಾರ್ಯದರ್ಶಿ ಪಿ.ವಿ.ಜಾರ್ಜ್, ಜಂಟಿ ಕಾರ್ಯದರ್ಶಿ ಷಿಜು ಕೃಷ್ಣನ್, ಖಜಾಂಚಿ ರಾಧಾ ಕೃಷ್ಣನ್ ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

Manufacturers WARDROBES
JKV LIFE FURNITURES • Steel Almirahs • School Furnitures
Fire Resistant & Borer Proof
Termite Proof
50 / 40% LESSER THAN WOOD
J. Vijaykumar
Cell : 93433 74669
Off : 93792 24669

ನಮ್ಮಲ್ಲಿ ಬಾದಾಮಿ, ಗೋಡಂಬಿ, ಪಿಸ್ತಾ, ಅಂಜೂರ, ಒಣದ್ರಾಕ್ಷಿ, ಖರ್ಜೂರ, ಮುಂತಾದ ಡ್ರೈಫ್ರೂಟ್ಸ್ ದೊರೆಯುತ್ತದೆ. (5 ಕಿ.ಮೀ ವರೆಗೂ ಉಚಿತ ಡೆಲಿವರಿ) ಸಂಪರ್ಕಿಸಿ: ರಾಜ್ ಗುರು ಡ್ರೈಫ್ರೂಟ್ಸ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
7022293342
9845460211

RERA APPROVED — RAI ESTATES — MUDA APPROVED
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

WANTED
1) ACCOUNTANT - MALE/ FEMALE (At least 2 years of Experience, in Tally and Basic Computer, Any Degree)
2) OFFICE ASSISTANT - MALE, PUC/Degree - Pass/Fail
63660 06603

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ITI ಗೆ ಪ್ರವೇಶಾವಕಾಶ
ITI (Fitter-NSQF) ವೃತ್ತಿಗೆ SSLC/PUC Pass Fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶ ವಿರುತ್ತದೆ. N.C.V.T ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ.
Also Admission for Nursery, LKG & UKG
BENAKA ITI College, Near Cauvery Circle, Dr. Rajkumar Road, Raghavendra Nagar, Mysore.
9342123467 / 9141756695

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

WANTED
1) Site Engineers (Civil B.E / Diploma) (working Locations: Chamarajanagara, Gundlpet, Somvarpete, Virajpete)
2. Driver (Working Location Mysore)
9916266181 / 9844648590
Email: caddforummys@gmail.com

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್
ಸಂಬಳ : 13,000/– ರಿಂದ 14,000/–
12 ಗಂಟೆಗಳು
ವಯಸ್ಸು : 25 ರಿಂದ 55ರವರೆಗೆ
ಸ್ಥಳ: ಕುವೆಂಪುನಗರ, ಗಣಂಗೂರು ಟೋಲ್ (ಶ್ರೀರಂಗಪಟ್ಟಣ ಹತ್ತಿರ)
ಸಂಪರ್ಕಿಸಿ
97415 13225

ಸುವರ್ಣ ಯಾತ್ರಾ
3 ದಿನಗಳ ಶಿರಡಿ ಪ್ರವಾಸ 15–8–25
3 ದಿನಗಳ ಪುರಿ ಪ್ರವಾಸ 15–8–25
4 ದಿನಗಳ ಕಾಶಿ ಪ್ರವಾಸ 29–8–25
7 ದಿನಗಳ ರಾಮೇಶ್ವರಂ ಮತ್ತು ನವಗ್ರಹ ಪ್ರವಾಸ 1–9–24
9 ದಿನಗಳ ಅಯೋಧ್ಯಾ, ನೇಪಾಳ ಪ್ರವಾಸ 11–9–25
13 ದಿನಗಳ ಚಾರ್ ಧಾಮ್ ಪ್ರವಾಸ 11–9–25
9019462508, 6360146483

GNANA BHARATHI HOUSING SOCIETY
MUDA PLOTS FOR SALE
Behind Mysore Airport
@3000/- per sq.ft.
Just 5 mins drive from J.P. Nagar Ring Road.
Mob: 9538459944

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್
ಸಂಬಳ: 13,000 – 26 ದಿನಗಳು (12 ಗಂಟೆಗಳು)
ವಯಸ್ಸು: 25 ರಿಂದ 55 ವರ್ಷಗಳವರೆಗೆ
ಸ್ಥಳ: ಜೆ.ಪಿ. ನಗರ
Mob: 7483638113

Mysuru Retina Care
STAFF REQUIRED
1) O.T. Technician
2) Optometrist
7338369364, 0821-2543244
#22A, Sri Guru Krupam, 1st Floor, New Kantharaj Urs Road, Niveditha Nagar, Mysore, above Sri Veg Hote.

HOUSE FOR RENT
60x40 ground floor, four bedrooms, 2 halls, 1 kitchen, 1 pooja, attach one room, 1 bathroom, general 1 toilet - #7, Vasu Layout, Ramakrishnanagar 'K' Block, Opposite to Natana, Mysore-22
9986263647, 9731791977

WANTED
1) Helpers ; 2) ITI Fitters, turners, mechatronics ; 3) Office assistant, Office Accountants (12th Commerce pass, B.Com) ; 4) ITI, Diploma Electrical (for machine maintenance) ; 5) Diploma Mechanical (AutoCAD, Solidwork)
Mob: 0821-2582668, 7204445679
Address: Mystech Machines, #Q113, 4th Cross, 8th Main, Hebbal Industrial Estate, Mysore-570 016
Email: mystechmachines@gmail.com

ಶಿಕ್ಷಕ / ಶಿಕ್ಷಕಿಯರು ಬೇಕಾಗಿದ್ದಾರೆ
Headmaster - 01
Hindi - 01
Mob: 8147472526

SITE FOR SALE
ಇಲವಾಲ ಸಮೀಪ ಬಿಳಿಕೆರೆಗೆ ಹೊಂದಿಕೊಂಡಂತೆ 30x40 ಅಳತೆಯ A ಖಾತಾ ನಿವೇಶನಗಳು ಮಾರಾಟಕ್ಕಿದೆ. ರಿಜಿಸ್ಟರ್ ಮಾಡಲು ಮತ್ತು ಮನೆ ಕಟ್ಟಲು ಸಿದ್ಧವಾಗಿದೆ. ಲೋನ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ
DSS 9945245946
9845114304

MUDA SITE FOR SALE
ಕಡಕೊಳ ಪಕ್ಕ, ತಾಂಡವಪುರದಿಂದ ಕೇವಲ ಒಂದು ಕಿ.ಮೀ.ನಲ್ಲಿ ಮನೆ ಕಟ್ಟಲು, ಯೋಗ್ಯವಾದ 30x40 Muda ನಿವೇಶನಗಳು ಮಾರಾಟಕ್ಕಿವೆ. Loan ಸೌಲಭ್ಯವಿದೆ.
DSS. 9845114304
9845114307

ಸೈಟುಗಳನ್ನು ಕೊಳ್ಳಲು / ಮಾರಲು
ಸೈಟು ಮಾರಾಟಕ್ಕಿದೆ:
30X40 S/F, D ಬ್ಲಾಕ್, ಬ್ರಾಹ್ಮಿನ್ಸ್ ಲೇಔಟ್
ಸಂಪರ್ಕಿಸಿ
95384 12881



SUNZONE SOLAR SYSTEM
VM Double Road, Kuvempunagar, Mysuru
9845175443

FOR SALE
1. 30x40 G+2 House @ Hebbal, Nr Sankranthi Circle
2. 30x40 MUDA Approved Sites attached to KHB Kenchalgud, HD Kote Road
3. 27x60 & 30x45 Commercial present Old House @ Jayanagar
4.30x40 Sites Near RT Nagar BSNL Layout @ Just 22 Lakhs
5. 20x30 Houses @ Srirampura Kuvempunagar, Aravind Nagar
PRAKRUTHI PROPERTIES
95386 90359, 90359 90359

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಮನೆ ಭೋಗ್ಯಕ್ಕೆ ಬೇಕಾಗಿದೆ
30X40 ಅಳತೆಯ ಮನೆ ಭೋಗ್ಯಕ್ಕೆ ಬೇಕಾಗಿದೆ. ಆಲನಹಳ್ಳಿ, ಸಿದ್ಧಾರ್ಥ ಲೇಔಟ್, ಸರ್ದಾರ್ ವಲ್ಲಭಾಯಿ ಪಟೇಲ್ ನಗರ, ದೇವೇಗೌಡ ಸರ್ಕಲ್ ಸುತ್ತಮುತ್ತ
97316 63856

ಬೇಕಾಗಿದ್ದಾರೆ
1. ಸೌತ್ ಇಂಡಿಯನ್ ಅಡುಗೆ ಭಟ್ಟರು – 1 ನಂ
2. ಅಡುಗೆ ಸಹಾಯಕರು – 3 ನಂ
3. ಕ್ಯಾಪ್ಟನ್ – 3 ನಂ
4. ತರಕಾರಿ ಕಟಿಂಗ್ ಮಾಸ್ಟರ್ – 2 ನಂ
5. ಸರ್ವೀಸ್ – 4 ನಂ 6. ಕ್ಲೀನಿಂಗ್ – 2 ನಂ
7. ಕ್ಯಾಷಿಯರ್ – 1 ನಂ 8. ಚೈನೀಸ್ ಕುಕ್ –1 ನಂ
ಸ್ಥಳ: ಮೈಸೂರು
78997 75996

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು ಬೇಕಾಗಿದ್ದಾರೆ.
ಸಂಬಳ – 15,000/–
99027 54149

ಚಾಮುಂಡೇಶ್ವರಿ ಮ್ಯಾರೇಜ್ ಬ್ಯೂರೋ
ಒಕ್ಕಲಿಗ, ಕುರುಬ, ಲಿಂಗಾಯಿತ, ವಿಶ್ವಕರ್ಮ, ನಾಯಕ, ಬ್ರಾಹ್ಮಣ, ದೇವಾಂಗ, ಈಡಿಗ SC, ST, M.Tech, MBA, BE, MCA, BCA, BBM, SSLC, PUC ಎಲ್ಲಾ ಜಾತಿಯ ಮೊದಲನೇ ಹಾಗೂ ಎರಡನೇ ಮರು ಮದುವೆಗೆ ವಧುಗಳು, ವರಗಳು ನೇರವಾಗಿ ಸಂಪರ್ಕಿಸಿ.
50 ವರ್ಷದ ವಿಧವೆಗೆ ವರಬೇಕು (55+60 ವರ್ಷ ಒಳಗೆ ಇರಬೇಕು) ವಿಚ್ಛೇದಿತರು, ವಿಧುರ/ವಿಧವೆಯರು ಸಂಪರ್ಕಿಸಿ
89512 41381

ಸೈಟು ಮಾರಾಟಕ್ಕಿದೆ
40X56 ಸೌತ್ ಫೇಸ್
160 ಅಡಿ ರಸ್ತೆ, ಕಮರ್ಷಿಯಲ್ ಬೋಗಾದಿ ಗದ್ದಿಗೆ ರಸ್ತೆ
ಸಂಪರ್ಕಿಸಿ :
99451 48025

ಸೈಟು ಮಾರಾಟಕ್ಕಿದೆ
30X50 DTCP, 11A ಖಾತೆ ರೇರಾ ಅಪ್ರೂಡ್ ಸೈಟು ಮಾರಾಟಕ್ಕಿದೆ. 25 ಲಕ್ಷಗಳು, ಶ್ರೀಧರ ಬಡಾವಣೆ (ಸೈಟು 80 ಅಡಿ ಬಸ್ ರಸ್ತೆಗೆ ಹತ್ತಿರದಲ್ಲಿದೆ) ತಲೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು
97421 98093

WANTED
Teachers to Teach Computers, Mathematics, Fluency in English must
9449407686 / 8904537162

SITE FOR SALE
30X40- East Face 40 Feet Road DattaGalli & 30×40 -3 BHK Duplex House East Face Srirampura 2nd stage
93416 24462

ಬೇಕಾಗಿದ್ದಾರೆ
ಮನೆಯಲ್ಲಿ ಅಡುಗೆ ಮಾಡಲು ಹೆಂಗಸರು
ಸಮಯ : ಬೆಳಿಗ್ಗೆ 7 ರಿಂದ 8 ರವರೆಗೆ
ಸಂಜೆ : 6 ರಿಂದ 7ರವರೆಗೆ
ಸಂಬಳ : 3,000/–
ವಿಳಾಸ : ಬೋಗಾದಿ
94483 36788

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು, ಯುವಕ/ಯುವತಿಯರು, ಮಹಿಳೆಯರು, ವಿಧವೆಯರು/ವಿಚ್ಛೇದಿತೆಯರು ಹೋಮ್ ನರ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. ನಮ್ಮಲ್ಲೇ ಕಡ್ಡಾಯವಾಗಿ ಉಳಿದು ಕೊಳ್ಳುವರಿಗೆ ಮಾತ್ರ ಅವಕಾಶ ಸಂಬಳ 18000 ರಿಂದ 22000ವರೆಗೆ ಉಚಿತ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
ಸಂಪರ್ಕಿಸಿ
95915 47239

ಮಹಿಳೆಯರ PG ರೂಂಗಳು ಕಾಲೇಜಿನ ವಿದ್ಯಾರ್ಥಿನಿಯರಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಬೆಳಗಿನ ತಿಂಡಿ, ಮಧ್ಯಾಹ್ನ ಹಾಗೂ ರಾತ್ರಿ ಊಟ. ಎಲ್ಲಾ ಸೌಲಭ್ಯಗಳು ಇರುವಂತಹ PG ರೂಂಗಳು ದೊರೆಯುತ್ತದೆ. ತಿಂಗಳಿಗೆ ರೂ.4,500/–
ಪಿ. ರಾಜಪ್ಪ ಕಾಂಪ್ಲೆಕ್ಸ್ ಜೆ.ಪಿ. ನಗರ ರೈಲ್ವೆ ಟ್ರ್ಯಾಕ್ ಹತ್ತಿರ, ಮೈಸೂರು
91416 14633
99454 19635

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

ಬೇಕಾಗಿದ್ದಾರೆ
ಸೆಕ್ಯೂರಿಟಿಗಾರ್ಡ್ – 10 ನಂ
ಸಂಬಳ – 15,000/–
ಸಿಟಿ, ಮೇಟಗಳ್ಳಿ, ಹೆಬ್ಬಾಳು, ವಿಜಯನಗರ ಸುತ್ತಮುತ್ತ
ಹೌಸ್‌ಕೀಪಿಂಗ್ – 05 ನಂ
ಸಂಪರ್ಕಿಸಿ (10AM to 6PM)
90367 45292
99007 49104

BEST INVESTMENT SITE FOR SALE
Semi Commercial 60X80 W/F, 200 Mtrs form Hunsur Road Highway, Suncity Homes Layout. Uptodate Documents.
90197 46369

ಪ್ರಮಾಣ ಪತ್ರ
ಹೇಮಾವತಿ ಹೆಚ್.ಎಂ ಬಿನ್ ಲೇಟ್ ಮಂಜುನಾಥ್, ಮೈಸೂರು ಜಿಲ್ಲೆ, ಹುಣಸೂರು ಟೌನ್, ಸ್ಟೋರ್ ಬೀದಿ, ನಂ. 271 ಇಲ್ಲಿ ವಾಸವಿದ್ದು ಆಧಾರ್ ಕಾರ್ಡ್ ಹಾಗೂ ಇತರೆ ದಾಖಲೆಗಳಲ್ಲಿ ನನ್ನ ಹೆಸರು ಹೇಮಾವತಿ ಹೆಚ್.ಎಂ. ಎಂದು ನಮೂದಾಗಿದೆ. ಆದರೆ ನನ್ನ ತಂದೆ ಲೇಟ್ ಮಂಜುನಾಥ್‌ರವರ ಎಲ್‌ಐಸಿ ಬಾಂಡ್ (725479915)ನಲ್ಲಿ ನಾಮಿನಿಯಾಗಿರುವ ನನ್ನ ಹೆಸರು ವರ್ಷ ಎಂದು ನಮೂದಾಗಿದೆ. ಆದ್ದರಿಂದ ಈ ಹೆಸರುಗಳು ನನ್ನ ಹೆಸರುಗಳೇ ಆಗಿದ್ದು, ಒಂದೇ ವ್ಯಕ್ತಿಯಾಗಿರುತ್ತೇನೆ ಎಂದು ನೋಟರಿ ಹೆಚ್. ದಿನೇಶ್‌ರವರ ಸಮ್ಮುಖದಲ್ಲಿ ಪ್ರಮಾಣೀಕರಿಸುತ್ತೇನೆ.
ಸಹಿ /– ಹೇಮಾವತಿ ಹೆಚ್. ಎಂ

Looking for Female Candidate for Accounts with 1-2 Years of Experience in Tally (Customer Follow-up) for ACP Sheets Company at Raghavendra Nagar, Mysore.
99001 68258

ಕಳೆದಿದೆ
ಉಷಾದೇವಿ ಜಿ.ಸಿ. ನಂ. 852, ರಾಜರಾಜೇಶ್ವರಿನಗರ, ಬಿಇಎಂಎಲ್ ಬಡಾವಣೆಯಲ್ಲಿ ವಾಸವಿದ್ದು, ನನಗೆ ಸೇರಿದ 1. ವಾಸದ ಮನೆ ನಂ. 852ರ ಕ್ರಯಪತ್ರ ಹಾಗೂ ಖಾತಾ ಪತ್ರ, 2. ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಗೆಜ್ಜಗಳ್ಳಿ ಗ್ರಾಮದ ಸರ್ವೇ ನಂ. 211ರ ನಿವೇಶನದ ಕ್ರಯಪತ್ರ, 3. ಬೆಂಗಳೂರು ದಕ್ಷಿಣ ತಾಲ್ಲೂಕು, ಚನ್ನಸಂದ್ರದಲ್ಲಿರುವ ನಂ. 173ರ ನಿವೇಶನದ ಕ್ರಯಪತ್ರ ಹಾಗೂ ಖಾತಾ ಪತ್ರ ಅಸಲು ಪತ್ರಗಳು ಕಳೆದು ಹೋಗಿದ್ದು ಸಿಕ್ಕವರು ಸಂಪರ್ಕಿಸಿ.
80881 89342

ಕಂಪ್ಯೂಟರ್ ತರಬೇತಿ ಪ್ರಾರಂಭ
Basic / Tally ಕಂಪ್ಯೂಟರ್ ತರಬೇತಿ ಪ್ರಾರಂಭ
ತರಬೇತಿ ಶುಲ್ಕ : 3999/–
ಅವಧಿ : 3 ತಿಂಗಳು & 6 ತಿಂಗಳು
ಹೆಚ್ಚಿನ ಮಾಹಿತಿಗಾಗಿ
6364116745
0821-3553964

ಬೇಕಾಗಿದ್ದಾರೆ
(ಕನ್ಸಲ್‌ಟೆನ್ಸಿ ಅಲ್ಲ) ಮೈಸೂರಿನಲ್ಲಿರುವ A.W.B.M ಕಂಪನಿಯೊಂದಕ್ಕೆ 219 ಅಭ್ಯರ್ಥಿಗಳು ಪರ್ಮನೆಂಟ್ ಹುದ್ದೆಗಳಿಗೆ ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC, PUC, ITI, Diploma, Any Degree, etc.,
ವಯೋಮಿತಿ: 18-34 Years
ತಿಂಗಳಿಗೆ : 20,500/– – 27,000/–
(ಉಚಿತ ಊಟ+ವಸತಿ+ Promotion)
7090212014 / 7349699460

CHANGE OF NAME
I Shanthi W/o Late Arokia Dass Residing at No. 3384, 3rd Cross Lourdh Nagar, Mysore -570001; I solemnly declare that I Changed Name from Arul Mari Alias Santhi to Shanthi in front of Notary L.N. Rajendran on 22-07-2025 and will be known Called and Identified on Shanthi
Sd/- Shanthi

ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ
SSLC / PUC / Pass or Fail ಯಾವುದೇ ವಿದ್ಯಾರ್ಹತೆ ಉಳ್ಳ English ಓದಲು ಬರೆಯಲು ಹುಡುಗರು ಸಗಟು ಔಷಧ ಮಳಿಗೆಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಅವಶ್ಯಕತೆ ಉಳ್ಳವರು ಸಂಪರ್ಕಿಸಿ
9902356334 / 9902356331
9845156619

ಬೇಕಾಗಿದ್ದಾರೆ
ಫ್ಯಾಕ್ಟರಿ Maintainance ಕೆಲಸಕ್ಕೆ ಬೇಕಾಗಿದ್ದಾರೆ, Welding ಬಗ್ಗೆ (ನಿರ್ವಹಣೆ / ದುರಸ್ತಿ) ಗೊತ್ತಿರಬೇಕು. ಆಕರ್ಷಕ ಸಂಬಳ ನೀಡಲಾಗುವುದು. ಸಂಪರ್ಕಿಸಿರಿ.
ಸಂಪರ್ಕಿಸಬೇಕಾದ ಸಮಯ : ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯ ತನಕ ದೂರವಾಣಿ ಸಂಖ್ಯೆ
79960 35215

CHANGE OF NAME
I Nikhil Kumar Purohit S/o Shanthilal Raj Purohit, Residing at No. 219, 9th Cross, Ganapathi Temple opp. Amruth Bekari, Gokulam Mysore - 570002. Karnataka Do hereby solemanly affirm & State on oath that, I have Changed my Name from "S NIKHIL KUMAR PUROHIT" to "Nikhil Kumar Purohit" on my own free will vide Affidavit Sworn in Before Notary "C. Mangala" on 30-07-2025
Sd/- Nikhil Kumar Purohit

GODOWN FOR RENT
Of 1200 Square Feet Opposite to APMC Attached to Ringroad, Mysore
98863 86698

ಹೊಸಮನೆ ಮಾರಾಟಕ್ಕಿದೆ
ಲಲಿತಾದ್ರಿನಗರ (ಬಾಲಜಿ ಲೇಔಟ್)ನಲ್ಲಿ 20x30 - E/F - 3 Floor, 3BHK 87 ಲಕ್ಷಕ್ಕೆ (Neg.) ಮಾರಾಟಕ್ಕಿದೆ. (Good House) (Good Location)
77600 65890
94802 22708

TELE CALLERS
ಟೆಲಿ ಕಾಲರ್ಸ್ ಹಾಗೂ Office ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. Any Degree Pass / Fail
9538881196 / 8123133773
ಸರಸ್ವತಿಪುರಂ

ಒಂದು ಲಕ್ಷ ಐವತ್ತು ಸಾವಿರದಲ್ಲಿ ಸರಳ ಮದುವೆ
- ಮಿನಿ ಫಂಕ್ಷನ್ ಹಾಲ್,
- ಮದುವೆಗೆ ತಿಂಡಿ 50 ಜನರಿಗೆ ಊಟ 200 ಜನರಿಗೆ
- ಫ್ಲವರ್ ಡೆಕೋರೇಷನ್,
- ಫೋಟೋ ಆಲ್ಬಮ್ ಮತ್ತು ವಿಡಿಯೋ,
- ವಾದ್ಯ ವೃಂದ ● ಪುರೋಹಿತರು

ಎಲ್ಲವೂ ಸೇರಿ ಕೇವಲ 1,50,000/–ದಲ್ಲಿ ಮದುವೆ
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ ಷರತ್ತು ಅನ್ವಯ
ಮೈಸೂರು ಮನೀಶ್
93421 83867

ಪ್ರಮಾಣ ಪತ್ರ
ಕಮಲ್‌ರಾಜ್ ಎಂ.ಎಲ್. S/o ಲೋಕೇಶ್ ಕೆ. ನಂ. 62, ಸಿದ್ದಲಿಂಗೇಶ್ವರ ನಗರ, ಬೋಗಾದಿ ಉತ್ತರ, ಬೋಗಾದಿ 2ನೇ ಹಂತ ಮೈಸೂರು ಸಿಟಿ ಇಲ್ಲಿ ವಾಸವಿದ್ದು, ನನ್ನ ಹೆಸರು ಆಧಾರ್ ಹಾಗೂ ಶಾಲಾ ದಾಖಲಾತಿಗಳಲ್ಲಿ ಕಮಲ್‌ರಾಜ್ ಎಂ.ಎಲ್ ಎಂದು ನಮೂದಾಗಿದೆ. ಆದರೆ, ಭಾರತೀಯ ಜೀವ ವಿಮಾ ನಿಗಮದಿಂದ ನನ್ನ ತಂದೆಯವರಾದ ಲೇಟ್ ಲೋಕೇಶ್ ಕೆ ರವರು ಖರೀದಿಸಿರುವ ಪಾಲಿಸಿ ನಂ. 722047362ರಲ್ಲಿ ನನ್ನನ್ನು ನಾಮಿನಿ ಮಾಡಿದ್ದು, ಅದರಲ್ಲಿ ನನ್ನ ಹೆಸರು ಎಂ.ಎಲ್. ಹೇಮಂತ್ ಎಂಬುದಾಗಿ ನೀಡಲಾಗಿದೆ. ಮೇಲ್ಕಂಡ ಎರಡೂ ಹೆಸರುಗಳು ನನಗೇ ಸೇರಿದ ಹೆಸರುಗಳಾಗಿದೆ ಎಂದು ನೋಟರಿ ಸಿ.ಆರ್. ಸೀತಾರಾಮ್ ಸಮ್ಮುಖದಲ್ಲಿ 31-05-2025ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಕಮಲ್‌ರಾಜ್ ಎಂ.ಎಲ್

1200 ಅಡಿ ಅಳತೆಯ OPEN SPACE ಲಭ್ಯವಿರುತ್ತದೆ. ನೆಲ ಮಹಡಿ ಮತ್ತು 1ನೇ ಮಹಡಿ (Both 1200 Sq.Ft.) ಸ್ಥಳ: ನಾರಾಯಣಶಾಸ್ತ್ರಿ ರಸ್ತೆ, ದೇವರಾಜ ಅರಸ್ ರಸ್ತೆ ಹಿಂಭಾಗ. ಆಸಕ್ತರು ಸಂಪರ್ಕಿಸಿ
9902356334
9902356331 / 9845156619

ಕಳೆದಿದೆ
ನರೇಂದ್ರ ಜೆ.ಬಿ. ನಂ. 23/2, ಸಿ–ಬ್ಲಾಕ್, ಆನಂದ್‌ನಗರ, ಮೈಸೂರು ಸಿಟಿ ಇಲ್ಲಿ ವಾಸವಿದ್ದು ಇವರಿಗೆ ಸೇರಿದ ಸ್ವತ್ತು, ಹಂಚ್ಯಾ ಗ್ರಾಮ, ಕಸಬಾ ಹೋಬಳಿ, ಮೈಸೂರು ತಾಲ್ಲೂಕು ಸರ್ವೆ ನಂ. 143/3ರ ವಿಸ್ತೀರ್ಣ 4 ಎಕರೆ 23 ಗುಂಟೆ ಜಾಗದಲ್ಲಿ ನಿರ್ಮಿಸಿರುವ ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ 37 ಮೂಲ ಕ್ರಮಪತ್ರ ಎಂವೈಎನ್–1– 09903 –2011–12 ಕಳೆದಿದ್ದು ಸಿಕ್ಕವರು ಸಂಪರ್ಕಿಸಿ.
99023 77557

SITE FOR SALE
30x40 (Opp. Park) Judicial Layout Near Christ Public School, Dattagalli
86609 51678

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಫುಟ್‌ಪಾತ್‌ನಿಂದ ರಸ್ತೆಗಿಳಿದ ವ್ಯಾಪಾರಿಗಳು!; ಸುರಕ್ಷಿತ-ಸುಗಮ ಸಂಚಾರಕ್ಕೆ ಸಂಚಕಾರ



ಮೈಸೂರಿನ ನಂಜುಮಳಿಗೆ ವೃತ್ತದ ಮಧ್ವಾಚಾರ್ ರಸ್ತೆಯಲ್ಲಿ ಫುಟ್‌ಪಾತ್‌ಗೆ ಸ್ಥಳಾವಕಾಶ ಇಲ್ಲದಂತೆ ವ್ಯಾಪಾರ ವಹಿವಾಟು ನಡೆಸುತ್ತಿರುವುದು.

ಮೈಸೂರು,ಜು.30(ಪಿಎಂ)- ಸುಗಮ ಸಂಚಾರಕ್ಕೆ ರಸ್ತೆಬದಿ ಹಾಗೂ ಫುಟ್‌ಪಾತ್ ವ್ಯಾಪಾರವು ಅಡಚಣೆ ಉಂಟು ಮಾಡುವ ಜೊತೆಗೆ ಜೀವಹಾನಿಗೂ ಕಾರಣವಾಗುತ್ತದೆ ಎಂಬುದಕ್ಕೆ ಇತ್ತೀಚೆಗೆ ನಗರದ ವಿವೇಕಾನಂದ ವೃತ್ತದಲ್ಲಿ ಬಸ್ ಹರಿದು ವೃದ್ಧರು ಮೃತಪಟ್ಟ ದುರ್ಘಟನೆಯೇ ತಾಜಾ ಉದಾಹರಣೆಯಾಗಿದೆ.

ನಗರದ ಹಲವು ಫುಟ್‌ಪಾತ್, ರಸ್ತೆಬದಿ, ವೃತ್ತಗಳಲ್ಲಿ ಅಪಾಯಕಾರಿ ರೀತಿಯಲ್ಲಿ ತಳ್ಳುಗಾಡಿಗಳಲ್ಲಿ ವ್ಯಾಪಾರ ವಹಿವಾಟು ನಡೆಯುತ್ತಿದ್ದು, ಇಂತಹ ಸ್ಥಳಗಳಲ್ಲೂ ಅಪಘಾತ ಉಂಟಾಗುವ ಸಾಧ್ಯತೆಯನ್ನು ತಳ್ಳಿಹಾಕಲಾಗದು. ಹಾಗಾಗಿ ಇಂತಹ ಸ್ಥಳಗಳಲ್ಲಿರುವ ಬೀದಿಬದಿ ವ್ಯಾಪಾರಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸುವುದು ಅತ್ಯಗತ್ಯವಾಗಿದೆ.

ಆ ಮೂಲಕ ಪಾದಚಾರಿಗಳು ಹಾಗೂ ವಾಹನ ಸವಾರರ ಸುರಕ್ಷಿತ ಸಂಚಾರಕ್ಕೆ ಆದ್ಯತೆ ನೀಡುವತ್ತ ಮೈಸೂರು ಮಹಾ ನಗರಪಾಲಿಕೆ ಹಾಗೂ ಪೊಲೀಸ್ ಇಲಾಖೆ ಗಂಭೀರ ಕ್ರಮ ಕೈಗೊಳ್ಳಬೇಕಿದೆ. ಜೊತೆಗೆ ಜನನಿಬಿಡ ವೃತ್ತ, ರಸ್ತೆಬದಿ ಯಲ್ಲಿ ತಳ್ಳುಗಾಡಿಗಳಲ್ಲಿ ವ್ಯಾಪಾರ ನಡೆಸುವವರ ಸುರಕ್ಷತೆ ದೃಷ್ಟಿಯಿಂದ ಈ ಕ್ರಮ ಅಗತ್ಯವೇ ಆಗಿದೆ.

ಅಪಘಾತದ ಹಿನ್ನೆಲೆ, ತಳ್ಳುಗಾಡಿಗಳ ತೆರವು: ಮೈಸೂರಿನ ವಿವೇಕಾನಂದ ನಗರದ ವಿವೇಕಾನಂದ ವೃತ್ತದ ಶ್ರೀರಾಂಪುರ ಮುಖ್ಯ ರಸ್ತೆಯಲ್ಲಿ ಕಳೆದ ಗುರುವಾರ ಸಾರಿಗೆ ಬಸ್ ಹರಿದು ಸ್ಕೂಟರ್ ಸವಾರ ಸ್ಥಳದಲ್ಲೇ ಮೃತಪಟ್ಟ ಘಟನೆ ನಡೆಯಿತು. ಘಟನೆಗೆ ಇಲ್ಲಿ ರಸ್ತೆಬದಿ ಹಾಗೂ ಫುಟ್‌ಪಾತ್ ಆಕ್ರಮಿಸಿ ತಳ್ಳುಗಾಡಿಗಳಲ್ಲಿ ಮಾಡುತ್ತಿರುವ ವ್ಯಾಪಾರವೇ ಕಾರಣವೆಂಬ ಆರೋಪ ಬಲವಾಗಿ ಕೇಳಿ ಬಂದಿತು. ಈ ಹಿನ್ನೆಲೆಯಲ್ಲಿ ತಳ್ಳುಗಾಡಿಗಳಲ್ಲಿ ಇಲ್ಲಿ ನಡೆಸುತ್ತಿದ್ದ ವ್ಯಾಪಾರ ವಹಿವಾಟನ್ನು ಪಾಲಿಕೆ ಹಾಗೂ ಪೊಲೀಸರಿಂದ ತೆರವುಗೊಳಿಸಲಾಗಿದೆ.

ಆದರೆ ಇಂತಹ ಸನ್ನಿವೇಶ ಕೇವಲ ಇಲ್ಲಿಗೆ ಮಾತ್ರ ಸೀಮಿತವಾಗಿಲ್ಲ. ಮೈಸೂರು ನಗರದ ಹಲವು ಪ್ರಮುಖ ವೃತ್ತ-ರಸ್ತೆಬದಿಗಳು ಫುಟ್‌ಪಾತ್ ವ್ಯಾಪಾರ ವಹಿವಾಟಿಗೆ ಬಳಕೆಯಾಗುವ ಮೂಲಕ ಅನಾಹುತಕ್ಕೆ ಎಡೆಮಾಡಿದಂತಾಗಿದೆ. ಮೈಸೂರಿನ ನಂಜುಮಳಿಗೆ ವೃತ್ತದ (ಕನಕ ವೃತ್ತ) ಮಧ್ವಾಚಾರ್ ರಸ್ತೆಯ ಕೆಲ ಭಾಗದಲ್ಲಿ ಫುಟ್‌ಪಾತ್‌ಗೂ ಸ್ಥಳಾವಕಾಶ ಇಲ್ಲದಂತೆ ಇದ್ದು, ಪೂಜಾ ಸಾಮಗ್ರಿ ಸೇರಿದಂತೆ ಇನ್ನಿತರ ಸಾಮಗ್ರಿಗಳನ್ನು ಫುಟ್‌ಪಾತ್ ಮೇಲೆ ಯೇ ಮಾರಾಟ ಮಾಡಲಾಗುತ್ತಿದೆ. ರಾಜ್ಯ ರಸ್ತೆ ಸಾರಿಗೆ ಬಸ್‌ಗಳು ಸಹ ಇಲ್ಲಿ ನಿತ್ಯ ಸಂಚರಿಸುತ್ತವೆ.

ಇಲ್ಲಿಗೆ ಸಮೀಪದ ಜೆಎಲ್‌ಬಿ ರಸ್ತೆ ಹಾಗೂ ಮಧ್ವಾಚಾರ್ ರಸ್ತೆ ಸಂಧಿಸುವ ಎಂ.ಎ.ಶ್ರೀನಿವಾಸನ್ ವೃತ್ತದಲ್ಲೂ ಬಹುತೇಕ ಇದೇ ಪರಿಸ್ಥಿತಿ ಇದೆ. ನಗರದ ಇಂತಹ ಸ್ಥಳಗಳಲ್ಲಿ ಪರಿಶೀಲನೆ ನಡೆಸಿ, ಬೀದಿ ಬದಿ ವ್ಯಾಪಾರಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸಿಕೊಡುವ ಮೂಲಕ ನಗರದಲ್ಲಿ ಸುರಕ್ಷಿತ ಹಾಗೂ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂಬುದು ನಾಗರಿಕರ ಆಗ್ರಹವಾಗಿದೆ.



ಇತ್ತೀಚೆಗೆ ಅಪಘಾತ ನಡೆದ ವಿವೇಕಾನಂದ ವೃತ್ತದ ಶ್ರೀರಾಂಪುರ ಮುಖ್ಯ ರಸ್ತೆಯ ಸಮೀಪದಲ್ಲಿ ತಳ್ಳುಗಾಡಿಗಳಲ್ಲಿ ನಡೆಸುತ್ತಿದ್ದ ವ್ಯಾಪಾರಸ್ಥರನ್ನು ತೆರವುಗೊಳಿಸಿರುವುದನ್ನು ಕಾಣಬಹುದು.



ಮೈಸೂರಿನ ಶ್ರೀನಿವಾಸನ್ ವೃತ್ತದ ಸಮೀಪದಲ್ಲಿ ತಳ್ಳುಗಾಡಿಗಳಲ್ಲಿ ವ್ಯಾಪಾರ ನಡೆಸುತ್ತಿರುವುದನ್ನು ಕಾಣಬಹುದು.

ಚಾಟ್ಸ್ ತಿನ್ನಲು ಎಲ್ಲೆಂದರಲ್ಲಿ ವಾಹನ ನಿಲುಗಡೆ

ಮೈಸೂರು, ಜು.30(ವಿವಿಹೆಚ್)- ಟಿ.ಕೆ.ಲೇಔಟ್ ಸರ್ಕಲ್ ಸೇರಿದಂತೆ ಹಲವು ಕಡೆಗಳಲ್ಲಿ ರಸ್ತೆಬದಿ, ವೃತ್ತಗಳಲ್ಲಿ ಆಟೋ ಸೇರಿದಂತೆ ಚಿಕ್ಕ ಪುಟ್ಟ ವಾಹನಗಳು, ತಳ್ಳುಗಾಡಿಗಳಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯಾಗುವಂತೆ ತರಕಾರಿ, ಚಾಟ್ಸ್ ವ್ಯಾಪಾರ ನಡೆಯುತ್ತಿದ್ದು, ಸುಗಮ ಸಂಚಾರದ ದೃಷ್ಟಿಯಿಂದ ಈ ವ್ಯಾಪಾರಸ್ಥರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವುದು ಅಗತ್ಯವಾಗಿದೆ.

ನಗರದ ಪ್ರಮುಖ ರಸ್ತೆಗಳಾದ ಸಯ್ಯಾಜಿರಾವ್ ರಸ್ತೆ, ಚಾಮರಾಜ ಜೋಡಿ ರಸ್ತೆ ಮುಂತಾದೆಡೆಯೂ ಈ ಸನ್ನಿವೇಶ ಕಾಣಬಹುದು. ಫಾಸ್ಟ್‌ಫುಡ್, ಚಾಟ್ಸ್ ತಿನ್ನಲು ಬರುವವರು ರಸ್ತೆಯಲ್ಲೇ ಎಲ್ಲೆಂದರಲ್ಲಿ ವಾಹನಗಳನ್ನು ನಿಲ್ಲಿಸಿರುತ್ತಾರೆ. ಪ್ರಮುಖವಾಗಿ ತಿರುವುಗಳಲ್ಲಿಯೂ ಬೈಕ್‌ಗಳನ್ನು ಸಾಲುಗಟ್ಟಿ ನಿಲ್ಲಿಸುತ್ತಾರೆ. ಟಿ.ಕೆ.ಲೇಔಟ್‌ನ ಬಿಸಿಲುಮಾರಮ್ಮ ವೃತ್ತದಲ್ಲಿ ಚದುರಂಗ ರಸ್ತೆ ಹಾಗೂ ಸಾಹುಕಾರ್ ಚನ್ನಯ್ಯ ರಸ್ತೆಯ ಕೆಲಭಾಗದ ಫುಟ್‌ಪಾತ್‌ನಲ್ಲಿ ತಳ್ಳುಗಾಡಿಗಳಲ್ಲಿ ತರಿಕಾರಿ ವ್ಯಾಪಾರ ನಡೆಯುತ್ತಿದ್ದು, ಸುಗಮ ಸಂಚಾರಕ್ಕೆ ಅಡಚಣೆ ಉಂಟಾಗಿದೆ.

ಜನರು ಸದಾ ಕಿಕ್ಕಿರಿದು ತುಂಬಿರುವ ಈ ಸರ್ಕಲ್‌ನಲ್ಲಿ ನಾನಾ ಪದಾರ್ಥಗಳ ಮಾರಾಟದಿಂದಾಗಿ ಟ್ರಾಫಿಕ್ ಜಾಮ್ ಆಗುವುದು ಉಂಟು. ಒಂದು ಕಡೆ ತರಕಾರಿ, ಮತ್ತೊಂದು ಬದಿಯಲ್ಲಿ ಹಣ್ಣುಗಳನ್ನು ಮಾರಾಟ ಮಾಡುತ್ತಿರುತ್ತಾರೆ. ಇನ್ನೊಂದೆಡೆ ಚಾಟ್ಸ್, ಫಾಸ್ಟ್‌ಫುಡ್ ಮಾರಾಟ ಮಾಡಿದರೆ, ಮಗದೊಂದೆಡೆ ರಸ್ತೆಗೆ ಹೊಂದಿಕೊಂಡಂತೆ ಆಟೋ ನಿಲ್ದಾಣವಿದ್ದು, ಪ್ರಯಾಣಿಕರಿಗೆ ಕಿರಿಕಿರಿ ಜೊತೆಗೆ ಅಪಘಾತಕ್ಕೆ ಆಹ್ವಾನ ನೀಡುವ ಸ್ಥಿತಿ ನಿರ್ಮಾಣವಾಗಿದೆ.

ಮಹಾನಗರ ಪಾಲಿಕೆ ಈ ಬಗ್ಗೆ ತ್ವರಿತ ಕ್ರಮ ಕೈಗೊಂಡು ವ್ಯಾಪಾರಿಗಳಿಗೆ ಪರ್ಯಾಯ ವ್ಯವಸ್ಥೆ ಮಾಡಿಕೊಡಬೇಕು. ಆ ಮೂಲಕ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.



ಮೈಸೂರಿನ ಬಿಸಿಲು ಮಾರಮ್ಮ ವೃತ್ತದಲ್ಲಿ ಸಾಹುಕಾರ್ ಚನ್ನಯ್ಯ ರಸ್ತೆಯ ಬದಿಯಲ್ಲಿ ಆಟೋದಲ್ಲಿ ತರಕಾರಿ ಮಾರಾಟ ಮಾಡುತ್ತಿರುವುದು.

ನಾಸಾ-ಇಸ್ರೋ ನಿಸಾರ್ ಉಪಗ್ರಹ ಉಡಾವಣೆ ಯಶಸ್ವಿ



ಶ್ರೀಹರಿಕೋಟಾ, ಜು.30- ಇಸ್ರೋ ಮತ್ತು ನಾಸಾ ಜಂಟಿಯಾಗಿ ಅಭಿವೃದ್ಧಿಪಡಿಸಿರುವ ಭೂಮಿ ಸಮೀಕ್ಷೆಯ ಸಿಂಥೆಟಿಕ್ ಅಪರ್ಚರ್ ರೇಡಾರ್ (ನಿಸಾರ್) ಉಪಗ್ರಹವನ್ನು ಇಂದು ಯಶಸ್ವಿಯಾಗಿ ಉಡ್ಡಯನ ಮಾಡಲಾಗಿದೆ. ಆ ಮೂಲಕ ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ಮಗದೊಂದು ಮೈಲಿಗಲ್ಲು ಸಾಧಿಸಿದೆ.

ನಾಸಾ-ಇಸ್ರೋ ಸಹಯೋಗದಲ್ಲಿ ಸಿಂಥೆಟಿಕ್ ಅಪರ್ಚರ್ ರೇಡಾರ್ ಎಂಬ ವಿಶಿಷ್ಟ ಭೂ ವೀಕ್ಷಣಾ ಉಪಗ್ರಹ ಶ್ರೀಹರಿಕೋಟದ ಬಾಹ್ಯಾಕಾಶ ಕೇಂದ್ರದಿಂದ ಇಂದು ಸಂಜೆ 5.40ಕ್ಕೆ ನಭಕ್ಕೆ ಚಿಮ್ಮಿತು.

ಈ ಉಪಗ್ರಹ ಉಡ್ಡಯನದಿಂದ ಭಾರತ, ಅಮೆರಿಕ ಸೇರಿದಂತೆ ಇಡೀ ಜಗತ್ತಿಗೆ ನೆರವಾಗಲಿದೆ. ಬಾಹ್ಯಾಕಾಶ ಎಂಜಿನಿಯರಿಂಗ್ ಕ್ಷೇತ್ರದಲ್ಲಿನ ಭಾರತದ ಸಾಮರ್ಥ್ಯಗಳನ್ನು ಜಾಗತಿಕ ಮಟ್ಟದಲ್ಲಿ ಪ್ರದರ್ಶಿಸುವುದಕ್ಕೆ ವೇದಿಕೆಯಾಗಲಿದೆ.

ನೈಸರ್ಗಿಕ ಸಂಪನ್ಮೂಲಗಳ ನಿಗಾ ವಹಿಸಲು ಅತ್ಯಂತ ನಿರ್ಣಾಯಕವಾಗಿದೆ. ದಿನದ 24 ತಾಸು ಭೂಮಿಯ ಚಿತ್ರವನ್ನು ತೆಗೆಯಲು, ಭೂಕುಸಿತ ಪತ್ತೆ ಹವಾಮಾನ ಬದಲಾವಣೆ, ವಿಪತ್ತು ನಿರ್ವಹಣೆಗೆ ಸಹಾಯ ಮಾಡಲು ನೆರವಾಗಲಿದೆ.

ಈ ಉಪಗ್ರಹದಲ್ಲಿ ಅಳವಡಿಸಲಾಗಿರುವ ಎಲ್-ಬ್ಯಾಂಡ್ ಅನ್ನು ನಾಸಾ ಒದಗಿಸಿದ್ದರೆ, ಎಸ್-ಬ್ಯಾಂಡ್ ಅನ್ನು ಇಸ್ರೋ ಒದಗಿಸಿದೆ. ಎಸ್-ಬ್ಯಾಂಡ್ ಅನ್ನು ಸಿಂಥೆಟಿಕ್ ಅಪರ್ಚರ್ ರೇಡಾರ್‌ನಲ್ಲಿ ಅಳವಡಿಸಲಾಗುತ್ತದೆ. ಇದರಿಂದ ಭೂಮಿಗೆ ಸಂಬಂಧಿಸಿದಂತೆ ವ್ಯಾಪಕ ದತ್ತಾಂಶ ಸಂಗ್ರಹ ಸಾಧ್ಯವಾಗಲಿದೆ.

'ನಿಸಾರ್' ಉಪಗ್ರಹದ ತೂಕ 2392 ಕೆ.ಜಿ ಆಗಿದೆ. ಅವಳಿ ತರಂಗಾಂತರಗಳನ್ನು (ಫ್ರಿಕ್ವೆನ್ಸಿ) ಒಳಗೊಂಡ ಮೊದಲ ಸಿಂಥೆಟಿಕ್ ಅಪರ್ಚರ್ ರೇಡಾರ್ ಇದಾಗಿದೆ. ಈ ಉಪಗ್ರಹವು ಇಡೀ ಭೂಮಿಯನ್ನು ಎಲ್ಲ ಋತುಮಾನಗಳು, ಹಗಲು-ರಾತ್ರಿ ವೀಕ್ಷಣೆ ನಡೆಸುತ್ತದೆ. ಭೂಮಿಯ ಮೇಲೆ ಆಗುವ ಸಣ್ಣಪುಟ್ಟ ಬದಲಾವಣೆಗಳ ಮಾಹಿತಿ ನೀಡುವ, ನೆಲದ ವಿರೂಪ, ಮಂಜುಗಡ್ಡೆಯ ಪದರದ ಚಲನೆ, ಹಡಗುಗಳ ಪತ್ತೆ, ಮಣ್ಣಿನ ತೇವಾಂಶದಲ್ಲಿನ ಬದಲಾವಣೆ, ಕಡಲಿನ ಮೇಲೆ ಕಣ್ಗಾವಲು, ಮೇಲ್ಮೈ ನೀರಿನ ಸಂಗ್ರಹದ ಮೇಲೆ ನಿಗಾ, ನೈಸರ್ಗಿಕ ವಿಕೋಪ ಸೇರಿದಂತೆ ಹಲವು ಮಾಹಿತಿಗಳನ್ನು ಸಂಗ್ರಹಿಸಲಿದೆ ಎಂದು ಇಸ್ರೋ ತಿಳಿಸಿದೆ.

ಸತ್ತ ವ್ಯಕ್ತಿಯ ಹೆಸರಲ್ಲಿ ಜಿಪಿಎ ಮಾಡಿಸಿ ಮೈಸೂರು ಹೊರವಲಯದ ಮಂಡಕಳ್ಳಿ ಬಳಿ ಕೋಟ್ಯಾಂತರ ರೂ. ಬೆಲೆ ಬಾಳುವ ಆಸ್ತಿ ಕಬಳಿಸಿ ಮಾರಾಟ!

ಮೈಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಈ ಆಸ್ತಿ ಖರೀದಿಸಿದ ಎಂಎಲ್ಸಿ ಮಂಜೇಗೌಡ ಇತರರು ಕಂಗಾಲು

ಮೈಸೂರು, ಜು.30-ಸತ್ತ ವ್ಯಕ್ತಿಯ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಕೋಟ್ಯಾಂತರ ರೂ. ಮೌಲ್ಯದ ಜಮೀನನ್ನು ಮಾರಾಟ ಮಾಡಿರುವ ಬಗ್ಗೆ ಮೈಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ನೀಲಕಂಠ ನರಸಿಂಹ ಶರ್ಮ ಎಂಬುವರು 2018ರ ಸೆ.23ರಂದು ಸಾವನ್ನಪ್ಪಿದ್ದಾರೆ. ಆದರೆ ಅವರು 2024ರ ಡಿ.20ರಂದು ಸದರಿ ಭೂಮಿಗೆ ಮಹಿಳೆಯೊಬ್ಬರ ಹೆಸರಿನಲ್ಲಿ ಜಿಪಿಎ ಮಾಡಿ, ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಣಿ ಮಾಡಿರುವುದಾಗಿ ದಾಖಲೆ ಸೃಷ್ಟಿಸಲಾಗಿದೆ. ನಂತರ ಈ ಭೂಮಿಯನ್ನು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸೇರಿದಂತೆ ಮೂವರಿಗೆ ಮಾರಾಟ ಮಾಡಲಾಗಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತ ನೀಲಕಂಠ ನರಸಿಂಹ ಶರ್ಮ ಅವರ ಪುತ್ರ (ಇವರು ಅಮೇರಿಕಾದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ) ವಿವೇಕ್ ಹಟ್ಟಿ, ಸುಮಾ, ಅನಿತಾ, ಪುಷ್ಪಾ ಮತ್ತು ಮೃತ ನೀಲಕಂಠ ನರಸಿಂಹ ಶರ್ಮ ಹೆಸರಿನಲ್ಲಿ ಉಪ ನೋಂದಣಾಧಿಕಾರಿಗಳ ಕಚೇರಿಗೆ ತೆರಳಿ ಜಿಪಿಎ ನೋಂದಾಯಿಸಿಕೊಟ್ಟ ವ್ಯಕ್ತಿ ಸೇರಿದಂತೆ ಐವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ವಿವರ: 1981ರ ಅಕ್ಟೋಬರ್ 6ರಂದು ಪಿ.ಪತ್ರಪ್ಪ ಎಂಬುವರಿಗೆ ಮಂಡಕಳ್ಳಿ ಸರ್ವೆ ನಂ.89ರಲ್ಲಿ 4 ಎಕರೆ 19 ಗುಂಟೆ ಭೂಮಿಯು ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿತ್ತು. ಅವರಿಗೆ ಪಿ.ಪ್ರಭುದೇವ್ ಮತ್ತು ಪಿ.ವಿಶ್ವನಾಥ್ ಎಂಬ ಇಬ್ಬರು ಮಕ್ಕಳಿದ್ದರು. ಅವರಲ್ಲಿ ಪಿ.ವಿಶ್ವನಾಥ್ ಹುಟ್ಟಿನಿಂದಲೇ ಅಂಧರಾಗಿದ್ದಾರೆ.

1990ರ ಸೆಪ್ಟೆಂಬರ್ 7ರಂದು ಪತ್ರಪ್ಪ ಅವರು ನಿಧನರಾದ ನಂತರ ವಿಶ್ವನಾಥ್ ಅವರ ಅಂಧತ್ವವನ್ನು ದುರುಪಯೋಗಪಡಿಸಿಕೊಂಡ ಸಹೋದರ ಪ್ರಭುದೇವ್ ಈ ಆಸ್ತಿಯನ್ನು ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡು ಅದನ್ನು ನೀಲಕಂಠ ನರಸಿಂಹ ಶರ್ಮ ಎಂಬುವರಿಗೆ 2006ರ ಆಗಸ್ಟ್ 10ರಂದು ಮಾರಾಟ ಮಾಡಿದ್ದರು.

ಈ ಸಂಬಂಧ ವಿಶ್ವನಾಥ್ ಪುತ್ರ ಎಂ.ವಿ.ಕಿಶೋರ್ ಅವರು ಮೈಸೂರಿನ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, 2013ರ ಜ.10ರಂದು ಅವರ ಪರವಾಗಿಯೇ ತೀರ್ಪು ಬಂದಿದೆ. ಆದರೆ ಈ ತೀರ್ಪನ್ನು ಪ್ರಶ್ನಿಸಿ ನೀಲಕಂಠ ನರಸಿಂಹ ಶರ್ಮ ಮತ್ತು ಪ್ರಭುದೇವ್ ಅವರು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. 2018ರ ಸೆ.23ರಂದು ನೀಲಕಂಠ ನರಸಿಂಹ ಶರ್ಮ ಅವರು ಹಾಗೂ 2020ರ ಆಗಸ್ಟ್ 4ರಂದು ಪ್ರಭುದೇವ್ ನಿಧನರಾಗಿದ್ದಾರೆ. ಈ ಮಧ್ಯೆ ನೀಲಕಂಠ ನರಸಿಂಹ ಶರ್ಮ ಪುತ್ರ ವಿವೇಕ್ ಹಟ್ಟಿ ಅವರು ಹೈಕೋರ್ಟ್‌ನಲ್ಲಿ ತಮ್ಮ ತಂದೆ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ಹಿಂಪಡೆದಿದ್ದರು. ಒಟ್ಟಾರೆ ಈ ಆಸ್ತಿಯು ಮೈಸೂರು ನ್ಯಾಯಾಲಯದ ತೀರ್ಪಿನಂತೆ ಕಿಶೋರ್ ಅವರಿಗೆ ಸೇರಿದ್ದಾಗಿದೆ.

ಇದಾದ ನಂತರ ವಿವೇಕ್ ಹಟ್ಟಿ ಅವರು 2024ರ ಆಗಸ್ಟ್ 26ರಂದು ಅದಾಗಲೇ ಮೃತಪಟ್ಟಿದ್ದ ನೀಲಕಂಠ ಶರ್ಮ ಅವರ ಹೆಸರಿನಲ್ಲಿ ಆನ್‌ಲೈನ್ ಮೂಲಕ ನಾಡಕಚೇರಿಗೆ ಅರ್ಜಿ ಸಲ್ಲಿಸಿ ಮಂಡಕಳ್ಳಿ ಸರ್ವೆ ನಂ.89/2ಕ್ಕೆ ಪೋಡಿ ಮಾಡಿಕೊಡುವಂತೆ ಕೋರಿದ್ದು, ಅಧಿಕಾರಿಗಳು ಈ ಭೂಮಿಗೆ 89/3 ಸಂಖ್ಯೆ ನೀಡಿ ಪೋಡು ಮಾಡಿಕೊಟ್ಟಿದ್ದಾರೆ. ಒಟ್ಟು 4 ಎಕರೆ 19 ಗುಂಟೆ ಇದ್ದ ಜಮೀನಿನ ಪೈಕಿ 18 ಗುಂಟೆ ಜಮೀನನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸ್ವಾಧೀನಪಡಿಸಿಕೊಂಡಿದ್ದು, ಉಳಿದ 4 ಎಕರೆ 1 ಗುಂಟೆ ಭೂಮಿಯನ್ನು ಮೃತ ನೀಲಕಂಠ ನರಸಿಂಹ ಶರ್ಮ ಹೆಸರಿನಲ್ಲಿಯೇ ಮೈಸೂರಿನ ಪೂರ್ವ ಉಪ ನೋಂದಣಾಧಿಕಾರಿಗಳ ಕಚೇರಿಗೆ ಹಾಜರಾದ ವ್ಯಕ್ತಿ ಪುಷ್ಪಾ ಎಂಬಾಕೆಯನ್ನು ತನ್ನ ಮಗಳೆಂದು ನಮೂದಿಸಿ, ಆಕೆಯ ಹೆಸರಿಗೆ ಜಿಪಿಎ ಮಾಡಿಕೊಟ್ಟಿದ್ದಾನೆ.

ಇದಾದ ಬಳಿಕ ವಿವೇಕ್ ಹಟ್ಟಿ, ಸುಮಾ, ಅನಿತಾ ಮತ್ತು ಪುಷ್ಪಾ ಎಂಬುವರು ಸೇರಿ 2024ರ ಡಿಸೆಂಬರ್ 23ರಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಎಸ್.ಶಂಕರ್ ರಾವ್ ಮತ್ತು ಸತೀಶ್ ಅಂಚೆಕ್ಕರ್ ಅವರಿಗೆ ಮಾರಾಟ ಮಾಡಿದ್ದಾರೆ. ಖರೀದಿದಾರರು ಸದರಿ ಭೂಮಿಗೆ ಖಾತೆ ಬದಲಾವಣೆಗಾಗಿ ತಹಸೀಲ್ದಾರರಿಗೆ ಅರ್ಜಿ ಸಲ್ಲಿಸಿದ್ದು, ಸದರಿ ದಾಖಲೆಗಳನ್ನು ಪರಿಶೀಲಿಸಿದ್ದ ತಹಸೀಲ್ದಾರರು, ಜಿಪಿಎ ಮಾಡಿಕೊಟ್ಟಿದ್ದ ನೀಲಕಂಠ ನರಸಿಂಹ ಶರ್ಮ 2018ರಲ್ಲೇ ಮರಣ ಹೊಂದಿದ ಬಗ್ಗೆ ಉಲ್ಲೇಖಿಸಿ, ಶರ್ಮ ಅವರು ಮರಣ ಹೊಂದಿದ ನಂತರ ಜಿಪಿಎ ನೋಂದಣಿ ಆಗಿದ್ದ ಕಾರಣ ಭೂಮಿ ಖರೀದಿದಾರರಿಗೆ ಖಾತೆ ಮಾಡಿಕೊಡದೆ ಅವರ ಅರ್ಜಿಯನ್ನು ವಜಾ ಮಾಡಿದ್ದಾರೆ.

ಈ ವಿಷಯ ತಿಳಿದ ಕಿಶೋರ್ ಅವರು, ವಿವೇಕ್ ಹಟ್ಟಿ, ಸುಮಾ, ಅನಿತಾ, ಪುಷ್ಪಾ ಮತ್ತು ಮೃತ ನೀಲಕಂಠ ನರಸಿಂಹ ಶರ್ಮ ಹೆಸರಲ್ಲಿ ಜಿಪಿಎ ಮಾಡಿಕೊಟ್ಟ ವ್ಯಕ್ತಿ ವಿರುದ್ಧ ಜುಲೈ 16ರಂದು ಮೈಸೂರು ಗ್ರಾಮಾಂತರ ಠಾಣೆಗೆ ಸಲ್ಲಿಸಿದ ದೂರನ್ನು ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಕಥೆ ಕೇಳೋಣ ಬನ್ನಿ ಕಾರ್ಯಕ್ರಮ

ಮೈಸೂರು, ಜು. 30- ಮೈಸೂರಿನ ಕುವೆಂಪು ನಗರದ ಚಿತ್ರಭಾನು ರಸ್ತೆಯಲ್ಲಿರುವ ಸುರುಚಿ ರಂಗಮನೆಯಲ್ಲಿ ಆ. 2 ರಂದು ಸಂಜೆ 4.30 ರಿಂದ 5.30 ರವರೆಗೆ ಕಥೆ ಕೇಳೋಣ ಬನ್ನಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಥೆ ಹೇಳುವವರು: ವಿ ಶಿವಶಂಕರ ಶಾಸ್ತ್ರೀ (ವಿಎಸ್‌ಎಸ್ ಶಾಸ್ತ್ರೀ), ವಿಜ್ಞಾನ ಮತ್ತು ಗಣಿತದ ಸಂವಹನಕಾರರು, ಲೇಖಕರು ಹಾಗೂ ಅನುವಾದಕರು, ಕೋಲಾರ. ಹೆಚ್ಚಿನ ಮಾಹಿತಿಗೆ 9243581097, 9945943115 ಸಂಪರ್ಕಿಸಬಹುದು.

ನಾಮಪತ್ರ ಸಲ್ಲಿಕೆ




ಮೈಸೂರು ಜಿಲ್ಲಾ ಛಾಯಾಗ್ರಾಹಕರು ಹಾಗೂ ವಿಡಿಯೋಗ್ರಾಫರ್ಸ್ ಅಸೋಸಿಯೇಷನ್ ನಿರ್ದೇಶಕರ ಚುನಾವಣೆಯ ಆಕಾಂಕ್ಷಿಯಾಗಿ ಮೋಹನ್ ಕುಮಾರ್ ಬುಧವಾರ ನಾಮಪತ್ರ ಸಲ್ಲಿಸಿದರು. ರವಿಶಂಕರ್, ಮಾದೇವ್, ಗಿರಿ, ಮಂಜು, ವಿಜಯ್, ನಿಧಿ, ಮಂಜು, ಶಿವು ಇನ್ನಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾಗಿ ಆಯ್ಕೆ



ಮೈಸೂರು, ಜು.30-ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾಗಿ ಮೈಸೂರು ತಾಲೂಕು ಮಾವಿನಹಳ್ಳಿ ಗ್ರಾಮದ ರವಿ ಅವರನ್ನು ಆಯ್ಕೆ ಮಾಡಲಾಗಿದೆ. ಇವರು ಈ ಹಿಂದೆ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಯಾಗಿ, ಕಾರ್ಮಿಕ ವಿಭಾಗದ ಅಧ್ಯಕ್ಷರಾಗಿ, ಕೆಪಿಸಿಸಿ ಕಾರ್ಮಿಕ ವಿಭಾಗದ ಕಾರ್ಯದರ್ಶಿಯಾಗಿ, ಟಿಎನ್‌ಟಿಸಿ ರಾಜ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

ರಷ್ಯಾದಲ್ಲಿ ಪ್ರಬಲ ಭೂಕಂಪನ: ಜಪಾನ್, ಹವಾಯಿ ದ್ವೀಪಗಳತ್ತ ಸುನಾಮಿ ಅಲೆ ಅಬ್ಬರ



ಟೋಕಿಯೊ, ಜು.30- ರಷ್ಯಾದ ಪೂರ್ವ ಭಾಗದಲ್ಲಿ ಬುಧವಾರ ಪ್ರಬಲ ಭೂಕಂಪನವಾಗಿದ್ದು, ದೂರದ ಜಪಾನ್, ಹವಾಯಿ ದ್ವೀಪಗಳು ಹಾಗೂ ಪೆಸಿಫಿಕ್ ಸಾಗರದಲ್ಲಿ ಸುನಾಮಿ ಅಲೆಗಳು ಕಾಣಿಸಿಕೊಂಡಿವೆ. ಜಪಾನ್‌ನಲ್ಲಿ ಬೆಳಿಗ್ಗೆ 8.25ಕ್ಕೆ ರಿಕ್ಟರ್ ಮಾಪನದಲ್ಲಿ 8ರಷ್ಟು ತೀವ್ರತೆಯ ಭೂಕಂಪನವಾಯಿತು ಎಂದು ಜಪಾನ್ ಹಾಗೂ ಅಮೆರಿಕದ ಭೂಕಂಪನ ವಿಜ್ಞಾನಿಗಳು ಹೇಳಿದ್ದಾರೆ. ನಂತರ, ಕಂಪನದ ತೀವ್ರತೆ 8.8ರಷ್ಟು ದಾಖಲಾಗಿದೆ ಎಂದು ಅಮೆರಿಕದ ಭೂಸರ್ವೇಕ್ಷಣಾ ಇಲಾಖೆ ಹೇಳಿದೆ. ಭೂಕಂಪನವು 20.7 ಕಿ.ಮೀ. ಆಳದಲ್ಲಿ ಸಂಭವಿಸಿದೆ ಎಂದೂ ಇಲಾಖೆ ಹೇಳಿದೆ.

ಭಾರಿ ಪ್ರಮಾಣದ ಹಾನಿಯಾಗಿರುವ ವರದಿಗಳು ಇಲ್ಲ ಎಂದಿರುವ ಅಧಿಕಾರಿಗಳು, ದಿನಪೂರ್ತಿ ಈ ಕಂಪನದ ಪರಿಣಾಮ ಕಂಡುಬಂತು ಎಂದು ಹೇಳಿದ್ದಾರೆ. ಅಲ್ಲದೇ, ಸಮುದ್ರ ತೀರಗಳಿಗೆ ಹೋಗದಂತೆ ಜನರಿಗೆ ಎಚ್ಚರಿಸಿದ್ದಾರೆ.

ರಷ್ಯಾದ ಕಮ್ಚಟ್ಕಾ ಪರ್ಯಾಯ ದ್ವೀಪದ ಸಮೀಪದಲ್ಲಿ ಕಂಪನ ಕೇಂದ್ರವಿದ್ದು, 8.8ರಷ್ಟು ತೀವ್ರತೆ ದಾಖಲಾಗಿದೆ. ಭೂಕಂಪನದಿಂದಾಗಿ ಸಂಭವಿಸಿದ ಅವಘಡಗಳಲ್ಲಿ ಕೆಲವು ಜನರು ಗಾಯಗೊಂಡಿದ್ದಾರೆ ಎಂದು ರಷ್ಯಾ ಅಧಿಕಾರಿಗಳು ತಿಳಿಸಿದ್ದಾರೆ. ಕಮ್ಚಟ್ಕಾ ದ್ವೀಪದಲ್ಲಿ 10-13 ಅಡಿಗಳಷ್ಟು ಎತ್ತರದ ಸುನಾಮಿ ಅಲೆಗಳು ಕಂಡುಬಂದರೆ, ಜಪಾನ್‌ನ ಉತ್ತರದಲ್ಲಿರುವ ಹೊಕ್ಕೈಡೊ ದ್ವೀಪದಲ್ಲಿ ಅಪ್ಪಳಿಸಿದ ಸುನಾಮಿ ಅಲೆಗಳ ಎತ್ತರ 60 ಸೆಂ.ಮೀ.ನಷ್ಟಿತ್ತು. ಅಲಾಸ್ಕ ದ್ವೀಪದ ಅಲ್ಯೂಟಿಯನ್ ದ್ವೀಪಗಳಲ್ಲಿ 1.4 ಅಡಿಗಳಷ್ಟು ಎತ್ತರದ ಅಲೆಗಳು ಕಂಡುಬಂದವು.

ಜಪಾನ್‌ನ ಉತ್ತರ ಭಾಗದಲ್ಲಿ ಭೂಕಂಪನದ ಅನುಭವವಾದ ಕೂಡಲೇ ಗಾಬರಿಗೊಂಡ ಜನರು ಮನೆಗಳಿಂದ ಹೊರಗೆ ಓಡಿಬಂದರು. ಪ್ರಾಕೃತಿಕ ವಿಪತ್ತುಗಳ ಸಂದರ್ಭದಲ್ಲಿ ಆಶ್ರಯ ನೀಡುವುದಕ್ಕಾಗಿ ನಿರ್ಮಿಸಿರುವ ಪರಿಹಾರ ಕೇಂದ್ರಗಳಲ್ಲಿ ಅವರು ಆಶ್ರಯ ಪಡೆದಿದ್ದಾರೆ. ಹವಾಯಿ ದ್ವೀಪದ ರಾಜಧಾನಿ ಹೊನಲುಲುವಿನ ರಸ್ತೆಗಳು, ಹೆದ್ದಾರಿಗಳಲ್ಲಿ ಕಾರುಗಳು ಹಾಗೂ ಇತರ ವಾಹನಗಳು ಸಂಚಾರ ನಿಲ್ಲಿಸಿದ ಕಾರಣ, ದಟ್ಟಣೆ ಕಂಡುಬಂತು.ಕೆನಡಾದ ಪಶ್ಚಿಮ ಕರಾವಳಿ, ಅಮೆರಿಕದ ವಾಷಿಂಗ್ಟನ್ ಹಾಗೂ ಕ್ಯಾಲಿಫೋರ್ನಿಯಾ ರಾಜ್ಯಗಳಲ್ಲಿ ಕೂಡ ಸುನಾಮಿ ಎಚ್ಚರಿಕೆ ನೀಡಲಾಗಿತ್ತು.

ಇದರಿಂದಾಗಿ ಜಪಾನ್‌ನಲ್ಲಿ ದೋಣಿಗಳು, ರೈಲುಗಳ ಸಂಚಾರ ನಿಲ್ಲಿಸಲಾಗಿತ್ತು. ಭೂಕಂಪನದ ಅನುಭವ ಕಂಡುಬಂದ ಪ್ರದೇಶಗಳಲ್ಲಿನ ವಿಮಾನನಿಲ್ದಾಣಗಳನ್ನು ಬಂದ್ ಮಾಡಲಾಗಿತ್ತು. ಕೆಲವೆಡೆ ವಿಮಾನಗಳು ವಿಳಂಬವಾಗಿ ಹಾರಾಟ ಆರಂಭಿಸಿದವು. ಸಮುದ್ರ ತೀರಗಳಿಂದ ದೂರ ಇರುವಂತೆ ಫಿಲಿಪ್ಪೀನ್ಸ್ ಅಧಿಕಾರಿಗಳು ಜನರಿಗೆ ಸಲಹೆ ನೀಡಿದ್ದಾರೆ. ದಕ್ಷಿಣ ಪೆಸಿಫಿಕ್ ದ್ವೀಪದಲ್ಲಿ ಪ್ರಬಲವಾದ ಅಲೆಗಳು ಅಪ್ಪಳಿಸುವ ಸಾಧ್ಯತೆ ಇದೆ ಎಂದು ನ್ಯೂಜಿಲೆಂಡ್ ಅಧಿಕಾರಿಗಳು ಎಚ್ಚರಿಸಿದ್ದಾರೆ. ಸುನಾಮಿ ಅಲೆಗಳ ತೀವ್ರತೆ ಕಡಿಮೆಯಾಗುವವರೆಗೆ ಕರಾವಳಿ ಕಡೆಗೆ ಪ್ರಯಾಣಿಸದಂತೆ ಫಿಜಿ ಸಮೋವಾ ಟೊಂಗಾ ಹಾಗೂ ಸೊಲೊಮನ್ ದ್ವೀಪಗಳ ಅಧಿಕಾರಿಗಳು ಸೂಚಿಸಿದ್ದಾರೆ

ಭಾರತಕ್ಕೆ ಅಪಾಯ ಇಲ್ಲ: ರಷ್ಯಾ ಪೂರ್ವ ಕರಾವಳಿಯಲ್ಲಿ ಸಂಭವಿಸಿರುವ ಭೂಕಂಪನದಿಂದಾಗಿ ಭಾರತದ ಕರಾವಳಿಯಲ್ಲಿ ಸುನಾಮಿಯ ಅಪಾಯ ಇಲ್ಲ ಎಂದು ಭಾರತೀಯ ಸುನಾಮಿ ಮುನ್ಸೂಚನೆ ಕೇಂದ್ರ (ಐಟಿಇಡಬ್ಲುಸಿ) ಬುಧವಾರ ಹೇಳಿದೆ.

ಕೆಂಪೇಗೌಡರ ಪ್ರತಿಮೆಗೆ ಹಾರ ಹಾಕಲು ಹೋದವರ ಮೇಲೆ ಪ್ರಕರಣ ದಾಖಲು


ಒಕ್ಕಲಿಗರ ಸಮುದಾಯದ ಮುಖಂಡರ ವಿರೋಧ; ಪೊಲೀಸ್ ಆಯುಕ್ತರ ಮಧ್ಯಪ್ರವೇಶಕ್ಕೆ ಆಗ್ರಹ

ಗಂಟೆಗಟ್ಟಲೆ ಕಾದರೂ ಬಾರದ ಪೊಲೀಸ್ ಆಯುಕ್ತರು

ಮೈಸೂರು, ಜು.30(ಎಂಕೆ)- ಮೈಸೂರಿನ ಲಲಿತಮಹಲ್ (ಆಲನಹಳ್ಳಿ ಮಾರ್ಗದ ಟಿ.ನರಸೀಪುರ ರಸ್ತೆ) ರಸ್ತೆ ಹಾಗೂ ಟಿ.ನರಸೀಪುರ ರಸ್ತೆ ಜಂಕ್ಷನ್‌ನಲ್ಲಿರುವ ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ಹೂವಿನ ಹಾರ ಹಾಕಲು ತೆರಳಿದ್ದ ಒಕ್ಕಲಿಗ ಮುಖಂಡರ ವಿರುದ್ಧ ಪ್ರಕರಣ ದಾಖಲಿಸಿ, ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಿರುವುದನ್ನು ಖಂಡಿಸಿ ಒಕ್ಕಲಿಗ ಸಮುದಾಯದ ನೂರಾರು ಮುಖಂಡರು ನಗರ ಪೊಲೀಸ್ ಆಯುಕ್ತರ ಕಚೇರಿ ಬಳಿ ಜಮಾಯಿಸಿದ ಘಟನೆ ಬುಧವಾರ ನಡೆಯಿತು.

ಜು.20 ರಂದು ಜಿಪಂ ಮಾಜಿ ಸದಸ್ಯ ಯರಗನಹಳ್ಳಿ ಮಾದೇಗೌಡ, ಒಕ್ಕಲಿಗರ ಸಂಘದ ಮೈಸೂರು ಪೂರ್ವ ವಲಯ ಅಧ್ಯಕ್ಷ ಸುರೇಶ್ ಗೌಡ, ಪ್ರಧಾನ ಕಾರ್ಯದರ್ಶಿ ಶಂಕರ್ ಹಾಗೂ ಖಜಾಂಚಿ ಚಿಕ್ಕೇಗೌಡ, ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಲು ತೆರಳಿದ್ದಾರೆ. ಈ ವೇಳೆ ಅಲ್ಲಿಯೇ ಇದ್ದ ಆಲನಹಳ್ಳಿ ಠಾಣೆ ಪೊಲೀಸರು ಮಾಲಾರ್ಪಣೆ ಮಾಡುವುದನ್ನು ತಡೆದಿದ್ದರಿಂದ ಕೆಲಕಾಲ ಪೊಲೀಸರೊಂದಿಗೆ ವಾಗ್ವಾದ ನಡೆಸಿ ನಂತರ ಸ್ಥಳದಿಂದ ತೆರಳಿದ್ದಾರೆ.

ಈ ಸಂಬಂಧ ಬಿಎನ್‌ಎಸ್‌ಎಸ್ ಕಲಂ 126 ಅಡಿಯಲ್ಲಿ ಪ್ರಕರಣ(ಪಿಎಆರ್ ಸಂ.19/2025) ದಾಖಲಿಸಿರುವ ಆಲನಹಳ್ಳಿ ಪೊಲೀಸ್ ಠಾಣೆ ಪೊಲೀಸರು, ವಿಚಾರಣೆಗೆ ಹಾಜರಾಗುವಂತೆ ನಾಲ್ವರಿಗೆ ಸಮನ್ಸ್ ನೀಡಿದ್ದಾರೆ. ಇದನ್ನು ಪ್ರಶ್ನಿಸಿ ನಗರ ಪೊಲೀಸ್ ಆಯುಕ್ತ ಕಚೇರಿ ಬಳಿ ಜಮಾವಣೆಗೊಂಡ ಒಕ್ಕಲಿಗ ಸಮುದಾಯದ ನೂರಾರು ಮುಖಂಡರು, ಪ್ರತಿಮೆಗೆ ಮಾಲಾರ್ಪಣೆ ಮಾಡಲು ಮುಂದಾಗಿದ್ದಕ್ಕೆ ಕೇಸ್ ದಾಖಲಿಸಿಕೊಂಡು, ವಿಚಾರಣೆಗೆ ಹಾಜರಾಗಿ ಎನ್ನುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.



ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಎದುರು ಒಕ್ಕಲಿಗ ಸಮುದಾಯದ ಮುಖಂಡರು ಜಮಾಯಿಸಿರುವುದು.

ಈಗಾಗಲೇ ಈ ಪ್ರಕರಣ ಸಂಬಂಧ ಜು.20 ರಂದೇ ನಗರ ಪೊಲೀಸ್ ಆಯುಕ್ತರನ್ನು ಭೇಟಿ ಮಾಡಿದ್ದು, ಪ್ರಕರಣ ಕೈ ಬಿಡುವಂತೆ ಮನವಿ ಮಾಡಲಾಗಿತ್ತು. ಆಗ ಆಯುಕ್ತರು ಸಮ್ಮತಿಸಿದ್ದರು. ಆದರೆ, ಈಗ ಏಕಾಏಕಿ ಸಮನ್ಸ್ ನೀಡಿರುವುದು ಸರಿಯಲ್ಲ. ಇದಕ್ಕೆ ನಗರ ಪೊಲೀಸ್ ಆಯುಕ್ತರೇ ಮಧ್ಯಪ್ರವೇಶಿಸಿ, ಪ್ರಕರಣವನ್ನು ಇತ್ಯರ್ಥಗೊಳಿಸಬೇಕು ಎಂದು ಪಟ್ಟು ಹಿಡಿದರು.

ಭೇಟಿಯಾಗದ ಆಯುಕ್ತರು: ಬೆಳಗ್ಗೆ 11.30 ರಿಂದ ಮಧ್ಯಾಹ್ನ 2 ಗಂಟೆಯವರೆಗೂ ಒಕ್ಕಲಿಗ ಸಮುದಾಯದ ಮುಖಂಡರು ನಗರ ಪೊಲೀಸ್ ಆಯುಕ್ತರನ್ನು ಭೇಟಿಯಾಗಲು ಕಾದು ಕುಳಿತಿದ್ದರು. 12ರ ಸುಮಾರಿಗೆ ಬರುವುದಾಗಿ ಹೇಳಿದ್ದ ಆಯುಕ್ತರು ನಂತರ ಭೇಟಿ ಮಾಡಲು ನಿರಾಕರಿಸಿದರು ಎಂದು 'ಮೈಸೂರು ಮಿತ್ರ'ನಿಗೆ ಕೆಲ ಒಕ್ಕಲಿಗ ಮುಖಂಡರು ಮಾಹಿತಿ ನೀಡಿದರು.

ಈ ವೇಳೆ ನಗರ ಪಾಲಿಕೆ ಮಾಜಿ ಸದಸ್ಯರಾದ ಎಸ್‌ಬಿಎಂ ಮಂಜು, ಅಶ್ವಿನಿ ಅನಂತು, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಮಂಜೇಗೌಡ, ಕಾರ್ಯಾಧ್ಯಕ್ಷ ಗಂಗಾಧರ್, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಕಾರ್ಯದರ್ಶಿ ಚೇತನ್, ನಿರ್ದೇಶಕರಾದ ಗುರು, ರವಿ, ಗಿರೀಶ್, ಮೈಸೂರು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಮಹದೇವು, ಉಪಾಧ್ಯಕ್ಷ ಬಿ.ಜೆ.ಶ್ರೀನಿವಾಸ್ ಕಾರ್ಯದರ್ಶಿ ಕೃಷ್ಣ, ನಿರ್ದೇಶಕರಾದ ಬಸವೇಗೌಡ, ಕೆ.ನಾಗರಾಜು ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಡಿ.ರವಿಕುಮಾರ್, ಪುಟ್ಟಸ್ವಾಮಿ, ಸಾತ್ವಿಕ್, ಸತ್ಯ, ಸ್ವಾಮಿ, ಬಿಡರಹಳ್ಳಿ ಸತೀಶ್ ಗೌಡ ಮತ್ತಿತರರಿದ್ದರು.

ಕೆಎಸ್‌ಸಿಎ ಮಹಾರಾಜ ಟ್ರೋಫಿ–2025

ಮೈಸೂರು ವಾರಿಯರ್ಸ್ ಪ್ರತಿಭಾನ್ವೇಷಣೆಯಲ್ಲಿ 184 ಆಟಗಾರರು ಭಾಗಿ



ಮೈಸೂರಿನ ಕೆಎಸ್‌ಸಿಎ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರಿಕೆಟ್ ಸ್ಟೇಡಿಯಂನಲ್ಲಿ ಮೈಸೂರು ವಾರಿಯರ್ಸ್ ತಂಡದಿಂದ ಪ್ರತಿಭಾನ್ವೇಷಣೆ ನಡೆಯಿತು.

ಕರ್ನಾಟಕ ಕ್ರಿಕೆಟ್‌ನ ಈ ಐತಿಹಾಸಿಕ ಪ್ರಯತ್ನಕ್ಕೆ ಬೆಂಬಲವಾಗಿ ನಿಂತಿರುವುದಕ್ಕೆ ನಮಗೆ ಹೆಮ್ಮೆ ಇದೆ. ಮಹಾರಾಣಿ ಟ್ರೋಫಿ ಪಂದ್ಯಾವಳಿಯು ಮಹಿಳಾ ಕ್ರಿಕೆಟ್‌ನ ಸಂಭ್ರಮಾಚರಣೆಯಾಗಿದೆ. ಈ ಪಂದ್ಯಾವಳಿಗಾಗಿ ನಾವು ಅತ್ಯುತ್ತಮ ತಂಡ ರೂಪಿಸಿದ್ದು, ಮೈಸೂರು ವಾರಿಯರ್ಸ್ ತಂಡವು ಯುವ ಪ್ರತಿಭೆಗಳನ್ನು ಬೆಳೆಸಲು ಬದ್ಧವಾಗಿದೆ.

- ಅರ್ಜುನ್ ರಂಗಾ, ಮಾಲೀಕರು, ಮೈಸೂರು ವಾರಿಯರ್ಸ್



ಮಹಾರಾಣಿ ಟ್ರೋಫಿ–2025 ಅಂಗವಾಗಿ ಬೆಂಗಳೂರಿನ ಕೆಎಸ್‌ಸಿಎನಲ್ಲಿ ನಡೆದ ಹರಾಜು ಪ್ರಕ್ರಿಯೆಯಲ್ಲಿ ಮೈಸೂರು ವಾರಿಯರ್ಸ್ ತಂಡದ ಮಾಲೀಕ ಅರ್ಜುನ್ ರಂಗಾ ಮತ್ತಿತರರನ್ನು ಕಾಣಬಹುದು.

ಮೈಸೂರು, ಜು.30(ಎಂಕೆ)– ಕೆಎಸ್‌ಸಿಎ ಮಹಾರಾಜ ಟ್ರೋಫಿ–2025 ಅಂಗವಾಗಿ ಮೈಸೂರು ವಾರಿಯರ್ಸ್ ತಂಡದ ವತಿಯಿಂದ ಹೊಸ ಕ್ರಿಕೆಟರ್‌ಗಳಿಗೆ ಅವಕಾಶ ನೀಡುವ ನಿಟ್ಟಿನಲ್ಲಿ ಬುಧವಾರ ಪ್ರತಿಭಾನ್ವೇಷಣೆ(ಟ್ಯಾಲೆಂಟ್‌ಹಂಟ್) ನಡೆಸಲಾಯಿತು.

ಮೈಸೂರಿನ ಮಾನಸ ಗಂಗೋತ್ರಿ ಆವರಣದಲ್ಲಿ ಕೆಎಸ್‌ಸಿಎ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರಿಕೆಟ್ ಸ್ಟೇಡಿಯಂನಲ್ಲಿ ಹಮ್ಮಿಕೊಂಡಿದ್ದ ಪ್ರತಿಭಾನ್ವೇಷಣೆಯಲ್ಲಿ ಮೈಸೂರು, ಮಡಿಕೇರಿ, ಚಾ.ನಗರ, ಹಾಸನ ಹಾಗೂ ಮಂಡ್ಯ ಜಿಲ್ಲೆಗಳಿಂದ ನೂರಾರು ಯುವ ಕ್ರಿಕೆಟರ್‌ಗಳು ಭಾಗವಹಿಸಿ, ತಮ್ಮ ಕ್ರಿಕೆಟ್ ಕೌಶಲತೆ ಪ್ರದರ್ಶಿಸಿದರು.

53 ಮಂದಿ ಫಾಸ್ಟ್ ಬೌಲರ್ಸ್, 40 ಮಂದಿ ಸ್ಪಿನ್ನರ್ಸ್, 31 ಮಂದಿ ಬ್ಯಾಟ್ಸ್‌ಮನ್, 10 ಮಂದಿ ವಿಕೆಟ್ ಕೀಪರ್ ಹಾಗೂ 50 ಮಂದಿ ಆಲ್‌ರೌಂಡರ್ಸ್ ಸೇರಿ ಒಟ್ಟು 184 ಮಂದಿ ಯುವ ಕ್ರಿಕೆಟರ್‌ಗಳು ಪ್ರತಿಭಾನ್ವೇಷಣೆಯಲ್ಲಿ ಭಾಗವಹಿಸಿ ಗಮನ ಸೆಳೆದರು. ಮೈಸೂರು ವಾರಿಯರ್ಸ್ ತಂಡದ ಮಾಲೀಕರಾದ ಅರ್ಜುನ್ ರಂಗಾ, ಮುಖ್ಯ ಕೋಚ್ ಆರ್.ಮುರುಳಿಧರ್, ಅಸಿಸ್ಟೆಂಟ್ ಕೋಚ್‌ಗಳಾದ ಎಂ.ವಿಜಯ್, ಮಧುಸೂದನ್ ಹಾಗೂ ತಂಡದ ವ್ಯವಸ್ಥಾಪಕ ಎಂ.ಆರ್.ಸುರೇಶ್ ಅವರ ಸಮ್ಮುಖದಲ್ಲಿ ಪ್ರತಿಭಾನ್ವೇಷಣೆ ನಡೆಯಿತು.

ಈ ವೇಳೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಮೈಸೂರು ವಾರಿಯರ್ಸ್ ತಂಡದ ವ್ಯವಸ್ಥಾಪಕ ಎಂ.ಆರ್.ಸುರೇಶ್, ಪ್ರತಿಭಾನ್ವೇಷಣೆಯಲ್ಲಿ 184 ಕ್ರಿಕೆಟರ್‌ಗಳು ಭಾಗವಹಿಸಿದ್ದು, ಆಯ್ಕೆಯಾದ ಹೊಸ ಪ್ರತಿಭೆಗಳನ್ನು ಮೈಸೂರು ವಾರಿಯರ್ಸ್ ಮುಖ್ಯ ತಂಡದ ಮೂಲಕ ಕ್ರೀಡಾಂಗಣಕ್ಕಿಳಿಸಲಿದ್ದು, ಅಂತಿಮವಾಗಿ ಇಬ್ಬರು ಹೊಸ ಪ್ರತಿಭೆಗಳನ್ನು ತಂಡಕ್ಕೆ ಸೇರಿಸಿಕೊಳ್ಳಲಾಗುವುದು ಎಂದು ತಿಳಿಸಿದರು.

ಆ.3 ರಂದು ಬಹಿರಂಗ: ಪ್ರತಿಭಾನ್ವೇಷಣೆ ಹಾಗೂ ಮುಖ್ಯ ತಂಡದೊಂದಿಗೆ ಉತ್ತಮ ಪ್ರದರ್ಶನ ನೀಡಿ ಅಂತಿಮವಾಗಿ ಮೈಸೂರು ವಾರಿಯರ್ಸ್ ತಂಡಕ್ಕೆ ಆಯ್ಕೆಯಾಗುವ ಇಬ್ಬರು ಕ್ರಿಕೆಟರ್‌ಗಳು ಯಾರೆಂಬುದನ್ನು ಆ.3 ರಂದು ಬಹಿರಂಗಪಡಿಸಲಾಗುವುದು ಎಂದು ಮಾಹಿತಿ ನೀಡಿದರು.

ಜು.15 ರಂದು ಬೆಂಗಳೂರಿನಲ್ಲಿ ನಡೆದ ಆಟಗಾರರ ಹರಾಜಿನಲ್ಲಿ ಕರುಣ್ ನಾಯರ್, ಪ್ರಸಿದ್ಧ್ ಕೃಷ್ಣ, ಎಸ್.ಯು. ಕಾರ್ತಿಕ್ ಮತ್ತು ಎಸ್.ಎ.ಕಾರ್ತಿಕ್ ಅವರನ್ನು ಉಳಿಸಿಕೊಂಡಿದ್ದ ಮೈಸೂರು ವಾರಿಯರ್ಸ್, ಇತರ ಆಟಗಾರರನ್ನು ಸಹ ಆಯ್ಕೆ ಮಾಡಿಕೊಂಡಿತು.

ಆ.11 ರಿಂದ ಪಂದ್ಯಾವಳಿ: ಈ ವರ್ಷದ ಕೆಎಸ್‌ಸಿಎ ಮಹಾರಾಜ ಟ್ರೋಫಿ ಆ.11 ರಿಂದ 28 ರವರೆಗೆ ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಪ್ರೇಕ್ಷಕರಿಗೆ ಕ್ರೀಡಾಂಗಣದೊಳಗೆ ಪ್ರವೇಶವಿಲ್ಲ. ಹಾಲಿ ಚಾಂಪಿಯನ್‌ಗಳು ಈ ವರ್ಷದ ತಮ್ಮ ಅಭಿಯಾನವನ್ನು ಆ.11 ರಂದು ಕಳೆದ ವರ್ಷದ ರನ್ನರ್ ಅಪ್ ಬೆಂಗಳೂರು ಬ್ಲಾಸ್ಟರ್ಸ್ ವಿರುದ್ಧ ಆರಂಭಿಸಲಿದ್ದಾರೆ.

ಮೈಸೂರು ವಾರಿಯರ್ಸ್ ತಂಡ ಪ್ರಕಟ...!

ಮೈಸೂರು ವಾರಿಯರ್ಸ್ ತಂಡವು ಚೊಚ್ಚಲ ಮಹಾರಾಣಿ ಟ್ರೋಫಿ ಕೆಎಸ್‌ಸಿಎ–ಟಿ20 ಪಂದ್ಯಾವಳಿಗಾಗಿ ತನ್ನ ಮಹಿಳಾ ಕ್ರಿಕೆಟ್ ಆಟಗಾರರ ತಂಡವನ್ನು ಘೋಷಿಸಿದೆ. ಜು.29ರಂದು ಕೆಎಸ್‌ಸಿಎಯಲ್ಲಿ ನಡೆದ ಹರಾಜು ಪ್ರಕ್ರಿಯೆ ಬಳಿಕ ತಂಡವು ತನ್ನ 16 ಮಂದಿ ಆಟಗಾರರ ಹೆಸರನ್ನು ಘೋಷಿಸಿತು.

ಆ.4 ರಿಂದ 9 ರವರೆಗೆ ಬೆಂಗಳೂರಿನ ಆಲೂರು ಮೈದಾನದಲ್ಲಿ ಮತ್ತು ಆ.10 ರಂದು ಫೈನಲ್ಸ್ ಪಂದ್ಯ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇದೇ ಮೊದಲ ಬಾರಿಗೆ ನಡೆಯಲಿದ್ದು, ಈ ಪಂದ್ಯಾವಳಿಯಲ್ಲಿ ಮೈಸೂರು ವಾರಿಯರ್ಸ್, ಹುಬ್ಬಳ್ಳಿ ಟೈಗರ್ಸ್, ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್, ಮಂಗಳೂರು ಡ್ರಾಗನ್ಸ್ ಮತ್ತು ಶಿವಮೊಗ್ಗ ಲಯನ್ಸ್ ಸೆಣಸಲಿವೆ. ಮಹಾರಾಣಿ ಟ್ರೋಫಿ ಚೊಚ್ಚಲ ಆವೃತ್ತಿಯಲ್ಲಿ ಕರುಣಾ ಜೈನ್ ಮೈಸೂರು ವಾರಿಯರ್ಸ್ ತಂಡದ ಮುಖ್ಯ ತರಬೇತುದಾರರಾಗಿದ್ದು, ಸಹಾಯಕ ಕೋಚ್ ರಜತ್.ಎಸ್, ತಂಡದ ಫಿಸಿಯೋ ಆಗಿ ಮೃದು ಗೌತಮ್, ಸ್ಟ್ರೆಂಥ್ ಆಂಡ್ ಕಂಡಿಷನಿಂಗ್ ತರಬೇತುದಾರರಾಗಿ ಹರ್ಷಿತಾ ಕೃಷ್ಣಸ್ವಾಮಿ ಕಾರ್ಯನಿರ್ವಹಿಸಲಿದ್ದಾರೆ. ಗುರು ಥ್ರೋ ಡೌನ್ ತಜ್ಞರಾಗಿದ್ದು, ಎಂ.ಆರ್.ಸುರೇಶ್ ತಂಡದ ವ್ಯವಸ್ಥಾಪಕರಾಗಿದ್ದಾರೆ.

ಮೈಸೂರು ವಾರಿಯರ್ಸ್ ಮಹಿಳಾ ತಂಡ...

ಶುಭಾ ಸತೀಶ್, ಶಿಶಿರ ಎ.ಗೌಡ, ಸಹನಾ ಎಸ್.ಪವಾರ್, ದೀಕ್ಷಾ ಜೆ ಹೊನ್ನುಶ್ರೀ, ರಚಿತಾ ಹತ್ವಾರ್, ಶ್ರೇಯಾ ಪೋತೆ, ವಂದಿತಾ ಕೆ.ರಾವ್, ರೋಹಿತಾ ಚೌಡ್ರಿ ಪಿ, ಪೂಜಾ ಕುಮಾರಿ ಎಂ, ದಿಶಾ ಕೆ.ವಿ, ತನ್ವಿ ರಾಜ್.ಎಸ್, ಕಿಂಜಲ್ ಬಿ.ಪಟೇಲ್, ಪಟೇಲ್ ಸಿಲ್ಕಿನ್ ಜೀತುಭಾಯ್, ಅಕ್ಷಿನ್ ರೂಹಿ.ಕೆ, ಕುಸುಮಾ ಗೌಡ, ಪ್ರಕೃತಿ ಎನ್.ಜಿ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸೈಯಾರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಜೂನಿಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
ಮಾರೀಚನ್ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ತಲೈವನ್ ತಲೈವಿ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾದೇವ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶಿವಣ್ಣೇಗೌಡರಿಗೆ ಪಿಹೆಚ್.ಡಿ ಪದವಿ



ಮೈಸೂರು, ಜು.30– ಎಸ್.ಜಿ ಶಿವಣ್ಣೇಗೌಡ ಅವರು ಡಾ. ಎಸ್. ಮಡಿಯಲಗನ್ ಅವರ ಮಾರ್ಗದರ್ಶನದಲ್ಲಿ ದೈಹಿಕ ಶಿಕ್ಷಣ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಭವಿಷ್ಯ ನಿಧಿ ಕಚೇರಿಯಲ್ಲಿ ಉದ್ಯೋಗಿಗಳು, ಪಿಂಚಣಿದಾರರ ಕುಂದು–ಕೊರತೆ ಸಭೆ



ಮೈಸೂರಲ್ಲಿ ಉದ್ಯೋಗದಾತರು, ಉದ್ಯೋಗಿಗಳು ಮತ್ತು ಪಿಂಚಣಿದಾರರ ಕುಂದು–ಕೊರತೆಗಳ ಸಭೆ ನಡೆಯಿತು.

ಮೈಸೂರು, ಜು.30(ಎಂಕೆ)– ಮೈಸೂರಿನ ಗಾಯತ್ರಿಪುರಂನಲ್ಲಿರುವ ಕಾರ್ಮಿಕ ಭವಿಷ್ಯ ನಿಧಿ ಪ್ರಾದೇಶಿಕ ಕಚೇರಿ(ಭವಿಷ್ಯ ಭವನ)ಯಲ್ಲಿ ಉದ್ಯೋಗದಾತರು, ಉದ್ಯೋಗಿಗಳು ಮತ್ತು ಪಿಂಚಣಿದಾರರ ಕುಂದು–ಕೊರತೆಗಳ ಸಭೆ ನಡೆಯಿತು.

ಸಭೆಯಲ್ಲಿ ಉದ್ಯೋಗಿಗಳು ಮತ್ತು ಉದ್ಯೋಗದಾತರಿಗೆ ಉದ್ಯೋಗ ಸೃಷ್ಟಿಸಲು ಮತ್ತು ಬೆಂಬಲಿಸಲು ಜಾರಿಯಲ್ಲಿರುವ ಪ್ರಧಾನ ಮಂತ್ರಿ ವಿಕಸಿತ್ ಭಾರತ್ ರೋಜ್‌ಗಾರ್ ಯೋಜನೆ ಕುರಿತು ಮಾಹಿತಿ ನೀಡಲಾಯಿತು. ನಂತರ ಇಪಿಎಫ್‌ಒ ಉದ್ಯೋಗದಾತರು, ಉದ್ಯೋಗಿಗಳು ಮತ್ತು ಪಿಂಚಣಿದಾರರ ಕುಂದು–ಕೊರತೆಗಳನ್ನು ಆಲಿಸಿ ಪರಿಹರಿಸಲಾಯಿತು. ರಾಣೆ(ಮದ್ರಾಸ್) ಪ್ರೈ ಲಿಮಿಟೆಡ್‌ನ ಹೆಚ್‌ಆರ್ ವಿಭಾಗದ ಮುಖ್ಯಸ್ಥ ಸಾಗರ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಇಪಿಎಫ್‌ಒ ಜಿಲ್ಲಾ ನೋಡಲ್ ಅಧಿಕಾರಿ ಆರ್.ವಿ.ವಿಜಯಲಕ್ಷ್ಮಿ, ಎಸ್‌ಎಸ್‌ಎ ಸಂಧ್ಯಾ ಶರ್ಮಾ, ಇಎಸ್‌ಐಸಿ ಶಾಖೆ ವ್ಯವಸ್ಥಾಪಕಿ ವಿಜಯಲಕ್ಷ್ಮಿ, ಪ್ರಾದೇಶಿಕ ಪಿಎಫ್ ಆಯುಕ್ತ ವಿನೀತ್ ಕುಮಾರ್ ಉಪಸ್ಥಿತರಿದ್ದರು.




ಆ.2, ಆದಿಚುಂಚನಗಿರಿ ಒಕ್ಕಲಿಗ ಮಹಿಳಾ ಸಮಾಜದ ವಾರ್ಷಿಕೋತ್ಸವ ಸಮಾರಂಭ

ಮೈಸೂರು, ಜು. 30– ಮೈಸೂರಿನ ಆದಿಚುಂಚನಗಿರಿ ಒಕ್ಕಲಿಗ ಮಹಿಳಾ ಸಮಾಜದ 25ನೇ ವಾರ್ಷಿಕೋತ್ಸವ ಸಮಾರಂಭವನ್ನು ಆ. 2 ರಂದು ಬೆಳಗ್ಗೆ 10.30ಕ್ಕೆ ಆದಿಶಕ್ತಿ ಕಾಳಮ್ಮ ಬಂದಂತಮ್ಮ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಕೆ. ಹರೀಶ್‌ಗೌಡ, ಕೆ. ವಿವೇಕಾನಂದ, ಸಿ.ಎನ್. ಮಂಜೇಗೌಡ, ಮಾಜಿ ಸಂಸದ ಪ್ರತಾಪ್ ಸಿಂಹ, ಶ್ರೀಮತಿ ಲಲಿತಾ ಜಿ.ಟಿ. ದೇವೇಗೌಡ, ಮಾಜಿ ಶಾಸಕ ಎಲ್. ನಾಗೇಂದ್ರ, ಶಿವಣ್ಣ ಮಾಯಸಂದ್ರ, ಡಾ. ಲತಾ ರಾಜಶೇಖರ್, ಜೆ. ಗಂಗಾಧರ್, ಕೆವಿ.ಶ್ರೀ, ಡಾ. ಎಂ.ಬಿ. ಮಂಜೇಗೌಡ ಮತ್ತಿತರರು ಭಾಗವಹಿಸಲಿದ್ದಾರೆ

ಮೈಸೂರಲ್ಲಿ ಡ್ರಗ್ಸ್ ಜಾಲ ಬಯಲು

ಕಠಿಣ ಕ್ರಮಕ್ಕೆ ಆಗ್ರಹಿಸಿ ಎಬಿವಿಪಿ ಪ್ರತಿಭಟನೆ



ಮೈಸೂರಲ್ಲಿ ಡ್ರಗ್ಸ್ ಜಾಲವನ್ನು ಹತ್ತಿಕ್ಕುವಂತೆ ಆಗ್ರಹಿಸಿ ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಎಬಿವಿಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು, ಜು.30(ಎಂಟಿವೈ)– ಮೈಸೂರಿನ ಡ್ರಗ್ಸ್ ತಯಾರಿಕಾ ಘಟಕ ಪತ್ತೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಡ್ರಗ್ಸ್ ಜಾಲವನ್ನು ಬೇರು ಸಹಿತ ಕಿತ್ತು ಹಾಕಲು ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಎಬಿವಿಪಿ ನೇತೃತ್ವದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಇಂದು ಬೆಳಗ್ಗೆ ಪ್ರತಿಭಟನೆ ನಡೆಸಿದ ಎಬಿವಿಪಿ ಕಾರ್ಯಕರ್ತರು, ಡ್ರಗ್ಸ್ ಜಾಲ ಭೇದಿಸಿ, ಮಾದಕ ವಸ್ತುಗಳ ಸೇವನೆಯಿಂದ ಜೀವನ ಹಾಳು ಮಾಡಿಕೊಳ್ಳುತ್ತಿರುವವರನ್ನು ರಕ್ಷಿಸಬೇಕು. ಕಾಲೇಜು ವಿದ್ಯಾರ್ಥಿಗಳಿಗೆ ಡ್ರಗ್ಸ್ ಪೂರೈಸಲಾಗುತ್ತಿದೆ. ಇದರಿಂದ ಹಲವು ವಿದ್ಯಾರ್ಥಿಗಳು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮೈಸೂರಲ್ಲಿ ಪತ್ತೆಯಾದ ಡ್ರಗ್ಸ್ ತಯಾರಿಕಾ ಘಟಕದ ಹಿಂದೆ ಇರುವವರನ್ನು ಪತ್ತೆ ಮಾಡಬೇಕು. ಈ ಜಾಲವನ್ನು ಬಯಲು ಮಾಡಬೇಕು ಎಂದು ಆಗ್ರಹಿಸಿದರು.

ಸುಸಂಸ್ಕೃತ ಜನರಿರುವ ಸ್ವಚ್ಛ ನಗರಿ ಮೈಸೂರಿನಲ್ಲಿ ಡ್ರಗ್ಸ್ ಫ್ಯಾಕ್ಟರಿ ಪತ್ತೆಯಾದದ್ದು ಆತಂಕಕಾರಿ ಸಂಗತಿ. ಮಹಾರಾಷ್ಟ್ರ ಪೊಲೀಸರ ಕಾರ್ಯಾಚರಣೆಯಿಂದಾಗಿ ಮೈಸೂರಿನ ರಿಂಗ್ ರಸ್ತೆಯ ಬಳಿಯಲ್ಲಿ, 390 ಕೋಟಿ ರೂ. ಮೊತ್ತದ ಮಾದಕ ದ್ರವ್ಯ ದಾಸ್ತಾನಿದ್ದ ಡ್ರಗ್ಸ್ ತಯಾರಿಕಾ ಫ್ಯಾಕ್ಟರಿ ಪತ್ತೆ ಹಚ್ಚಲಾಗಿದೆ. ಇಷ್ಟು ದೊಡ್ಡ ಮಟ್ಟದಲ್ಲಿ ಡ್ರಗ್ಸ್ ತಯಾರಿಕೆ ಹಾಗೂ ಮಾರಾಟ ನಡೆಯುತ್ತಿದ್ದರೂ ಪೊಲೀಸ್ ಇಲಾಖೆಗೆ ತಿಳಿಯದೆ ಇದ್ದಿದ್ದು ವೈಫಲ್ಯಕ್ಕೆ ಎತ್ತಿ ಹಿಡಿದ ಕೈಗನ್ನಡಿ. ಈ ಡ್ರಗ್ಸ್ ಫ್ಯಾಕ್ಟರಿ ಪತ್ತೆಯ ನಂತರ ಗೃಹ ಸಚಿವರು ಜಾಣಕುರುಡರಂತೆ ಇದುವರೆಗೂ ಈ ಜಾಲವನ್ನು ಭೇದಿಸದೇ ಇರುವುದು ಗೃಹ ಇಲಾಖೆಯ ತಪ್ಪೆಂದು ಒಪ್ಪಿಕೊಂಡಿದ್ದಾರೆ. ಆದರೆ, ಇತ್ತೀಚೆಗೆ ರಾಜ್ಯದ ಪ್ರಭಾವಿ ಸಚಿವರ ಆಪ್ತರೊಬ್ಬರನ್ನು ಡ್ರಗ್ಸ್ ಪೂರೈಕೆ ಹಾಗೂ ಮಾರಾಟದ ಆರೋಪದ ಮೇಲೆ ಬಂಧಿಸಲಾಗಿದೆ. ಈ ಸಚಿವರ ಪ್ರಭಾವ ಡ್ರಗ್ಸ್ ಪೂರೈಕೆಯ ಜಾಲದ ಹಿಂದಿರುವ ಸಂಶಯವಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಈ ಹಿಂದೆ ಬೆಂಗಳೂರು, ಮಂಗಳೂರಿನಂತಹ ಬೃಹತ್ ನಗರಗಳಲ್ಲಿ ಯಾವ ಅಡ್ಡಿ, ಆತಂಕ ಇಲ್ಲದಂತೆ ಡ್ರಗ್ಸ್ ಮಾಫಿಯಾ ಸಕ್ರಿಯವಾಗಿರುವುದು ಕಂಡುಬಂದಿತ್ತು. ಆದರೆ, ಮೈಸೂರಿನಂತಹ ಸಾಂಸ್ಕೃತಿಕ ಪರಂಪರೆಯ ನಗರದಲ್ಲಿ ಡ್ರಗ್ಸ್ ಮಾಫಿಯ ಸಕ್ರಿಯವಾಗಿರುವುದು ಆತಂಕಕಾರಿ. ಇದು ಅತ್ಯಂತ ಗಂಭೀರ ವಿಷಯವಾಗಿದ್ದು, ಡ್ರಗ್ಸ್, ಇನ್ನಿತರ ಮಾದಕ ವಸ್ತುಗಳ ಪ್ರಭಾವಕ್ಕೊಳಗಾಗಿ ದೇಶದ ಯುವ ಸಮುದಾಯ ಸಾಕಷ್ಟು ನಷ್ಟಕ್ಕೆ ಒಳಗಾಗಿದೆ. ಹೀಗಾಗಿ ರಾಜ್ಯ ಸರ್ಕಾರ ಯುವಜನರು ಹಾಗೂ ಸಮಾಜದ ಹಿತದೃಷ್ಟಿಯಿಂದ ಈ ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಡ್ರಗ್ಸ್ ತಯಾರಿಕೆ ಮತ್ತು ಪೂರೈಕೆ ಜಾಲವನ್ನು ಬೇರು ಮಟ್ಟದಿಂದ ಕಿತ್ತು ಹಾಕಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಯುವನಿಧಿ ಕೌಶಲ ತರಬೇತಿಗಾಗಿ ಉಚಿತ ನೋಂದಣಿ

ಮೈಸೂರು, ಜು.30– ಮೈಸೂರು ಜಿಲ್ಲೆಯ ಯುವನಿಧಿ ಫಲಾನುಭವಿಗಳಿಗೆ ಯುವನಿಧಿ ಭತ್ಯೆಯ ಜೊತೆಗೆ ಹಾಗೂ ಉದ್ಯೋಗ ದೊರಕಿಸಿಕೊಡುವ ನಿಟ್ಟಿನಲ್ಲಿ ಸರ್ಕಾರದ ವತಿಯಿಂದ ಉಚಿತವಾಗಿ ಕೌಶಲ ತರಬೇತಿಯನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ.

ಆದ್ದರಿಂದ ಈಗಾಗಲೇ ಯುವನಿಧಿ ಯೋಜನೆಯಡಿ ನೋಂದಣಿಯಾಗಿರುವ ಫಲಾನುಭವಿಗಳು ತಪ್ಪದೇ ಉದ್ಯೋಗಾಧಾರಿತ ಉಚಿತ ತರಬೇತಿ ಪಡೆಯಲು ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರನ್ನು ಸಂಪರ್ಕಿಸಿ ಮಾಹಿತಿ ಪಡೆದು ಉಚಿತ ಕೌಶಲ ತರಬೇತಿಗಾಗಿ ನೋಂದಣಿ ಮಾಡಿಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿಯವರ ದೂ.ಸಂ: 8861646939 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ಜಿಲ್ಲೆಯ ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಕಾಯಕಯೋಗಿ, ಮಾಜಿ ಸಂಸದರು, ಕೆ.ಪಿ.ಸಿ.ಸಿ. ಕಾರ್ಯಾಧ್ಯಕ್ಷರು,
ಕಾಯಕಯೋಗಿ, ಮಾಜಿ ಸಂಸದರು, ಕೆ.ಪಿ.ಸಿ.ಸಿ. ಕಾರ್ಯಾಧ್ಯಕ್ಷರು,
ದಿ|| ಆರ್. ಧ್ರುವನಾರಾಯಣ ರವರ
ಹುಟ್ಟುಹಬ್ಬದ ಸ್ಮರಣಾರ್ಥವಾಗಿ
64ನೇ ಬೃಹತ್ ಉದ್ಯೋಗ ಮೇಳ
ದಿನಾಂಕ
31-07-2025ರ ಗುರುವಾರ
ಬೆಳಿಗ್ಗೆ 9.00 ರಿಂದ ಸಂಜೆ 5.00 ರವರೆಗೆ
ವಿದ್ಯಾರ್ಥಿಗಳಿಗೆ ಹೊದಿಕೆ ವಿತರಣಾ ಕಾರ್ಯಕ್ರಮ
ಸ್ಥಳ :
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ತಾಲ್ಲೂಕು ಕಛೇರಿ ಹಿಂಭಾಗ, ನಂಜನಗೂಡು
ಕೆ. ಮಾರುತಿ, ಅಧ್ಯಕ್ಷರು,
ಗ್ಯಾರಂಟಿ ಅನುಷ್ಠಾನ ಸಮಿತಿ,
ನಂಜನಗೂಡು ತಾಲ್ಲೂಕು
ಸಿ.ಎಂ. ಶಂಕರ್, ಅಧ್ಯಕ್ಷರು,
ಪಟ್ಟಣ ಬ್ಲಾಕ್ ಕಾಂಗ್ರೆಸ್ ಸಮಿತಿ
ನಂಜನಗೂಡು